ಕಲ್ಯಾಣ ಕಿರಣ

ಂಬರ್,
1996



ಕಲ್ಯಾಣ ಕಿರಣ

ಸಂಪುಟ ೨೬ ಬಸವ ಶಕೆ ೮೬೩ ಆಜೀವ ಸದಸ್ಯತ್ವ ೪೦೦ ರೂ

ಸಂಚಿಕೆ ೩ ಅಕ್ಟೋಬರ-ನವಂಬರ ೧೯೯೬ ವಾರ್ಷಿಕ ಚಂದಾ ೪-೦೦ ರೂ

ಮುಖಪುಟ : ೧೩-೧-೧೯೯೬ ರಂದು ಮಹಾಜಗದ್ಗುರು ಪೀಠವನ್ನು ಅಲಂಕರಿಸಿದ ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು

KALYANA KIRANA- Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgod, Bangalore-560074. Phone : 8437234

★ ಕಲ್ಯಾಣ ಕಿರಣ ★

ಸಂಪುಟ ೨೬ ಬಸವ ಶಕೆ ೮೬೩ ಆಜೀವ ಸದಸ್ಯತ್ವ ೪೦೦ ರೂ

ಸಂಚಿಕೆ ೩ ಅಕ್ಟೋಬರ್-ನವೆಂಬರ ೧೯೯೬ ವಾರ್ಷಿಕ ಚಂದಾ ೪೦ ರೂ

ಶರಣ ಮೇಳಕ್ಕೆ ಆಹ್ವಾನ

ಬಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯು ದಿವ್ಯ ಸ್ಫೂರ್ತಿಯ ಚಿಲುಮೆ ॥ಪಲ್ಲವಿ॥

ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾನವ ಗೈದು ಹರಿಯುತಿಹಳೀ ಕೃಷ್ಣೆ
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿಹಿಡಿದು ॥೧॥

ಕೂಡಲವು ಜೀವಾತ್ಮ ಸಂಗಮವು ಪರಮಾತ್ಮ
ಕೂಡಲ ಸಂಗಮವು ಜೀವ ಶಿವರ್ಯೆಕ್ಯವು
ಬಸವ ಗೀತೆಯ ಸಾರ ಇದುವೇ ಆಗಿಹುದು
ಪರಮಾತ್ಮ ಗುರಿಯೆಡೆಗೆ ಕರೆದೊಯ್ಯುತಿಹುದು ॥೨॥

ಕಲ್ಯಾಣ ಪ್ರಣತೆಯಲಿ ಭಕ್ತಿ ತೈಲವನುಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲಿ ತ್ಯಾಗ ತೈಲವನೆರೆದು
ಬಸವ ಜ್ಯೋತಿಯ ಬೆಳಕ ಜಗಕೆಲ್ಲ ಹಸರಿಸುವಾ ॥೩॥

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥೪॥

-ಜಗದ್ಗುರು ಮಾತೆ ಮಹಾದೇವಿ.

ಮಡಿವಾಳ ಮಾಚಯ್ಯನವರ ವಾಣಿ:

ದಕ್ಷಿಣದ ಕೃಷ್ಣೆಗೆ ಕರೆವರಯ್ಯ, ಜನ ನೆರೆವರಯ್ಯ — ಪದ್ಯ ೭, ಪುಟ ೧೭೩.
ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ । ಅರಿದು ನೋಡುವುದು
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು ॥ — ಪದ್ಯ ೮, ಪುಟ ೧೭೩.
ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು — ಪದ್ಯ ೧೦, ಪುಟ ೧೭೪
ಪರಿಧಾವಿ ಸಂವತ್ಸರ - ಕ್ರಿ.ಶ. ೨೦೩೨

ಶರಣ ಮೇಳಕ್ಕೆ ಸ್ವಾಗತ

ಜನ್ಮ ಭೂಮಿ ಭಾರತ ಧರ್ಮಕ್ಷೇತ್ರ ಸಂಗಮ
ಶರಣ ಮೇಳಕೆ ಬರಲಿರುವ ಶರಣರಿಗೆ ಸ್ವಾಗತ || ಪ||

ಗುರುಗಳಿಗೆ ಸ್ವಾಗತ ಹಿರಿಯರಿಗೆ ಸ್ವಾಗತ
ಕಿರಿಯರಿಗೆ ಸ್ವಾಗತ ಸರ್ವರಿಗೂ ಸ್ವಾಗತ ||ಅ.ಪ.||

ಧರ್ಮ ನೀತಿ ನ್ಯಾಯ ಶಾಂತಿ
ಸಾರುತಿರುವ ಮೇಳವು
ಮನುಜರೆಲ್ಲರೊಂದೆ ಎಂದು
ಆದರಿಸುವ ಮೇಳವು || ಓ ದಿವ್ಯ ಮೇಳವು || ೧||

ಶ್ರೀ ಸಂಗಮೇಶನ ದಿವ್ಯ ತಾಣ ಸಂಗಮ
ಗುರು ಬಸವೇಶನ ಐಕ್ಯ ಕ್ಷೇತ್ರ ಸಂಗಮ
ಮಲಪ್ರಭೆ-ಕೃಷ್ಣೆಯರು ಸೇರುತಿರುವ ಸಂಗಮ
ಮಹಾಮನೆಯ ಹೊಂದಿರುವ ಧರ್ಮಕ್ಷೇತ್ರ ಸಂಗಮ
ಓ ದಿವ್ಯ ಕ್ಷೇತ್ರವು ||೨||

ಬಸವ ಕ್ರಾಂತಿ ದಿವ್ಯ ದಿನದಿ ನಾವು-ನೀವು ಸೇರುವಾ
ಗುರು ಬಸವಣ್ಣನ ಹಿಗ್ಗಿನಿಂದ ಸ್ಮರಿಸುವಾ
ಶರಣ ಧರ್ಮ ಅರಿಯುವ ಶರಣರಾಗಿ ಬೆಳೆಯುವ
ಬಸವ ಕಿರಣವಾಗಿ ನಾವು ಇಲ್ಲಿಂದ ಸಾಗುವಾ ||
ಓ ದಿವ್ಯ ಮೇಳವು, ಓ ದಿವ್ಯ ಮೇಳವು || ೩||

ರಚನೆ : ಜಗದ್ಗುರು ಮಾತೆ ಮಹಾದೇವಿ

ಕಪಿಲ ಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದರೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು.

- ಶಿವಯೋಗಿ ಸಿದ್ಧರಾಮೇಶ್ವರ

||ಓಂ ಶ್ರೀ ಗುರು ಬಸವಲಿಂಗಾಯ ನಮಃ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹತ್ತನೆಯ

ಶರಣ ಮೇಳ

೧೯೯೭ನೆಯ ಜನವರಿ ೧೨,೧೩,೧೪ ಮತ್ತು ೧೫ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ವಗಳಲ್ಲಿ ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲಸಂಗಮದಲ್ಲಿ ೧೯೮೮ನೆಯ ಇಸವಿ ಜನವರಿ ೧೪,೧೫,೧೬ ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿ ನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹತ್ತನೆಯ ಶರಣ ಮೇಳವು ೧೯೯೭ನೇ ಇಸವಿಯ ಜನವರಿ ೧೨,೧೩,೧೪ ಮತ್ತು ೧೫ ರಂದು ಏರ್ಪಾಟಾಗಲಿದೆ. ಹಲವಾರು ಭಕ್ತಿಪೂರ್ಣ ಕಾರ್ಯಕ್ರಮಗಳು, ಜ್ಞಾನಾನುಭವಗೋಷ್ಠಿ, ಪ್ರತಿಜ್ಞಾ ಸ್ವೀಕಾರ, ಉಪನ್ಯಾಸ, ಆಶೀರ್ವಚನಗಳು ನಡೆಯುವುವು. ಮುಸ್ಲೀಮ್ ಧರ್ಮೀಯರಿಗೆ ಮೆಕ್ಕಾ ಧರ್ಮಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಪೂಜಿಸಲು, ಪ್ರಾರ್ಥಿಸಲು, ಗಣಲಿಂಗದ ದರ್ಶನ ಪಡೆಯಲು ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣ ಜೀವಾಳ

ಬೆಂಗಳೂರು ವಿಳಾಸ:
ಬಸವ ಮಂಟಪ, ೨೦೩೫,
೨ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-೫೬೦೦೧೦
ದೂರವಾಣಿ : ೩೩೨೫೩೩೫

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ- ೫೮೭ ೧೧೫
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ STD 08351-74-838

೧೦ನೆಯ ಶರಣ ಮೇಳ ಕಾರ್ಯಕ್ರಮದ ಸ್ಥೂಲ ರೂಪು-ರೇಷೆ

ಭಾನುವಾರ ದಿ. ೧೨-೧-೧೯೯೮ರಂದು

೧. ಬೆಳಿಗ್ಗೆ ೧೦-೩೦ ಗಂಟೆಗೆ ಧ್ವಜಾರೋಹಣದೊಡನೆ ಮಹಾಮನೆ ಮಹಾಮಠದ ಆವರಣದಲ್ಲಿ ಕಾರ್ಯಕ್ರಮ ಆರಂಭ.

ಕೆಲವೊಂದು ಸಾಧಕ ಸಾಧಕಿಯರಿಗೆ ಜಂಗಮ ದೀಕ್ಷೆ

ಬಸವ ಧರ್ಮ ಸಂಸತ್ ಸಭೆ, ಚಿಂತನಗೋಷ್ಠಿ.

೨. ಸಂಜೆ ೫ ಗಂಟೆಗೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ ಪೀಠಾರೋಹಣ, ಜಗದ್ಗುರು ಪೀಠದ ೬ನೆಯ ವಾರ್ಷಿಕೋತ್ಸವ, ಪೂಜ್ಯ ಮಹಾಜಗದ್ಗುರುಗಳಿಗೆ ಸದ್ಭಕ್ತರಿಂದ ಮಾಲಾರ್ಪಣೆ, ಶುಭಾಶಯ ಸಲ್ಲಿಕೆ, ಪೂಜ್ಯರಿಂದ ಆಶೀರ್ವಚನ

(ದಿ.೧೩-೧-೧೯೯೨ರಂದು ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಪ್ರಥಮ ಪೀಠಾಧಿಕಾರಿಯಾಗಿ ಗದ್ದುಗೆಯನ್ನೇರಿದ್ದರಷ್ಟೆ. ಪೂಜ್ಯರು ದಿ.೩೦-೬-೧೯೯೫ ರಂದು ಲಿಂಗೈಕ್ಯರಾದುದರಿಂದ ಅವರ ಸದಿಚ್ಛೆಯಂತೆ ಮಹಿಳಾಜಗದ್ಗುರು ಪೂಜ್ಯಶ್ರೀ ಮಾತೆ ಮಹಾದೇವಿಯವರು ಬಸವ ಧರ್ಮ ಪೀಠದ ಎರಡನೆಯ ಅಧಿಕಾರಿಣಿಯಾಗಿ ದಿ. ೧೩-೧-೧೯೯೬ ರಂದು ಪೀಠಾರೋಹಣ ಮಾಡಿ; ಬಸವ ಧರ್ಮೀಯರಿಗೆ ಅಮೋಘವಾದ ಸಂದೇಶವನ್ನಿತ್ತರಲ್ಲದೆ, ಬಸವಾನುಯಾಯಿಗಳನ್ನು ಸೂಕ್ತವಾಗಿ ಮುನ್ನಡೆಸುತ್ತಿದ್ದಾರೆ.)

ಬಸವೋದ್ಯಾನದ ಮಂಟಪದಲ್ಲಿ

ಸೋಮವಾರ ದಿ.೧೩-೧-೧೯೯೮ ರಂದು

೩. ಶರಣ ಮೇಳ ಪ್ರಾರಂಭೋತ್ಸವ ಬೆಳಿಗೆ ೧೦-೩೦

೪. ಧರ್ಮಚಿಂತನ ಗೋಷ್ಠಿ ಮಧ್ಯಾಹ್ನ ೪-೩೦

೫. ಸಾಂಸ್ಕೃತಿಕ ಕಾರ್ಯಕ್ರಮ ರಾತ್ರಿ ೧೦-೦೦

ಬಸವ ಧರ್ಮ ಸಂಸ್ಥಾಪನಾ ದಿನ
ಮಂಗಳವಾರ ದಿ.೧೪-೧-೧೯೯೮

ಬಸವ ಧರ್ಮ ಸಂಸ್ಥಾಪನಾ ದಿನಾಚರಣೆ ಮತ್ತು ಶಿವಯೋಗಿ ಸಿದ್ಧರಾಮೇಶ್ವರರ ಜಯಂತಿ ಆಚರಣೆ.

೧. ಬೆಳಿಗ್ಗೆ ೮-೩೦ ಮಹಾಮನೆ ಮಹಾಮಠದಲ್ಲಿರುವ ಶ್ರೀ ಬಸವೇಶ್ವರ ಧ್ಯಾನ ಮಂಟಪದಲ್ಲಿ ವಿಶೇಷ ಪೂಜೆ

೨. ಮಹಾಜಗದ್ಗುರುಗಳಿಂದ ''ಬಸವ ಜ್ಯೋತಿ ಉದ್ದೀಪನ''ದೊಡನೆ ಮಂಗಲಾಚರಣೆ

೩. ಧ್ವಜ ವಂದನೆ ಮತ್ತು ಮಹಾಮನೆಯಿಂದ ಸಭಾಮಂಟಪದವರೆಗೆ ಪಾದಯಾತ್ರೆ, ಸಾಮೂಹಿಕ ಪಥ ಸಂಚಲನದೊಡನೆ ಆಗಮನ, ಷಟ್ಕೋನ ಬಸವ ಧ್ವಜ ಆರೋಹಣ

೪. ಬೆಳಿಗ್ಗೆ ೧೧ ಗಂಟೆಗೆ ಸಮುದಾಯ ಪ್ರಾರ್ಥನೆಯ ಉದ್ಘಾಟನೆ ಮತ್ತು ಸಮುದಾಯ ಪ್ರಾರ್ಥನೆ, ನಂತರ ಎಳ್ಳು ಬೆಲ್ಲಗಳ ಪರಸ್ಪರ ವಿತರಣೆ, ಪ್ರತಿಜ್ಞಾ ವಿಧಿ. ಶರಣ ಮೇಳದ ಮುಖ್ಯ ಸಂದೇಶ.

೫. ಮಧ್ಯಾಹ್ನ ೫ರಿಂದ ೯ರ ವರೆಗೆ ತತ್ತ್ವ ಚಿಂತನಗೋಷ್ಠಿ ಮತ್ತು ಸಾಮೂಹಿಕ ಇಷ್ಟಲಿಂಗ ಪೂಜೆ.

೬. ರಾತ್ರಿ ೧೦ ರಿಂದ ಸಾಂಸ್ಕೃತಿಕ ಕಾರ್ಯಕ್ರಮ.

ಬುಧವಾರ ದಿ. ೧೫-೧-೧೯೯೮ರಂದು

೧. ಸುಪ್ರಭಾತದ ೬ ರಿಂದ ಶ್ರೀ ಬಸವೇಶ್ವರ ಪೂಜೆ

೨. ಬೆಳಿಗ್ಗೆ ೧೦ ರಿಂದ ೨ ರವರೆಗೆ ಗುರುದರ್ಶನ, ಶರಣ ಸಮಾಗಮ, ವಿಶೇಷ ಆಟಗಳು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ತತ್ತ್ವಾನುಯಾಯಿಗಳ ಜಾಗತಿಕ ಉತ್ಸವವಾಗುವುದರಿಂದ ಎಲ್ಲೆಡೆಯಿಂದಲೂ ಜನರು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬರುವರು. ಆದ್ದರಿಂದ ಈ ಉತ್ಸವವು ವರ್ಷ ವರ್ಷಕ್ಕೂ ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂಪ್ರೇರಣೆಯ ಕೊಡುಗೆ ನೀಡಿರಿ.

೧. ಮಹಾಪೋಷಕರು ೫೦೦೦ ರೂ. ಮತ್ತು ಮೇಲೆ ಕೊಟ್ಟವರು

೨. ದಾನಿಗಳು ೧೦೦೦ ರೂ. ಮತ್ತು ಮೇಲೆ ಕೊಟ್ಟವರು

೩. ಹಿತೈಷಿಗಳು ೫೦೦ ರೂ.

೪. ಸ್ವಾಗತ ಸಮಿತಿ ಸದಸ್ಯತ್ವ ೧೨೫ ರೂ. ಒಬ್ಬರಿಗೆ ಊಟ ವಸತಿ

೫. ಪ್ರತಿನಿಧಿ ಶುಲ್ಕ ೧೦೦ ರೂ.

ಪ್ರತಿ ವರ್ಷವೂ ತಮ್ಮ ದೇಣಿಗೆಯು ಶರಣ ಮೇಳದಲ್ಲಿ ಸಲ್ಲಬೇಕು ಎನ್ನುವವರು ೫೦೦೦ ರೂ.ಗಳ ನಿಧಿಯನ್ನಿಟ್ಟು, ಆ ಪುದುವಟ್ಟಿನ ಬಡ್ಡಿ ನಿರಂತರವಾಗಿ ಬರುವಂತೆ ವ್ಯವಸ್ಥೆ ಮಾಡಲು ಯೋಜನೆಯಿದೆ. ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ'' ಎಂದು ಬರೆದು ಕೂಡಲ ಸಂಗಮದ ವಿಳಾಸಕ್ಕೆ ಕಳಿಸಬೇಕು. ವಿಳಾಸ ಹಿಂದಿನ ಪುಟದಲ್ಲಿದೆ. State Bank of India, Koodala Sangama ದ ಡ್ರಾಫ್ಟ್‌ಗಳನ್ನೇ ತೆಗೆಸಬೇಕು.

ವಿ.ಸೂ:- ಶರಣ ಮೇಳದಲ್ಲಿ ಭಾಗಿಗಳಾಗುವ ಎಲ್ಲ ಶರಣ ಶರಣೆಯರು ಪವಿತ್ರ ಮೇಲ್ವಸ್ತ್ರ ಸ್ಕಾರ್ಫ್ (ಬೆಲೆ ೧೮ ರೂ.) ಕಡ್ಡಾಯವಾಗಿ ಧರಿಸಬೇಕು. ಶರಣರು ಷಟ್ಕೋನ ಲಾಂಛನವಿರುವ ಟೋಪಿ (ಬೆಲೆ ೧೩ ರೂ.)ಯನ್ನು ಧರಿಸಬೇಕು.

ಬಸವ ಧರ್ಮದ ಮಹಾಜಗದ್ಗುರು ಪೀಠ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಅನೇಕ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾತ್ರಾರ್ಥಿಗಳಿಗಾಗಿ ನಿತ್ಯ ದಾಸೋಹವನ್ನು ನಡೆಸುತ್ತಿದೆ. ಬಂದ ಪ್ರವಾಸಿಗಳು ಉಳಿದುಕೊಳ್ಳಲು ಮೂರು ಅಂತಸ್ತಿನ ಅತಿಥಿ ಗೃಹವನ್ನು ನಿರ್ಮಿಸಿದೆ. ಕೂಡಲಸಂಗಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವನ್ನಾಗಿ ರೂಪಿಸುವ ಯೋಜನೆ ಹೊಂದಿರುವುದೇ ಅಲ್ಲದೆ, ವಿವಿಧ ಭಾಷೆಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುತ್ತಲಿದೆ. ಸಂಗಮ ಕ್ಷೇತ್ರದ ಮಹಾಮನೆ ಆವರಣದಲ್ಲಿ ಧಾರ್ಮಿಕ ಸಾಹಿತ್ಯ, ಶರಣರ ಭಾವಚಿತ್ರ, ಪ್ರವಚನ-ಭಕ್ತಿಗೀತೆಗಳ ಆಡಿಯೋ ಮತ್ತು ವಿಡಿಯೋ ಕೆಸೆಟ್ಟುಗಳನ್ನು ಮಾರಾಟಕ್ಕೆ ಇಡಲು ಏರ್ಪಾಡು ಮಾಡಿದೆ.

"ಬಸವ ವಚನ ದೀಪ್ತಿ" ಕುರಿತು
ಸದ್ಯ ಅಭಿಪ್ರಾಯ ವ್ಯಕ್ತಪಡಿಸುವುದು ಸೂಕ್ತವಲ್ಲ

ಶರಣ ಬಂಧುಗಳೇ,

೧೯೯೩ರಲ್ಲಿ ಆರ್ಡರ್ ಕೊಟ್ಟಿದ್ದ ಶ್ರೀ ಬಸವೇಶ್ವರರ ಅಮೃತ ಶಿಲಾಮೂರ್ತಿಯನ್ನು ತರಲು, ದೆಹಲಿಯಲ್ಲಿ ಒಂದು ಕಾರ್ಯಾಲಯ ತೆರೆಯಲು, ೧೯೯೭ ರಲ್ಲಿ ದೆಹಲಿಯಲ್ಲಿ ಮಾಡಲಾಗುವುದೆಂದು ಘೋಷಿಸಲಾಗಿರುವ ೫ನೆಯ ಬಸವ ಧರ್ಮ ಸಮ್ಮೇಳನದ ಪೂರ್ವಭಾವಿ ಸಿದ್ಧತೆಗೆ ರೂಪುರೇಷೆ ಹಾಕಲು ೨೨-೯-೯೬ ರಿಂದ ೧೪-೧೧-೯೬ ರವರೆಗೆ ನಾನು ಕರ್ನಾಟಕ ರಾಜ್ಯದ ಹೊರಗೆ ಜಯಪುರ-ದೆಹಲಿ ಪ್ರವಾಸ ಕೈಗೊಳ್ಳಬೇಕಾಯಿತು. ಈ ಅವಧಿಯಲ್ಲಿ ಕೆಲವರು 'ಬಸವ ವಚನ ದೀಪ್ತಿ' ಪುಸ್ತಕ ಕುರಿತು ವಿನಾ ಕಾರಣ ತಪ್ಪು ತಿಳುವಳಿಕೆ ಹರಡಿರುವುದು ತಮಗೆ ಗೊತ್ತಷ್ಟೆ?

ತಾವೆಲ್ಲ ಕುತೂಹಲದಿಂದ 'ಬಸವ ವಚನ ದೀಪ್ತಿ' ಕುರಿತು ನಮ್ಮ ನಿಲುವೇನು ಎಂದು ಕಾಯುತ್ತಿರುವುದು ಸಹಜ. ವಿಶ್ವಗುರು ಬಸವಣ್ಣನವರ ೮೦೦ನೆಯ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ ಕುವೆಂಪು ಕಲಾಕ್ಷೇತ್ರದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ದಿ.೧೯-೮-೧೯೯೬ ರಂದು 'ಬಸವ ವಚನ ದೀಪ್ತಿ' ಎಂಬ ಧರ್ಮಪಿತ ಬಸವಣ್ಣನವರ ವಚನಗಳ ಸಂಗ್ರಹವನ್ನು ಪ್ರಕಟಿಸಿ, ಬಿಡುಗಡೆ ಮಾಡಲಾಯಿತು. ಅದರಲ್ಲಿ ಕೆಲವೊಂದು ವಚನಗಳಲ್ಲಿ 'ಕೂಡಲಸಂಗಮದೇವಾ' ಎಂಬ ವಚನಾಂಕಿತದ ಬದಲಿಗೆ 'ದೇವಾ' ಪದವನ್ನು ಹಾಗೆಯೇ ಇರಿಸಿಕೊಂಡು 'ಕೂಡಲ ಸಂಗಮ' ಎಂಬ ಸ್ಥಾನವಾಚಕ ಪದದ ಬದಲಿಗೆ 'ಲಿಂಗ' ಎಂಬ ಪದವಿಟ್ಟು 'ಲಿಂಗದೇವಾ' ಎಂಬ ವಚನ ಮುದ್ರಿಕೆ ಬಳಸಲಾಗಿದೆ. ಪ್ರಸ್ತಾವನೆ/ಮುನ್ನುಡಿಯಲ್ಲಿ ಕಾರಣ ಕೊಡಲಾಗಿದೆಯಾದರೂ ವಿನಾಕಾರಣ ಗೊಂದಲವನ್ನು ಕೆಲವರು ಎಬ್ಬಿಸಿದ್ದಲ್ಲದೆ, ಚಿತ್ರದುರ್ಗದ ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟ್‌ನಲ್ಲಿ ಬಿ.ಎಸ್.ಹಿರೇಮಠ ಎನ್ನುವವರು ಪುಸ್ತಕದ ವಿರುದ್ಧ ದಾವೆಯನ್ನು ಹೂಡಿದ್ದಾರೆ. ಮುನ್ಸೀಫ್ ಆ್ಯಂಡ್ ಮ್ಯಾಜಿಸ್ಟ್ರೇಟ್ ಅವರು ಪ್ರತಿವಾದಿಯು ಹಾಜರಾಗುವ ತನಕ Status Quo ಯಥಾ ಸ್ಥಿತಿ ಕಾಯ್ದುಕೊಳ್ಳಲು ನಿರ್ದೇಶನ ನೀಡಿದ್ದಾರೆ. ನಮ್ಮ ಪರವಾಗಿ ವಕೀಲರು ದಿ. ೨-೧೧-೧೯೯೬ ರಂದು ಹಾಜರು ಆಗಿದ್ದಾರೆ. ಆದ್ದರಿಂದ ಪ್ರಕರಣವು ನ್ಯಾಯಾಲದಲ್ಲಿ ಇರುವುದರಿಂದ ನಾನು 'ಬಸವ ವಚನ ದೀಪ್ತಿ' ಪುಸ್ತಕ ಕುರಿತು ಯಾವುದೇ ಹೇಳಿಕೆ ಕೊಡುವುದು ಸೂಕ್ತವಲ್ಲ ಎಂದು ನಮ್ಮ ವಕೀಲರು ತಿಳಿಸಿರುವ ಕಾರಣ ಈ ಸಂಚಿಕೆಯಲ್ಲಿ ನಾನು ಯಾವ ಅಭಿಪ್ರಾಯವನ್ನೂ ನೀಡುತ್ತಿಲ್ಲ.

ವಾಸ್ತವ್ಯ : ಬೆಂಗಳೂರು
ದಿನಾಂಕ : ೧೯-೧೧-೯೬

ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮದ ಮಹಾಜಗದ್ಗುರು ಪೀಠ
ಕೂಡಲ ಸಂಗಮ

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು - ಮಣ್ಣು - ಇಟ್ಟಿಗೆ - ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ-ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಾಯಿ-ತಂದೆ ಬಯಸರು? ಸೃಷ್ಟಿ ಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ - ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ತ್ವದ ಮುಖ್ಯಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ-ತಿರೋದಾನ ಎಂಬ ಸೃಷ್ಟಿ ಸಂಬಂಧಿಸಿದ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ

ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ, ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು; ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸೆಗಿ ಮೂಢನಂಬಿಕೆ ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟುಹಾಕಿದರು, ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹು ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದ ಗೆಡಿಸಿದ್ದನ್ನು ಕಂಡು ಕಡು ನೊಂದ ಕರ್ತನು, ನನ್ನಲ್ಲಿ ತಮ್ಮ ಅನುಗ್ರಹ ಇಳಿಸಿ, ಸಮಾಜದ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡ.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ.
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಕೂಡಲ ಸಂಗಮದೇವರ ನಿರೂಪಕ್ಕೆ ನಡೆಯಿತು.
ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು.

ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ" ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗವಂತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗವಂತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ. ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗವಂತರಾಗಬೇಕೇ ವಿನಾ, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗವಂತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ-ವಣಕ್ಕೆ ಸೀಮಿತವಾಗದ 'ಗಣಧರ್ಮ' ವಾದ್ದರಿಂದ. ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮಾಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕೂಗಿ ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ
ಆ ಕಾಗೆ ಕೋಳಿಯಿಂದ ಕರಕಷ್ಟ, ಕೂಡಲ ಸಂಗಮದೇವಾ

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ ಸಂಸ್ಕಾರಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯ ವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟ ಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು.

ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತುಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು. ಸಾಮೂಹಿಕ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿ ಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತುಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೇ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮಲ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು.ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯುಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. 'ಗಣ ಮೇಳ' ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ

ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ. ನಮ್ಮ ತತ್ತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ ೧೨ ರಿಂದ ೧೫ ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೆ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ- ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ - ಮಧುವಯ್ಯ ಶೀಲವಂತರು ಮಾಡಿದ ಪ್ರಾಣಾರ್ಪಣೆ ಬಲಿದಾನ ನಿಮ್ಮ ಅಂತಃ ಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನು ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ. ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೊ? ಕೂಡದು ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಬರಿಯುತ್ತಿರುತ್ತಾಳೆ. ಬನ್ನಿ; ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು, ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ, ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ-ಬಸವಣ್ಣ

(ಗ್ರಹಿಸಿದವರು : ಬಸವಾತ್ಮಜೆ ಮಾತಾಜಿ)

ದೆಹಲಿಯಲ್ಲಿ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯದ ಪ್ರಾರಂಭೋತ್ಸವ

ಕೂಡಲ ಸಂಗಮದ ಬಸವ ಧರ್ಮ ಪೀಠದ ಒಂದು ಶಾಖೆಯನ್ನು "ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ" ಎಂಬ ಹೆಸರಿನಿಂದ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಭಾನುವಾರ ದಿ. ೩-೧೧-೧೯೯೬ ರಂದು ಪ್ರಾರಂಭಿಸಲಾಯಿತು. ದೆಹಲಿಯ ಮಹಿಪಾಲಪುರ ಬಡಾವಣೆಯಲ್ಲಿ ಪ್ರಾರಂಭಿಸಲಾದ ಈ ಅಧ್ಯಾತ್ಮ ಕೇಂದ್ರವನ್ನು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ, ದೆಹಲಿಯ ಪೋಲೀಸ್ ಕಮೀಷನರ್ ಶ್ರೀಯುತ ಯು.ಎನ್.ಬಿ.ರಾವ್ ಅವರು ಫಲಕ ಅನಾವರಣ ಮಾಡುವುದರೊಡನೆ ಉದ್ಘಾಟಿಸಿದರು. ಅವರ ಪತ್ನಿ ಶ್ರೀಮತಿ ಛಾಯಾ ರಾವ್ ಅವರು ಬಸವ ಧ್ವಜಾರೋಹಣವನ್ನು ನೆರವೇರಿಸಿದರು.

"ಜಗತ್ತಿಗೆ ಶಾಂತಿ-ಮಾನವೀಯತೆ ಸಮತಾವಾದದ ಸಂದೇಶಗಳು ಅತ್ಯಗತ್ಯವಿದ್ದು, ಇದನ್ನು ನೀಡುವ ಗುರು ಬಸವಣ್ಣನವರ ದಿವ್ಯ ಸಂದೇಶ ಸಾರುವ ಇಂತಹ ಅಧ್ಯಾತ್ಮ ಕೇಂದ್ರಗಳ ಅಗತ್ಯ ಬಹಳವಿದೆ. ನಮ್ಮೆಲ್ಲರ ಸಹಾಯ-ಸಹಕಾರ ಇಂಥ ಕೇಂದ್ರಗಳಿಗಿದೆ." ಎಂದು ಶ್ರೀ ಯು.ಎನ್.ಬಿ.ರಾವ್ ಅವರು ಕೇಂದ್ರವನ್ನು ಉದ್ಘಾಟಿಸಿ ನುಡಿದರು.

"ಎಂಟು ನೂರು ವರ್ಷಗಳ ಹಿಂದೆಯೇ ಪ್ರಗತಿಪರ ದೃಷ್ಟಿಕೋನದಿಂದ ಕೂಡಿದ ಧಾರ್ಮಿಕ ವಿಚಾರಧಾರೆ ನೀಡಿದ ಬಸವಣ್ಣನವರ ಸಂದೇಶ ನಮ್ಮ ರಾಷ್ಟ್ರದ ಜನತೆಗೆ ಮುಟ್ಟಬೇಕಾಗಿದೆ. ಅವರು ಲಿಂಗೈಕ್ಯರಾಗಿ ೮೦೦ ವರ್ಷಗಳು ತುಂಬುತ್ತಿರುವ ಈ ಸನ್ನಿವೇಶದಲ್ಲಿ ವಚನ ಸಾಹಿತ್ಯದ ಸಂದೇಶವನ್ನು ಕನ್ನಡೇತರ ಜನರಿಗೆ ತಲುಪಿಸುವ ಉದ್ದೇಶದಿಂದ ಈ ಕೇಂದ್ರವನ್ನು ಆರಂಭಿಸಲಾಗಿದೆ. ಆ ಮಹಾಗುರುವಿನ ಒಂದು ಸ್ಮಾರಕವನ್ನು ಸಹ ದೆಹಲಿಯಲ್ಲಿ ಮಾಡುವ ಹಂಬಲವಿದೆ. ಇದಕ್ಕೆ ಎಲ್ಲ ಸಹೃದಯರ ಸಹಕಾರ ಅತ್ಯಗತ್ಯ. ಉದಾತ್ತ ಮೌಲ್ಯವಾದ ಧರ್ಮದ ಅಗತ್ಯ ಮಾನವನಿಗೆ ಎಂದಿಗಿಂತಲೂ ಇಂದು ಜಾಸ್ತಿ ಇದೆ. ವಿಜ್ಞಾನದಿಂದ ಮಾನವನ ಭೌತಿಕ ಸಮೃದ್ಧಿ (Material development) ಸಾಧ್ಯವಾದರೆ ಅಧ್ಯಾತ್ಮಜ್ಞಾನದಿಂದ ಮಾನಸಿಕ ಸಂತೃಪ್ತಿ ಸಾಧ್ಯವಾಗುತ್ತದೆ. ಶ್ರೀ ಬಸವೇಶ್ವರರು ಹೊರಗೆಲ್ಲೂ ದೇವರನ್ನರಸದೆ, ಅಂತರಂಗದಲ್ಲೇ ದೇವನನ್ನು ಕಂಡುಕೊಳ್ಳುವ, ದೇಹವನ್ನೇ ದೇವಾಲಯವನ್ನಾಗಿ ಮಾಡಿಕೊಳ್ಳುವ ದಿವ್ಯಜ್ಞಾನವನ್ನು ವಚನಗಳ ಮೂಲಕ ನೀಡಿದ್ದಾರೆ" ಎಂದು ಸನ್ನಿಧಿ ವಹಿಸಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. "೧೯೯೭ ರ ಸೆಪ್ಟಂಬರ ತಿಂಗಳಿನಲ್ಲಿ ನವದೆಹಲಿಯಲ್ಲಿ ಐದನೆಯ ಬಸವ ಧರ್ಮ ಸಮ್ಮೇಳನವು ನಡೆಯಲಿದ್ದು, ಇದರಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯವು ಧ್ಯಾನ-ಪ್ರಾಣಾಯಾಮ-ಯೋಗಾಸನಗಳ ತರಗತಿಗಳನ್ನು ಈ ಕೇಂದ್ರದಲ್ಲಿ ನಡೆಸಲಿದ್ದು, ಇದರ ಸದುಪಯೋಗ ತೆಗೆದುಕೊಳ್ಳಬೇಕು" ಎಂದು ಪೂಜ್ಯ ಮಾತೆ ಮಹಾದೇವಿಯವರು ಕರೆ ನೀಡಿದರು.

(೧೩ ನೇ ಪುಟಕ್ಕೆ ಮುಂದುವರೆದಿದೆ)

ಶರಣ ಬಂಧುಗಳ ಗಮನಕ್ಕೆ

"ಪ್ರತಿಜ್ಞಾ ಗೀತೆ" ಎಂಬ ಒಂದು ಸುಂದರ ಗೀತೆಯನ್ನು ನಾನು ರಚಿಸಿದ್ದು ಅದು ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ತರ್ಜುಮೆಗೊಂಡು ಪ್ರಸಿದ್ಧವಾಗಿದೆ. ಸಂಕಲ್ಪ ಗೀತೆ, 'ಕರ್ತನ ಸೃಷ್ಟಿ' ನಂತರ 'ಹೇ ಶರಣ ಬಂಧುಗಳೇ ಎಂಬ ಧ್ವಜಾರೋಹಣ ಗೀತೆ ಹಾಡುತ್ತೇವೆ. "ಬಸವ ಭಕ್ತರು ನಾವು ಬಸವ ಭಕ್ತರು" ಎಂಬುದು ಪ್ರತಿಜ್ಞಾಗೀತೆ. ಅದು ಅತ್ಯಂತ ಅರ್ಥಗರ್ಭಿತವಾದ ವಾಕ್ಯಗಳಿಂದ ಕೂಡಿ ಬಹಳ ಪರಿಣಾಮಕಾರಿಯೂ, ಸ್ಫೂರ್ತಿ ತುಂಬುವಂತಹದು ಆಗಿದೆ ಎಂಬುದು ನಮಗೆ ನಿಮಗೆ ಎಲ್ಲರಿಗೆ ಮನವರಿಕೆಯಾಗಿದೆ.

ಧರ್ಮಪಿತರು ಹೇಳುತ್ತಾರೆ:

ಮಾತಿನಲ್ಲಿ ಶ್ರೋತೃಸುಖವ ನುಡಿಯಬಹುದಲ್ಲದೆ
ಮಾಡುವ ಕ್ರಿಯೆಯಿಂದ ಭಕ್ತನೆನಿಸಲು ಬಾರದು (ಬ.ವ.ದೀ.೩.೨೧)

ಕೆಲವು ಮಾತುಗಳು ನುಡಿಯಲು, ಹಾಡಲು ಪರಿಣಾಮಕಾರಿಯಾಗಿರುತ್ತವೆ. ನಡೆಯಲು ತುಂಬಾ ಕಠಿಣತಮವಾಗಿರುತ್ತವೆ. ಆದ್ದರಿಂದ "ಬಸವ ವಚನ ದೀಪ್ತಿ"ಯ ಪ್ರಸಂಗದಲ್ಲಿ ಕೆಲವರು ತಳೆದ ನಿಲುವು ಕಂಡಮೇಲೆ ಯಾಂತ್ರಿಕವಾಗಿ ಪ್ರತಿಜ್ಞಾರೂಪದಲ್ಲಿ ಈ ಗೀತೆಯನ್ನು ಎಲ್ಲರೂ ಹಾಡುತ್ತಾರೆ. ತಾವು ಪ್ರತಿಜ್ಞಾಬದ್ಧರಾಗಿರುವುದನ್ನು ಮರೆತು ಬಿಡುತ್ತಾರೆ. ಇದರಿಂದ ನುಡಿ-ನಡೆಯಲ್ಲಿ ಕಂದರವು ಉಂಟಾಗುತ್ತದೆ ಎನ್ನುವ ಭಾವ ಬಂದಿದೆ. ವಿನಾಕಾರಣ ಅವರಿಗೆ ಅರಿಯದೆ ಅವರು ತಪ್ಪು ಮಾಡುವಂತೆ ಆಗುತ್ತದೆ. "ನುಡಿಯಲ್ಲಿ ಎಚ್ಚತ್ತು, ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವೆ ಘಟಸರ್ಪವಯ್ಯ!" ಎಂಬ ಧರ್ಮಪಿತರ ಮಾತು ಈ ಬಗ್ಗೆ ಎಚ್ಚರಿಕೆ ನೀಡುತ್ತದೆ. ಆದ್ದರಿಂದ,

"ಬಸವ ಭಕ್ತರು ನಾನು ಬಸವ ಭಕ್ತರು
ತತ್ತ್ವನಿಷ್ಠರು ನಾವು ತತ್ತ್ವನಿಷ್ಠರು"

ಎಂಬ ವಾಕ್ಯದಲ್ಲಿ ತತ್ತ್ವನಿಷ್ಠರು ಎಂಬ ಪದವನ್ನು ತೆಗೆದು ಬೇರೆ ಏನಾದರೂ ಸೌಮ್ಯವಾದ, ಆಚರಿಸಲು ಸುಲಭವಾದ ಭಾವ ನೀಡುವ ಪದ ಸೇರಿಸುವ ಆಲೋಚನೆ ಬಂದಿದೆ.

ಅದೇ ರೀತಿ, "ಬಸವ ಧರ್ಮ ಪೀಠದ ಆದೇಶದಂತೆ ನಡೆವೆವು" ಎಂಬ ವಾಕ್ಯವನ್ನು ಬದಲಿಸುವ ಆಲೋಚನೆ ಬಂದಿದೆ. ಆದ್ದರಿಂದ ಕಲ್ಯಾಣ ಕಿರಣದ ಓದುಗರು ತಮ್ಮ ಸಲಹೆ ಸೂಚನೆ ನೀಡಲು ಕೋರಲಾಗಿದೆ.

೧. ಈ ಪದ/ವಾಕ್ಯ ಬದಲಿಸುವುದು ಒಳ್ಳೆಯದೊ? ಅಥವಾ ಜನರನ್ನು ಅದರೊಳಗಣ ತಾತ್ವಿಕ ಭಾವ ಅಳವಡಿಸಿಕೊಳ್ಳುವಂತೆ ಗಟ್ಟಿಗೊಳಿಸುವ ತರಬೇತಿ ನೀಡುವುದು ಒಳ್ಳೆಯದೋ?

೨. ಪದ/ವಾಕ್ಯ ಬದಲಿಸುವುದೇ ಸುಲಭದ ಕೆಲಸ ಎನ್ನುವುದಾದರೆ ಯಾವ ಪದವನ್ನು "ತತ್ತ್ವನಿಷ್ಠರು" ಎಂಬುದರ ಬದಲಿಗೆ ಇಡಬಹುದು? "ಬಸವ ಧರ್ಮ ಪೀಠದ ಆದೇಶದಂತೆ ನಡೆವೆವು" ಎಂಬುದರ ಬದಲಿಗೆ ಯಾವ ವಾಕ್ಯ ಇಡಬಹುದು? ಇದನ್ನು ಬರೆದು ಕಳಿಸಿರಿ. ಓದುಗರಿಂದ ಬಂದ ವಾಕ್ಯ/ಪದಗಳಿಂದ ಆಯ್ದು ಮುಂದೆ ಮುದ್ರಿಸಲಾಗುವುದು.

ಪಾದ ನಮಸ್ಕಾರ ನಿಷೇಧದ ಬಗ್ಗೆ ಚಿಂತನಗೋಷ್ಠಿಯಲ್ಲಿ ಚರ್ಚೆ

ದಿ. ೧೩-೧-೧೯೯೬ರಂದು ಬಸವ ಧರ್ಮದ ಮಹಾಜಗದ್ಗುರು ಪೀಠಾರೋಹಣದ ನಂತರ, ಪ್ರಗತಿಪರ ವೈಜ್ಞಾನಿಕ ಯುಗದಲ್ಲಿ ಪಾದಪೂಜೆ/ಪಾದೋದಕ ಸ್ವೀಕಾರ ಅಗತ್ಯವಿದೆಯೆ? ಮತ್ತು ಪಾದ ನಮಸ್ಕಾರ ನಿಷೇಧ ಕುರಿತು ಘೋಷಣೆ ಮಾಡಿದ್ದೆ. ಆ ಬಗ್ಗೆ ಒಂದು ಪುಸ್ತಕ ಸಹ ಬಿಡುಗಡೆ ಮಾಡಲಾಗಿದೆ. ಬೆಲೆ : ೫-೫೦ ಅಂಚೆ ವೆಚ್ಚ ಸೇರಿ.

ನಂತರ ಚರ್ಚೆಮಾಡಲು ಅವಕಾಶ ಸಿಗಲಿಲ್ಲ. ದಿ.೧೨-೧-೯೬ರಂದು ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರ ಸಂಸ್ಮರಣಾ ಕಾರ್ಯಕ್ರಮ ಮತ್ತು ಚಿಂತನಗೋಷ್ಠಿಯ ಕೆಲವು ಕಾರ್ಯಕ್ರಮಗಳಿಗೆ ಸಮಯ ಮುಗಿದು ಹೋಯಿತು. ಆ ನಂತರ ಕೆಲವರು ಪಾದ ನಮಸ್ಕಾರ ಬಿಟ್ಟು "ಶರಣು ಶರಣಾರ್ಥಿ"ಗೆ ಬದ್ಧರಾಗಿದ್ದಾರೆ ಮತ್ತೆ ಕೆಲವರು "ಗುರುವಿಗೆ ಶಿಷ್ಯರು/ಭಕ್ತರು ತೋರಿಸುವ ಕೃತಜ್ಞತೆ ಇದು; ಆದ್ದರಿಂದ ಈ ಪದ್ಧತಿ ಬಿಡಿಸುವುದು ಬೇಡ" ಎನ್ನುತ್ತಿದ್ದಾರೆ. ಆದ್ದರಿಂದ ದಿ.೧೨-೧-೧೯೯೭ರ ಚಿಂತನಗೋಷ್ಠಿಯಲ್ಲಿ ಈ ಬಗ್ಗೆ ಚರ್ಚೆ ಇಟ್ಟು, ಅಭಿಪ್ರಾಯವನ್ನು ಸಂಗ್ರಹಿಸಲಾಗುವುದು. ಅಷ್ಟರಲ್ಲಿ ಪಾದನಮಸ್ಕಾರ ನಿಷೇಧ ಪುಸ್ತಕ ತರಿಸಿಕೊಂಡು ಓದಿ ಸಿದ್ಧರಾಗಿ ಬನ್ನಿರಿ.

- ಮಾತಾಜಿ

(೧೧ ನೇ ಪುಟದಿಂದ)

ವಿಶ್ವ ಸಮತಾಯೋಗಾಶ್ರಮದ ಪೂಜ್ಯ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ, "ಬಸವಣ್ಣನವರ ವಿಚಾರಧಾರೆಯ ಪರಿಚಯ ಕೇವಲ ಒಂದು ವಾರದ ಹಿಂದೆ ನನಗೆ ಉಂಟಾಗಿ, ಅದರ ಆಳ-ಹರಹು ನೋಡಿ ಆಶ್ಚರ್ಯವಾಗಿದೆ. ನಮ್ಮ ಸಂಪೂರ್ಣ ಸಹಕಾರ ಇದಕ್ಕಿದೆ." ಎಂದು ಮಾತನಾಡಿದರು. ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯದ ಸಂಚಾಲಕಿ ಸೋದರಿ ಮಂಗಳಾದೇವಿ ಸ್ವಾಗತಭಾಷಣ ಮಾಡಿದರು. ಶ್ರೀ ಅಣ್ಣಾರಾವ ಗೌಡ ಅವರು ಅತಿಥಿಗಳೆಲ್ಲರ ಪರಿಚಯ ಮಾಡಿದರು. ಬಸವ ಇಂಟರ್‌ನ್ಯಾಷನಲ್‌ದ ಅಧ್ಯಕ್ಷ ಶ್ರೀ ಸಿ.ಆರ್.ಹಿರೇಮಠರು ಅತಿಥಿಗಳಾಗಿ ಮಾತನಾಡಿ, "ಸದಾಕಾಲವೂ ಸಕ್ರಿಯವಾಗಿ ಬಸವ ತತ್ತ್ವ ಪ್ರಚಾರ ಮಾಡುವ ಪೂಜ್ಯ ಮಾತಾಜಿಯವರು ಇಲ್ಲಿ ಒಂದು ಅಧ್ಯಾತ್ಮಿಕ ಕೇಂದ್ರ ತೆರೆದುದು ನಮಗೆ ಅಪಾರ ಸಂತೋಷವನ್ನು ಉಂಟು ಮಾಡಿದೆ" ಎಂದರು. ಸೋಮನಾಥ ಬಿರಾದಾರ ಅವರು ವಂದನಾರ್ಪಣೆ ಮಾಡಿದರು. ಮಂಗಲದೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು.

ವರದಿ : ರಮೇಶ್.ವೀ.ತಳ್ಳಿ
ಬಸವ ಮಂಟಪ, ಬೆಂಗಳೂರು

'ಬಸವ ವಚನ ದೀಪ್ತಿ'
ಬಸವಣ್ಣನವರ ಭಾವನೆಗಳ ಪ್ರತೀಕ

ಕಳೆದ ಅನೇಕ ಶತಶತಮಾನಗಳಿಂದಲೂ ಸಂಪ್ರದಾಯ ಮತ್ತು ತತ್ವಾಧಾರಗಳನ್ನು ಅನುಸರಿಸುವವರ ಮಧ್ಯ ಸ್ಪಷ್ಟ ಗುರುತಿಸಿಕೊಳ್ಳುವ ಕಂದರವಿದ್ದುದು ಇಂದು ಹೊಸದೇನೂ ಅಲ್ಲ.

ಕೆಲವರು ದೇವರನ್ನು ಪೂಜಿಸಿದರೆ ಇನ್ನಿತರರು ಪ್ರವಾದಿಗಳನ್ನು ಆರಾಧಿಸುವರು. ಇಂಥ ಗುಂಪುಗಳು ಎಲ್ಲ ಮುಂದುವರೆದ ಧರ್ಮಗಳಲ್ಲೂ ಉಂಟು.

ಜಗಪೂರ್ಣ ಲಿಂಗಪೂಜಕರೇ ಆಗಿದ್ದರು ಒಂದಾನೊಂದು ಕಾಲದಲ್ಲಿ ಎಂಬ ವಿಶಾಲಧರ್ಮ ತಳಹದಿಯನ್ನು ಹೇಳುತ್ತಲಿರುವ, ಸ್ಥಾವರಲಿಂಗವನ್ನು ಪ್ರತಿಪಾದಿಸುವ ಒಂದು ಗುಂಪು ತಾವೇ ಆ ಧರ್ಮದ ಮೂಲಪುರುಷರೆಂದು, ಅಲ್ಲದೇ ಅವರೆಲ್ಲ ಲಿಂಗದಲ್ಲಿಯೇ ಉದ್ಭವ ಆದರೆಂದು ಹೇಳುತ್ತಲಿರುವುದನ್ನು ತತ್ವಾಧಾರಿಗಳಾದ ಬಸವಣ್ಣನವರು ಬ್ರಹ್ಮಾಂಡ ಸ್ವರೂಪ ಇಷ್ಟಲಿಂಗ ಪೂಜೆಯನ್ನು ಪ್ರತಿಪಾದಿಸಿದ ಪ್ರಥಮ ಮಹಾನುಭಾವ. ಆ ಕಾರಣಕ್ಕಾಗಿಯೇ ಬಸವಣ್ಣನವರ ಜೀವನದಲ್ಲಿ ಮೂರು ಘಟ್ಟಗಳಿವೆ.

ಶೈವ-ಬ್ರಾಹ್ಮಣ ಮನೆತನದ ಬಹುದೇವತೋಪಾಸನೆಯ ಪ್ರಭಾವದ ಬಾಲ್ಯಜೀವನ, ಶೈವ ಅಗ್ರಹಾರ ವಟುಅವಸ್ಥೆಯ ಏಕದೇವತೋಪಾಸನೆಯ 'ಕೂಡಲ ಸಂಗಮ' ದೇವನ ಉಪಾಸನಾಜೀವನ, ಕಲ್ಯಾಣದ 'ಇಷ್ಟಲಿಂಗ' ಬ್ರಹ್ಮಾಂಡ ಸ್ವರೂಪನ ಪ್ರತಿಪಾದನಾ ಘಟ್ಟ.

ಹೀಗಾಗಿ ತಮ್ಮ ಜೀವನ ಚಕ್ರದ ಪ್ರಥಮ, ಮಧ್ಯ, ಉತ್ತರಾರ್ಧ ಜೀವನದ ಬದಲಾವಣೆಯ ಉಪಾಸನಾ ಪದ್ಧತಿಯನ್ನು, ಸಂಪ್ರದಾಯದಿಂದ ತತ್ವಾಧಾರಿತ ಇಷ್ಟಲಿಂಗೋಪಾಸನಾ ಪದ್ಧತಿಯ 'ಲಿಂಗಾಯತ' ಧರ್ಮವನ್ನು ಹುಟ್ಟು ಹಾಕಿದಾಗ ಅವರು ತಮ್ಮ ವಚನಗಳಲ್ಲಿ 'ಲಿಂಗದೇವ' ಶಬ್ದಗಳನ್ನು ಬಳಸಿದ್ದು ಎದ್ದು ಕಾಣುತ್ತದೆ.

ಒಂದು ವೇಳೆ ಬಸವಣ್ಣನವರು ಕ್ಷಿಪ್ರಕ್ರಾಂತಿಯ ನಂತರ ಕೆಲಕಾಲ ಬದುಕಿ ಉಳಿದಿದ್ದರೆ ಒಂದು ಉತ್ಕೃಷ್ಟ 'ಧರ್ಮಗ್ರಂಥ' ಯಾವುದರ ಅನುಪಸ್ಥಿತಿ ಇಂದು ಅವರೇ ಹುಟ್ಟು ಹಾಕಿದ 'ಲಿಂಗಾಯತ ಧರ್ಮ' ವೀರಶೈವ-ಲಿಂಗಾಯತರೆಂದು ವಿಘಟನೆಯ ಅಂಚಿನಲ್ಲಿರುವುದೋ ಹೀಗಾಗುತ್ತಿರಲಿಲ್ಲ.

ಒಂದು ಗುಂಪು, ''ನಂಬರು ನಚ್ಚರು ಬರಿದೆ ಕರೆವರು'' ಎಂಬಂತೆ, ಬಸವಣ್ಣನವರ ಕೇವಲ ಹೆಸರನ್ನು ಹೇಳುತ್ತ, ಅವರ ಭಾವಚಿತ್ರವನ್ನು ಹೊತ್ತ ಬೀದಿ ಕಮಾನುಗಳನ್ನುರುಳಿಸುತ್ತ, ಅವರ ಭಾವಚಿತ್ರ ಹೊಂದಿದ ಮನೆಗಳ ಪ್ರವೇಶ ತಿರಸ್ಕರಿಸುತ್ತ, ಶರಣರ ಅವಹೇಳನ ಕೃತಿ 'ಮಹಾಚೈತ್ರ' ವನ್ನು ಪುರಸ್ಕರಿಸುತ್ತ 'ಲಿಂಗದೇವ' ಮುದ್ರಿಕೆ ಲಿಂಗಾನಂದರಿಗೆ ಗಂಟು ಹಾಕುತ್ತ, 'ಬಸವ ವಚನ ದೀಪ್ತಿ' ಯನ್ನೋದದೆ, ಕೇವಲ ಅಪಪ್ರಚಾರ ಗೈಯುವತ್ತ, ಒಲ್ಲದ ಗಂಡನ ಸಂಟನಂತೆ ಇತ್ತ 'ಬಸವನ ಬಿಡರು ಅತ್ತ ಹಿಡಿಯರು ಎನ್ನುವಂತಾಗಿದೆ. ೧೨ನೇ ಶತಮಾನದ ಬಸವಧರ್ಮ ಪೀಠದ ಶೂನ್ಯ ಪೀಠ ಸಿಂಹಾಸನಾಧೀಶ್ವರರಾದ ಅಲ್ಲಮಪ್ರಭುಗಳ ನಂತರ ಎರಡನೆಯ ಪೀಠಾಧ್ಯಕ್ಷ ಮಹಾ ಜಗದ್ಗುರು ಲಿಂಗಾನಂದರ ನಂತರ ಮೂರನೆಯ ಪೀಠಾಧ್ಯಕ್ಷೆ ಮಹಾ ಜಗದ್ಗುರು ಮಾತೆ ಮಹಾದೇವಿಯವರ ಅಧಿಕಾರಾವಧಿಯಲ್ಲಿ 'ಲಿಂಗಾಯತ' ಧರ್ಮ ತನ್ನ ಸಂಘಟನೆ, ಹಿರಿಮೆ, ಗರಿಮೆಯನ್ನು ಹೊಂದುವುದರಲ್ಲಿ ಎರಡು ಮಾತಿಲ್ಲ ಎಂಬುದೇ ಬಸವಭಕ್ತರ ಅನಿಸಿಕೆ ಮತ್ತು ಕಳಕಳಿ ಕೂಡ.

ಎಸ್.ಎಸ್.ಹಿರಂಡಗಿ
ಕಾರ್ಯಾಧ್ಯಕ್ಷರು, ರಾಷ್ಟ್ರೀಯ ಬಸವ ದಳ, ವಿಜಾಪುರ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

★ ★ ★ ★ ★ ★

ಶರಣ. ಕೊಂಡಾ ಬಸವರಾಜ್
ಸಂಚಾಲಕರು
ವಿಶ್ವಲಿಂಗಾಯತ ಪರಿಷತ್
ಮಹಬೂಬ ನಗರ, ಆಂಧ್ರ ಪ್ರದೇಶ
ದಿ.೧೬-೧೧-೧೯೯೬

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ
ದಿವ್ಯ ಸನ್ನಿಧಿಗೆ ಪಾದ ಪ್ರಣಾಮಗಳು

೧೦ನೆಯ ಶರಣ ಮೇಳದ ರಸೀತಿ ಪುಸ್ತಕ ಬಂದಿದ್ದು, ನಾವುಗಳು ಪ್ರಚಾರ, ದೇಣಿಗೆ ಸಂಗ್ರಹ ಆರಂಭಿಸಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿ ಬರುವ ಸಂಕಲ್ಪ ಮಾಡಿದ್ದೇವೆ.

ಹೈದರಾಬಾದಿನ ಶ್ರೀ ವಿಜಯಕುಮಾರ ಹೆರೂರ ಅವರ ಮಾವನವರಾದ ಶಿವಶ್ರೀ ನಾಗಲಿಂಗ ಶಿವಯೋಗಿಗಳವರಿಂದ ತಾವು ಹೈದರಾಬಾದಿಗೆ ಬಂದು ಸಭೆ ಕರೆದುದು ಇಂದು ತಿಳಿಯಿತು. ಆ ಸನ್ನಿವೇಶದಲ್ಲಿ ಬಸವ ವಚನ ದೀಪ್ತಿ ಕೃತಿಯಲ್ಲಿ ವಚನ ಮುದ್ರಿಕೆ ಕೂಡಲ ಸಂಗಮದೇವಾ ಬದಲು ಲಿಂಗದೇವಾ ಎಂದು ಬದಲಾಯಿಸಿದ ಬಗೆಗೆ ತೀವ್ರ ಚರ್ಚೆಯಾದುದು ತಿಳಿಯಿತು. ಶ್ರೀ ನಾಗಲಿಂಗ ಶಿವಯೋಗಿಗಳು ★ ಈ ಬದಲಾವಣೆ ಅತ್ಯಂತ ಸೂಕ್ತವೆಂದು ಪ್ರಶಂಸಿಸಿದ್ದಾರೆ. ''ಲಿಂಗದೇವಾ'' ಪದಪ್ರಯೋಗ ಅತ್ಯಂತ ಸರಿಯಾದ ವಿಷಯವಾಗಿದ್ದರೂ ಸಮಾಜದಲ್ಲಿಯ ಕೆಲವರು ಅಪಪ್ರಚಾರ ಮಾಡುತ್ತಿದ್ದು ತಾವು ಲೆಕ್ಕಿಸಬಾರದೆಂದು ನಮ್ಮ ವಿನಂತಿ.

ತಾವು ಹೋರಾಟ ಮಾಡಿ 'ಅಂತಿಮರಾಜ' ಎಂಬ ಟಿ.ವಿ.ಸೀರಿಯಲ್ ಪ್ರಸಾರ ನಿಲ್ಲಿಸಿದಿರಿ ಮತ್ತು ಶರಣರೆಲ್ಲರಿಗೂ ನೋವುಂಟು ಮಾಡಿದ ಟೆಕ್ಸ್ಟ್‌ಬುಕ್ ''ಮಹಾಚೈತ್ರ'' ವನ್ನೂ ಪಠ್ಯಕ್ರಮದಿಂದ ವಾಪಸ್ಸು ತೆಗೆದುಕೊಳ್ಳುವಂತೆ ಪ್ರಯತ್ನಿಸಿದಿರಿ. ಅಂಥ ಸಮಯಗಳಲ್ಲಿ ತಮಗೆ ಬೆಂಬಲ ಕೊಡಲಾರದವರು ಈಗ ತಮಗೆ ಪ್ರಶ್ನಿಸುವುದಕ್ಕೆ ಹಕ್ಕೇ ಇಲ್ಲ. ಅಂತಹವರನ್ನು ಎದುರಿಸುವುದರಲ್ಲಿ ನಾವು ಮತ್ತು ನಮ್ಮ ಸಹಚರ ಶರಣರು ತಮ್ಮ ಹಿಂದೆ ಯಾವಾಗಲೂ ಇರುತ್ತೇವೆ.

ಇತೀ ಪ್ರಣಾಮಗಳೊಂದಿಗೆ

ಕೊಂಡಾ ಬಸವರಾಜ್

★ ಶಿವಶ್ರೀ ನಾಗಲಿಂಗ ಶಿವಯೋಗಿಗಳು ತೆಲುಗು ಭಾಷೆಯಲ್ಲಿ ಬಹಳ ಪರಿಣತಿಯುಳ್ಳವರು. ಬಸವಣ್ಣನವರು ಕೊಟ್ಟುದು ''ಲಿಂಗಾಯತ ಧರ್ಮ'' ಎಂದು ಒಪ್ಪಿ, ಈ ಧರ್ಮಕ್ಕೆ ''ಲಿಂಗಾಯತ'' ಪದವೇ ಸೂಕ್ತ ಎಂದು ಪ್ರತಿಪಾದಿಸಿ, 'ವಿಶ್ವ ಲಿಂಗಾಯತ ಪರಿಷತ್' ಸ್ಥಾಪಿಸಿ ಆಂಧ್ರದ ಅನೇಕ ಕಡೆ ಶಾಖೆಗಳನ್ನು ತೆರೆದಿದ್ದಾರೆ. ಚಿಂತನಶೀಲರಾದ ವಿದ್ವಾಂಸರಾಗಿದ್ದಾರೆ.

★★★ ★★★ ★★★

ಪ್ರೊ। ಬಿ.ಎಂ.ಬಿರಾದಾರ
ಪ್ರಾಚಾರ್ಯರು
''ಧರ್ಮಶ್ರೀ'' ಕಲ್ಯಾಣ ನಗರ
ಸಿಂದಗಿ- ೫೮೬ ೧೨೮

ಪರಮಪೂಜ್ಯ ಮಾತಾಜಿ ಅವರಿಗೆ ನಮಸ್ಕಾರಗಳು,

ತಮ್ಮ ''ಬಸವ ವಚನ ದೀಪ್ತಿ''ಯ ಬಗೆಗೆ ಬಂದ ಪ್ರತಿಕ್ರಿಯೆಗಳನ್ನು ಓದಿದೆ. ಅವುಗಳಲ್ಲಿ ಮೂರು ವಿಧ. ಒಂದು ಬಸವಣ್ಣನ ಅಂತರಂಗ ಹಾಗೂ ಬಹಿರಂಗ ವೈರಿಗಳ ಸಾಂಪ್ರದಾಯಿಕಗಳ ಅಟ್ಟಹಾಸ. ಎರಡನೆಯದು, ಬಸವಣ್ಣನವರ ಬಗೆಗೆ ಅಭಿಮಾನವಿದ್ದರೂ ತಮ್ಮ ನೇತೃತ್ವವನ್ನು ಸಹಿಸದವರ ಅಸೂಯೆಯ ಅಭಿವ್ಯಕ್ತತೆ. ಇನ್ನು ಮೂರನೆಯದು, ತಮ್ಮ ಸಂಘಟನೆಯ ಭಾಗವಾಗಿಯೇ ಬೆಳೆದು ಪ್ರಸ್ತುತ ಸನ್ನಿವೇಶವನ್ನು ತಪ್ಪಾಗಿ ಗ್ರಹಿಸಿದ ಮುಗ್ಧರು. ಮೊದಲನೆಯದು ಮುಳುಗುತ್ತಿರುವ ಹಡಗದಲ್ಲಿರುವವರ ಅಟ್ಟಹಾಸ ಮಾತ್ರ. ಎರಡನೆಯದು, ಅಸೂಯೆಯ ಅಭಿವ್ಯಕ್ತತೆಯನ್ನು ಪ್ರತಿನಿಧಿಸುವ ಗುಂಪನ್ನು ಕಾಲವೇ ಸರಿಪಡಿಸಬಲ್ಲದು. ಮೂರನೆಯದು, ಕೌಟುಂಬಿಕ ಭೇದದಂತಿದ್ದರೂ ಅಲಕ್ಷಿಸುವಂತಿಲ್ಲ. ಇದರ ದುರುಪಯೋಗವನ್ನು ಪಡೆಯುವ ದುಷ್ಟರಿದ್ದಾರೆ. ಕಾರಣ ಕೂಡಲೇ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿರಿ. ತಮ್ಮ ನೇತೃತ್ವದಲ್ಲಿಯೇ ಸಂಘಟಿತವಾದ ಬಸವದಳ ಅಭಾದಿತವಾಗಿ ಮುಂದುವರಿಯಲಿ. ಆಕಸ್ಮಿಕವಾಗಿ ಇದು ದುರ್ಬಲಗೊಂಡರೆ ಅದು ತಮ್ಮ ತಪ್ಪಾಗದು. ಅದು ಸಮಸ್ತ ಬಸವಾಭಿಮಾನಿಗಳ ಕರ್ತವ್ಯ ಚ್ಯುತಿಯಾಗಿ ಇತಿಹಾಸದಲ್ಲಿ ಒಂದು ಕಪ್ಪುಚುಕ್ಕೆಯಾಗಿ ಉಳಿಯುತ್ತದೆ. ಮುಂದಿನ ತಲೆಮಾರಿನವರು ನಮ್ಮನ್ನು ಶಪಿಸದೇ ಇರಲಾರರು. ಅದು ಹಾಗಾಗದಂತೆ ತಾವು ವಿನೂತನ ಚಿಕಿತ್ಸೆ ನೀಡುವಿರೆಂದು ಆಶಿಸುವೆ. ಇದು ನಮಗಾಗಿ ಆಗಬೇಕಾದದ್ದು. ಬಸವ ಭಕ್ತರು ವಿಭಿನ್ನ ಹಳ್ಳಗಳಾಗಿ ಹರಿಯದೇ ತಮ್ಮ ನೇತೃತ್ವದ ನದಿಯಲ್ಲಿ ಒಂದಾಗಿ ಹರಿದು ಬಸವಸಾಗರದಲ್ಲಿ ಸಂಗಮಿಸಲಿ ಎಂದು ಪ್ರಾರ್ಥಿಸುವೆ.

''ಮಹಾಚೈತ್ರ''ದ ಕಿಚ್ಚಿನಲ್ಲಿ ಕಾಸಿಕೊಂಡವರು, ಕುಂಭಕರ್ಣ ನಿದ್ರೆಯಲ್ಲಿದ್ದವರು ಬಸವೇಶ್ವ ರ ವಿಶ್ವವಿದ್ಯಾಲಯಕ್ಕಾಗಿ ನಡೆದ ಹೋರಾಟದಲ್ಲಿ ಹಿಂದಿನಿಂದ ಕಾಲು ಜಗ್ಗಿದವರು ಇಂದು ಉಗ್ಘಡಿಸಿದ್ದಾರೆ. ಅದಕ್ಕಾಗಿ ನಾವು ಅಧೀರರಾಗಬೇಕಿಲ್ಲ. ಇದನ್ನೇ ನೆಪಮಾಡಿಕೊಂಡು ಕೂಡಲಸಂಗಮದಲ್ಲಿ ನಡೆಯುವ ಶರಣಮೇಳಕ್ಕೂ ಅಡ್ಡಿಯಾಗುವವರಿದ್ದಾರೆ. ಈಗಾಗಲೇ ಅಡ್ಡಿಪಡಿಸಿದವರು ಏನನ್ನೂ ಸಾಧಿಸಲಾಗಿಲ್ಲ. ಇವರೂ ಏನನ್ನೂ ಸಾಧಿಸಲಾರರು. ಇರಲಿ, ಪ್ರಸ್ತುತ ಸನ್ನಿವೇಶವು ತಮಗೆ ವಿಶ್ವಾಸಿಕರನ್ನು ಗುರುತಿಸಿಕೊಳ್ಳುವ ಅವಕಾಶ ನೀಡಿದೆ. ಅದನ್ನು ಸಂಘಟನೆಯ ಬಲವರ್ಧನೆಗಾಗಿ ಬಳಸಿಕೊಳ್ಳಬಹುದು. ತಮ್ಮ ಬೆಂಬಲಕ್ಕೆ ಲಕ್ಷೋಪಲಕ್ಷ ಬಸವ ಭಕ್ತರಿದ್ದಾರೆ. ತಾವು ಹಮ್ಮಿಕೊಂಡ ಯಾವತ್ತೂ ಕಾರ್ಯಕ್ರಮಗಳನ್ನು ಮುನ್ನಡೆಸಿರಿ.

ಇಂತಿ ನಮಸ್ಕಾರಗಳು

ಸಿಂದಗಿ
೧೨-೧೧-೧೯೯೬

ತಮ್ಮ ಸೇವಾಕಾಂಕ್ಷಿ
ಬಿ.ಎಂ.ಬಿರಾದಾರ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ತಾ ॥ 26- 10- 1996

''ಬಸವ ವಚನ ದೀಪ್ತಿ''ಗೆ ಮಠಾಧೀಶರು ವಿರೋಧಿಸುತ್ತಿರುವುದೇಕೆ . . . . ?

- ಹೆಚ್.ಎ. ಶರಣಪ್ಪ

ಮಹಾಮಹಿಮ ಸಂಗನ ಬಸವಣ್ಣ
ಎನಗೆಯು ಗುರು, ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರಾ.

ವಿಷಯ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಕಟಿಸಿದ ''ಬಸವ ವಚನ ದೀಪ್ತಿ'' ಪುಸ್ತಕದ ಬಗ್ಗೆ ಪೂಜ್ಯ ಶ್ರೀ ಪಂಡಿತಾರಾಧ್ಯಸ್ವಾಮಿಗಳು, ಸಿರಿಗೆರೆ. ಪೂಜ್ಯ ಶ್ರೀ ಶಿವಮೂರ್ತಿ ಸ್ವಾಮಿಗಳು ಚಿತ್ರದುರ್ಗ ಮತ್ತು ಇತರ ಸ್ವಾಮಿಗಳು ಹಾಗೂ ಸಾಹಿತಿ ಶ್ರೀ ಗೊ.ರು. ಚನ್ನಬಸಪ್ಪ ಮತ್ತು ಇತರರು ಪುಸ್ತಕದ ಬಗ್ಗೆ ತಮ್ಮ ತಮ್ಮ ವಿಚಾರಧಾರೆಯನ್ನು ಪತ್ರಿಕೆಗಳ ಮುಖಾಂತರ ಪ್ರಕಟಿಸಿರುವ ಬಗ್ಗೆ ನನ್ನ ಅನಿಸಿಕೆಗಳು.

(1) ಪೂಜ್ಯ ಶ್ರೀ ಪಂಡಿತಾರಾಧ್ಯರು, ಬೃಹನ್ಮಠ ಸಿರಿಗೆರೆ : ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಸಿರಿಗೆರೆ ಇವರು ತಾ॥ 4- 10- 1996ರ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ''ಜನಮನ'' ವಿಭಾಗದಲ್ಲಿ ಬಸವಣ್ಣನವರ ವಚನಗಳಿಗೆ ''ಮಾತಾಜಿಯವರ ಶಸ್ತ್ರಚಿಕಿತ್ಸೆ'' ಎನ್ನುವ ಶಿರೋನಾಮೆಯಲ್ಲಿ ಪೂಜ್ಯ ಮಾತಾಜಿಯವರು ಇತ್ತೀಚಿಗೆ ''ಬಸವ ವಚನದೀಪ್ತಿ'' ಪುಸ್ತಕ ಬಿಡುಗಡೆ ಮಾಡಿರುವುದರ ಬಗ್ಗೆ ತಮ್ಮ ಪ್ರತಿಕ್ರಿಯೆಗಳನ್ನು ಪ್ರಟಿಸಿದ್ದಾರೆ. ನನ್ನ ಕೆಲವು ಅನಿಸಿಕೆಗಳನ್ನು ಈ ಮೂಲಕ ಸಂಬಂಧಪಟ್ಟವರ ಗಮನಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಪಂಡಿತಾರಾಧ್ಯರು ಉಪಯೋಗಿಸಿರುವ ಭಾಷೆ ಬಹಳ ಕೆಳಮಟ್ಟದ್ದು; ತಾವು ಒಬ್ಬ ಮಠಾಧ್ಯಕ್ಷರಾಗಿ ಒಬ್ಬ ಜಗದ್ಗುರುವಿಗೆ ಕೊಡುವ ಗೌರವವನ್ನೂ ಅವರು ಕೊಟ್ಟಿಲ್ಲ. ತಾವು ಪಂಡಿತಾರಾಧ್ಯರು ಎಂಬ ಹೆಸರಿಟ್ಟುಕೊಂಡಾಕ್ಷಣ ಅವರು ಮಹಾಪಂಡಿತರೆಂದು ಭಾವಿಸಿದಂತೆ ಬರವಣಿಗೆಯ ಶೈಲಿಯಿಂದ ತಿಳಿಯುತ್ತದೆ. ಗುರು ಸ್ಥಾನದಲ್ಲಿರುವವರಿಗೆ ಭಾಷೆಯಲ್ಲಿ ಕಡಿವಾಣವಿರಬೇಕು. ಮನಬಂದಂತೆ ತಮ್ಮ ದ್ವೇಷಾಸೂಯೆಗಳನ್ನು ಬರವಣಿಗೆಯಲ್ಲಿ ತೋರಿಸಬಾರದು. ಬಸವಣಿಗೆಯಲ್ಲಿ ಹೃದಯವಂತಿಕೆ ಇರಬೇಕು. ಇವರ ದೋಷಾರೋಪಣೆಗಳನ್ನು ಒಂದೊಂದು ವಿಷಯದ ಬಗ್ಗೆ ಚರ್ಚಿಸ ಬಯಸುತ್ತೇನೆ. ಪೂಜ್ಯ ಮಾತಾಜಿಯವರು ಈ ರೀತಿ ಮಾಡಲು ಕಾರಣಗಳೇನಿರಬಹುದು ಇದರ ಬಗ್ಗೆ ಸ್ವಲ್ಪವೂ ಚಿಂತೆ ಹರಿಸಿಲ್ಲ. ಪೂಜ್ಯಮಾತಾಜಿಯವರನ್ನು ತೆಗಳುವುದೊಂದೇ ಉದ್ದೇಶವಿದ್ದಂತೆ ಕಾಣುತ್ತದೆ. ನನಗೆ ಪೂಜ್ಯ ಮಾತಾಜಿಯವರ ಬಹಳ ಹತ್ತಿರದ ಸಂಪರ್ಕ ಈಗ 25- 30 ವರ್ಷಗಳಿಂದ ಇದೆ. ಅವರ ಒಂದೊಂದು ರೋಮವೂ ಒಂದೊಂದು ರಕ್ತಕಣವೂ ಶ್ರೀ ಗುರುಬಸವಣ್ಣನವರಿಗೆ ಮತ್ತು ಅವರ ತತ್ವಪ್ರತಿಪಾದನೆಗಳಿಗೆ ಮುಡುಪಾಗಿವೆ. ಅವರು ತಮ್ಮನ್ನು ಶ್ರೀಗುರು ಬಸವಣ್ಣನವರಿಗೆ ಅರ್ಪಿಸಿಕೊಂಡಂದಿನಿಂದ ಎಂದೂ ದ್ರೋಹ ಬಗೆದಿಲ್ಲ ಬಗೆಯುವುದಿಲ್ಲ. ಇದು ಜನ ಸಾಮಾನ್ಯರಿಗೆ ತಿಳಿದಿರುವ ವಿಚಾರ. ಆದರೆ ಕೆಲವು ಮಠಾಧಿಪತಿಗಳಿಗೆ ಮಾತ್ರ ಇವರ ಬಗ್ಗೆ

ದ್ವೇಷಾಸೂಯೆಗಳು ತುಂಬಿ ತುಳುಕುತ್ತಿವೆ. ಕಾರಣ ಒಬ್ಬ ಹೆಣ್ಣುಮಗಳು ಮನೆ ತೊರೆದು ಸನ್ಯಾಸಿನಿ ದೀಕ್ಷೆಪಡೆದು ಸಮಾಜದ ಏಳಿಗೆಗೆ ತಮ್ಮ ಜೀವನವನ್ನು ಪಣ ತೊಟ್ಟು ಬಸವತತ್ವ ಪ್ರಚಾರದಲ್ಲಿ ತೊಡಗಿದ್ದಾರೆ. ಇದು ಅವರು ಕೈಕೊಂಡ ಪ್ರತಿಜ್ಞೆ. ಪ್ರವಚನಗಳ ಮುಖಾಂತರ, ಸಾಹಿತ್ಯದ ಮುಖಾಂತರ ಜನಮನವನ್ನು ಗೆದ್ದಿದ್ದಾರೆ. ಮನೆ ಮನೆಗೂ ಸಾಹಿತ್ಯವನ್ನು ಮುಟ್ಟಿಸಿ ಮನ ಮನಕ್ಕೂ ಬಸವ ತತ್ವಗಳನ್ನು ಬಿತ್ತಿದ್ದಾರೆ. ಆದರೆ ಕೆಲವು ಮಠಾಧಿಕಾರಿಗಳು ಮಠಗಳ ಒಡೆಯರಾಗಿ ತಮ್ಮ ಜಾತಿಯ ಜನರನ್ನು ಒಂದು ಅಸ್ತ್ರವನ್ನಾಗಿ ಮಾಡಿಕೊಂಡು ಅವರನ್ನು ಇದ್ದಲ್ಲಿಯೇ ಇರುವಂತೆ ಮಾಡಿ ತಮ್ಮ ಪಾದಗಳಿಗೆ ಬೀಳಿಸಿಕೊಂಡು ಅವರಿಂದ ಬಂದ ಕಾಣಿಕೆಗಳನ್ನು ಸಂಗ್ರಹಿಸಿ ತಮ್ಮದೇ ಆದ ಲೋಕದಲ್ಲಿ ಮೆರೆಯುತ್ತಿದ್ದಾರೆ. ಅವರ ಭಕ್ತರಿಗೆ ಸರಿಯಾದ ಜ್ಞಾನಾರ್ಜನೆಯನ್ನು ಮಾಡಿಲ್ಲ. ತಮ್ಮ ಶಿಷ್ಯವರ್ಗಕ್ಕೆ ಬಸವಾದಿ ಶರಣರ ಪ್ರಗತಿಪರ ವಿಚಾರಗಳನ್ನು ತಿಳಿಸದೇ ಅವರನ್ನು ಅಜ್ಞಾನದ ಕೂಪದಲ್ಲಿಯೇ ಇಟ್ಟು ಅದರ ಲಾಭಪಡೆದುಕೊಂಡು ತಮ್ಮ ಸ್ಥಿರತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಇದರ ಜೊತೆಗೆ ಬೇಕಾದಷ್ಟು ಆಸ್ತಿ ಮಾಡಿ ಕಾಲೇಜುಗಳ ಹೆಸರಿನಲ್ಲಿ ಜನರನ್ನು ವಂಚಿಸಿ ಹಣವಸೂಲಿ ಮಾಡಿ ತಮ್ಮ ಸಾಮ್ರಾಜ್ಯ ಹೆಚ್ಚಿಸಿಕೊಂಡು ಹೋಗುತ್ತಲೇ ಇದ್ದಾರೆ. ಕೆಲವು ಮದುವೆ ಸಮಾರಂಭಗಳಲ್ಲಿ ಮತ್ತು ವರ್ಷಕ್ಕೊಂದೆರಡು ಬಾರಿ ಕೆಲ ವೇದಿಕೆಗಳನ್ನು ಸೃಷ್ಟಿಸಿ ಒಂದೆರಡು ವಚನಗಳನ್ನು ಜನರಿಗೆ ರಂಜಿಸುವಂತೆ ಹೇಳಿ ಚಪ್ಪಾಳೆ ತಟ್ಟಿಸಿಕೊಳ್ಳುವುದರಲ್ಲಿ ತೃಪ್ತಿಪಡುತ್ತಾ ಬಂದಿದ್ದಾ[ರೆ]. ಯಾವುದೋ ಒಂದು ಸಮಾರಂಭದಲ್ಲಿ ಜನರನ್ನು ಸಂತೃಪ್ತಿಪಡಿಸಿದರೆ ತತ್ವ ಜನಮನ ಮುಟ್ಟುವುದಿಲ್ಲ. ಇದಕ್ಕೆ ದಿನನಿತ್ಯ ವ್ಯವಸಾಯ ಮಾಡಬೇಕು; ತಿಂಗಳು ಗಟ್ಟಲೆ ಪ್ರವಚನ ಮಾಡಬೇಕು. ಸಾಹಿತ್ಯ ಮನೆ ಮನೆಗೂ ಮುಟ್ಟಬೇಕು. ಅದುಬಿಟ್ಟು ಜನರನ್ನು ತಮ್ಮ ಮಠದ ಉದ್ಧಾರಕ್ಕೆ ಉಪಯೋಗಿಸಿಕೊಂಡು ಅವರು ಇದ್ದಲ್ಲಿಯೇ ಇರುವಂತೆ ಮಾಡುತ್ತಿದ್ದಾರೆ. ಭಕ್ತರನ್ನು ಶ್ರೀ ಗುರು ಬಸವಣ್ಣನವರ ಕಡೆಗೆ ತೆಗೆದುಕೊಂಡುಹೋಗುವ ಬದಲು ಅವರವರ ಮಠದಕಡೆ ಕೊಂಡೊಯ್ಯುತ್ತಿದ್ದಾರೆ. ಹೀಗಾಗಿ ಒಂದೊಂದು ಮಠವನ್ನು ಒಂದೊಂದು ಉಪ ಜಾತಿ ಮಠಗಳೆಂದು ಕರೆಯಬಹುದೇ ವಿನಾಃ ಶ್ರೀ ಗುರುಬಸವಣ್ಣನವರ ಅನುಯಾಯಿಗ್ಳೆಂದು ಹೇಳುವ ಭಕ್ತರೇ ಇಲ್ಲದಂತಾಗಿದೆ. ಇಂತಹ ಸನ್ನಿವೇಶದಲ್ಲಿ ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರು ಏಕ ಗುರುವೋಪಾಸನೆ ಮತ್ತು ಏಕದೇವೋಪಾಸನೆ ತತ್ವಗಳನ್ನು ಪ್ರತಿಪಾದಿಸುತ್ತಾ ಸಮಸ್ತ ಭಕ್ತರನ್ನು ಶ್ರೀಗುರುಬಸವಣ್ಣನವರ ಕಡೆ ಕರೆದುಕೊಂಡು ಹೋಗುತ್ತಿದ್ದಾರೆ. ಇಷ್ಟಲಿಂಗವನ್ನು ನಮ್ಮ ಧರ್ಮ ಲಾಂಛನವೆಂದು ಭಕ್ತರಿಗೆ ಸರಿಯಾದ ತಿಳಿವಳಿಕೆ ಮೂಡಿಸಿ ಗುಡಿಗುಂಡಾರಗಳಿಗೆ ಹೋಗುವುದನ್ನು ತಪ್ಪಿಸಿದ್ದಾರೆ. ಎಷ್ಟು ಮಠಾಧಿಶರು ಈ ಕಾರ್ಯವನ್ನು ಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ? ಮಠಾಧಿಪತಿಗಳೇ ಗುಡಿಗಳ ಶಂಕುಸ್ಥಾಪನೆ ಮಾಡುತ್ತಾ ಸ್ಥಾವರಲಿಂಗ ಪೂಜೆಗಳಿಗೆ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಹೀಗಾಗಿ ಲಿಂಗಾಯತ ಧರ್ಮ ಒಂದು ಜಾತಿಯಾಗಿ ಪರಿಣಮಿಸುತ್ತಾ ಬಂದಿತು. ಇಂತಹ ಸಂದಿಗ್ಧಸ್ಥಿತಿಯಲ್ಲಿ ಪೂಜ್ಯ ಮಾತಾಜಿಯವರು ಕಂಕಣತೊಟ್ಟು ಭಕ್ತರನ್ನು ಬಸವತತ್ವದತಳಹದಿಯ ಮೇಲೆ ಒಂದು ಹೊಸ ಸಮಾಜವನ್ನೇ ನಿರ್ಮಿಸಿದ್ದಾರೆ. ಈ ಕಾರ್ಯವನ್ನು ವಿಶ್ವಕಲ್ಯಾಣ ಮಿಷನ್ ಸಂಸ್ಥೆ, ಬಸವಧರ್ಮಪೀಠ, ಶ್ರೀ ಜಗನ್ಮಾತಾ ಅಕ್ಕಮಹಾದೇವಿ ಪೀಠಗಳ ಮುಖಾಂತರ ಬಸವತತ್ವ ಪ್ರಚಾರ ಕೈಗೊಂಡು, ಯಶಸ್ವಿಯಾಗಿದ್ದಾರೆ. ತಿಂಗಳು ಗಟ್ಟಲೇ ಪ್ರವಚನ ಕಾರ್ಯಕ್ರಮಗಳನ್ನು ಕೈಗೊಂಡುದುದು ಮಾತ್ರವಲ್ಲದೆ, ಶರಣಮೇಳ, ಬಸವಧರ್ಮ ಸಮ್ಮೇಳನ, ಲಿಂಗಾಯತ ಧರ್ಮ ಮಹಾಸಭಾಗಳ

ಮತ್ತು ರಾಷ್ಟ್ರೀಯ ಬಸವದಳಗಳ ಮುಖಾಂತರ ಮತ್ತು ಬಸವ ಧರ್ಮ ಸಂಸತ್ ಮುಂತಾದ ಕಾರ್ಯಕ್ಷೇತ್ರದಲ್ಲಿ ಹಮ್ಮಿಕೊಂಡು ಬಸವತತ್ವ ಪ್ರಚಾರವನ್ನು ಅನೂಚಾನವಾಗಿ ನಡೆಸುತ್ತಾ ಬಂದಿದ್ದಾರೆ. ಹೀಗಾಗಿ ಲಕ್ಷಾಂತರ ಬಸವ ಭಕ್ತರು ಪೂಜ್ಯ ಮಾತಾಜಿಯವರ ಶಿಷ್ಯರಾಗಿದ್ದಾರೆ. ಪ್ರತಿಯೊಬ್ಬ ಭಕ್ತನಲ್ಲಿಯೂ ಶ್ರೀಗುರು ಬಸವಣ್ಣನವರು ಉಸಿರುಬಿಟ್ಟರೆ ಬೇರೊಂದಿಲ್ಲ. ಈ ವಿಚಾರಧಾರೆ ಕೆಲವು ಮಠಾಧಿಕಾರಿಗಳಿಗೆ ಅಪ್ರಿಯವಾಗಿ ಕಂಡಂತೆ ಇದೆ. ಕಾರಣ ಹೇಳುವ ಅವಶ್ಯಕತೆ ಇಲ್ಲ. ಬಸವಣ್ಣನವರ ಉಸಿರೇ ಶ್ರೀ ಮಾತಾಜಿಯವರಿಗೆ ಮಂತ್ರ. ಇದು ಸತ್ಯ ಸಂಗತಿ.

ಈ ಮೇಲಿನ ಕಾರ್ಯಗಳೆಲ್ಲಾ ಶ್ರೀ ಗುರುಬಸವಣ್ಣನವರಿಗೆ ತೋರಿದ ಉದ್ಧಟತನವೇ? ಶ್ರೀ ಪಂಡಿತಾರಾಧ್ಯಸ್ವಾಮೀಜಿಯವರೇ ವಿವರಿಸಬೇಕು.

ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ಡಾ॥ ಕೆ.ವಿ. ಪುಟ್ಟಪ್ಪನವರು ತಮ್ಮ ಒಂದು ಕಾದಂಬರಿ ''ಕಾನೂರು ಸುಬ್ಬಮ್ಮ ಹೆಗ್ಗಡತಿ'' ಪುಸ್ತಕದ ಮುನ್ನುಡಿಯಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅದನ್ನು ಇಲ್ಲಿ ಸ್ಮರಿಸುವುದು ಉಚಿತವೆನಿಸುತ್ತದೆ.

ಈ ಕಾದಂಬರಿಯನ್ನು ಓದುಗರು ಕಥೆಯ ಕೋಲಾಹಲಕ್ಕೆ ಓದಬೇಡಿರಿ. ಈ ಪುಸ್ತಕವನ್ನು ಭಾಷೆಯ ಶೈಲಿ, ಸಾಹಿತ್ಯದ ದೃಷ್ಟಿಯಿಂದ ಓದಿರಿ ಎಂದು ಹೇಳಿದ್ದಾರೆ. ಬರೀ ಕಥೆಯ ದೃಷ್ಟಿಯಿಂದ ಓದಿದರೆ ಒಬ್ಬ ಪ್ರಯಾಣಿಕ ಬಸ್ಸಿನಲ್ಲಿ ಹೋಗುವಾಗ ಒಂದು ಊರನ್ನು ಹಾದು ಹೋಗುವಾಗ ನೋಡಿದಂತಾಗುತ್ತೆ. ಆತ ನಾನು ಊರನ್ನು ಸಂಪೂರ್ಣ ನೋಡಿದ್ದೇನೆ ಎಂದರೆ ಎಷ್ಟು ಅಭಾಸವೋ ಶ್ರೀ ಗುರುಬಸವಣ್ಣನವರ ವಚನಸಾಹಿತ್ಯವನ್ನೂ ಮೇಲ್ನೋಟಕ್ಕೆ ಓದಿ ನಂತರ ನನಗೆ ಎಲ್ಲಾ ವಚನ ಸಾಹಿತ್ಯದ ಬಗ್ಗೆ ಪಾಂಡಿತ್ಯವಿದೆ ಎಂದಂತಾಗುತ್ತದೆ. ಕಾರಣ ವಚನಸಾಹಿತ್ಯವನ್ನು ಓದುವಾಗ ಬಹಳ ಎಚ್ಚರವಿರಬೇಕು. ಒಂದೊಂದು ಸಾರಿಯೂ ಅದೇ ವಚನವನ್ನು ಪುನಃ ಪುನಃ ಓದುತ್ತಾ ಕುಳಿತರೆ ವಿಚಾರಧಾರೆಗಳು ಒಂದು ಸಾರಿ ಓದಿದ್ದಕ್ಕೆ ಬೇರೆಯೇ ಇರುತ್ತವೆ. ಬಸವಾದಿ ಶರಣರ ವಚನಗಳಲ್ಲಿ ಒಂದೊಂದು ವಚನಕ್ಕೂ ಒಂದು ಉದ್ದೇಶವಿರುತ್ತದೆ. ಒಂದು ತತ್ವ ಮತ್ತು ಆದರ್ಶವಿರುತ್ತದೆ. ಆದ್ದರಿಂದ ವಚನಗಳನ್ನು ಓದುವಾಗ ಈ ವಚನದ ಆದರ್ಶವೇನು? ಬಸವಾದಿಶರಣರ ಆದರ್ಶವೇನಿರಬಹುದು ಎಂದು ವಿಮರ್ಶಾತ್ಮಕ ದೃಷ್ಟಿ ಮತ್ತು ಸಂಶೋಧನಾ ದೃಷ್ಟಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬಸವಣ್ಣನವರಿಗೆ ಸಮಾಜದ ದೃಷ್ಟಿಕೋನ ಏನಿರಬಹುದೆಂಬ ಪ್ರಾಮಾಣಿಕ ಚಿಂತನೆ ಇರಬೇಕು. ಈ ಎಲ್ಲಾ ದೃಷ್ಟಿಕೋನಗಳನ್ನು ಇಟ್ಟುಕೊಂಡು ವಚನಾಭ್ಯಾಸಮಾಡಿದರೆ ಹೊಸ ಹೊಸ ವಿಚಾರಧಾರೆಗಳು ಹೊರ ಹೊಮ್ಮುತ್ತವೆ. ಅದು ಬಿಟ್ಟು ನಾನು ಎಲ್ಲಾ ಓದಿದ್ದೇನೆ ಎಂದು ಬಸವಣ್ಣನವರ ದೃಷ್ಟಿಕೋನವನ್ನು ಮೊಟಕು ಮಾಡಿ ಸಮಾಜಕ್ಕೆ ತಪ್ಪು ಕಲ್ಪನೆ ಬರುವಂತೆ ವಚನಗಳನ್ನು ಹಿಗ್ಗಾಮುಗ್ಗ ವಿಮರ್ಶಿಸುವುದು ಸರಿಯಲ್ಲ.

ಪೂಜ್ಯ ಮಾತಾಜಿಯವರು ಬಸವಣ್ಣನವರ ವಚನವನ್ನೇನೂ ತಿರುಚಿಲ್ಲ. ವಚನ ಮುದ್ರಿಕೆಯಾದ ''ಕೂಡಲಸಂಗಮದೇವನ'' ಬದಲು ''ಲಿಂಗದೇವ'' ಎಂದು ಕರೆದಿದ್ದಾರೆ. ತಾತ್ವಿಕವಾಗಿ ಬಸವಣ್ಣನವರ ದೃಷ್ಟಿಯಲ್ಲಿ ಕೂಡಲ ಸಂಗಮನೆಂದರೆ ದೇವರ ಕಲ್ಪನೆ ಲಿಂಗ ಎಂದರ್ಥ. ಇಲ್ಲಿ ತಾತ್ವಿಕ ಚಿಂತನೆ ಮುಖ್ಯ. ಕೂಡಲ ಸಂಗಮ = ಲಿಂಗ ಎಂದು ಬಳಸಿದ್ದಾರೆ. ಕೂಡಲಸಂಗಮವೆಂದರೂ ದೇವರ ನಾಮಾಂಕಿತವೇ ಅಥವಾ ಲಿಂಗ ಎಂದರೂ ದೇವರ ನಾಮಾಂಕಿತವೇ ಹೊರತು ಬೇನೇನೂ ಇಲ್ಲ.

ಪೂಜ್ಯ ಮಾತಾಜಿಯವರು ಬದಲಿಸಿರುವುದು ಕೂಡಲಸಂಗಮ ಪದಮಾತ್ರ. ದೇವ ಎನ್ನುವ ಎರಡು ಕೊನೇ ಅಕ್ಷರಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಇಲ್ಲಿ ತಾತ್ವಿಕ

ವಿಚಾರಧಾರೆ ಮುಖ್ಯ. ಪದಜೋಡಣೆ ಮುಖ್ಯವಲ್ಲ. ಶ್ರೀ ಗುರುಬಸವಣ್ಣನವರು ಕೂಡಲ ಸಂಗಮದೇವ ಎಂಬ ಅಂಕಿತನಾಮವನ್ನು ಅವರ ವಚನಗಳಲ್ಲಿ ಬಳಸಿರುವುದು ಎಲ್ಲರಿಗೂ ತಿಳಿದ ವಿಚಾರ. ಆದರೆ ಶ್ರೀ ಗುರುಬಸವಣ್ಣನವರ ವಿಚಾರಧಾರೆ ಏಕದೇವೋಪಾಸನೇಯೇ ವಿನಾ ಬಹುದೇವತೋಪಾಸನೆ ಅಲ್ಲ. ಶ್ರೀ ಗುರುಬಸವಣ್ಣನವರಿಗೆ 'ಲಿಂಗ' ಸಾಕ್ಷಾತ್ಕಾರವಾಗುವ ಮೊದಲು ಕೂಡಲ ಸಂಗಮದೇವಾಲಯದಲ್ಲಿ ಸ್ಥಾವರಲಿಂಗವನ್ನೇ ಪೂಜಿಸುತ್ತಿದ್ದರು. ಆದ್ದರಿಂದ ಕೂಡಲ ಸಂಗಮದೇವ ಎಂಬ ಅಂಕಿತನಾಮ ಬಳಸಿಕೊಂಡರು. ಅವರಿಗೆ ಇಷ್ಟಲಿಂಗದ ಕಲ್ಪನೆಯಾದ ಮೇಲೆ ಕೂಡಲಸಂಗಮದೇವರ ಗುಡಿಯಲ್ಲಿರುವ ಸ್ಥಾವಲಿಂಗ ಪೂಜೆ ತ್ಯಜಿಸಿದರು. ಇದು ಎಲ್ಲಾ ಆಧ್ಯಾತ್ಮ ಜೀವಿಗಳಿಗೂ ತಿಳಿದ ವಿಚಾರ. ಈಗ ನಮಗನಿಸುತ್ತದೆ ಶ್ರೀ ಗುರುಬಸವಣ್ಣನವರಿಗೆ ಇಷ್ಟಲಿಂಗಸಾಕ್ಷಾತ್ಕಾರವಾದ ಬಳಿಕ ಅವರು ತಮ್ಮ ಅಂಕಿತನಾಮ ''ಕೂಡಲ ಸಂಗಮ'' ವನ್ನು 'ಲಿಂಗ' ಎಂಬ ಪದಬಳಕೆ ಮಾಡಿದ್ದಿದ್ದರೆ ಈಗ ಇರುವ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಈಗಿನ ಕೆಲವು ಪಂಡಿತೋತ್ತಮರು ಸ್ಥಾವರ ಲಿಂಗಪೂಜೆಯನ್ನೂ ಪ್ರತಿಪಾದಿಸುತ್ತಾ ಬಂದಿದ್ದಾರೆ. ಇದರಲ್ಲಿ ಪಂಚ ಪೀಠದವರದು ಎತ್ತಿದಕ್ಕೈ. ಇದು ಬಸವತತ್ವಕ್ಕೆ ಅಪಚಾರವೆಸಗಿದಂತೆ. ಹರ್ಡೇಕರ್ ಮಂಜಪ್ಪನವರು ಒಂದು ಮಾತನ್ನು ಹೇಳಿದ್ದಾರೆ. ಪಂಚಪೀಠದ ಸ್ವಾಮಿಗಳು ಬಸವಣ್ಣನವರ ಬಹಿರಂಗ ವಿರೋಧಿಗಳು ಮತ್ತು ವಿರಕ್ತಮಠದ ಸ್ವಾಮಿಗಳು ಅಂತರಂಗ ವಿರೋಧಿಗಳು ಎಂದು. ಇದು ಸತ್ಯವೆನಿಸುತ್ತದೆ. ಏಕೆಂದರೆ ಲಿಂ|| ಪೂಜ್ಯ ಲಿಂಗಾನಂದ ಸ್ವಾಮಿಗಳು ಮತ್ತು ಪೂಜ್ಯ ಮಾತಾಜಿಯವರು ಕಂಕಣತೊಟ್ಟು ಏಕದೇವೋಪಾಸನೆ ತತ್ವವನ್ನು ಮತ್ತು ಏಕ ಗುರೋಪಾಸನೆ ತತ್ವವನ್ನು ಪ್ರತಿಪಾದಿಸುತ್ತಾ ಬಂದರೆ ಯಾವ ಮಠಾಧಿಪತಿಗಳು (ಕೆಲವರನ್ನು ಬಿಟ್ಟು) ಅವರನ್ನು ಸ್ಪಂದಿಸಲಿಲ್ಲ. ಆದರೆ ಭಕ್ತಸಮೂಹಸ್ಪಂದಿಸಿತು. ಪೂಜ್ಯ ಮಾತಾಜಿಯವರು ಬಸವ ಗುರುವಿನ ಪೂಜೆಯನ್ನು ಸಹ ಪ್ರತಿಪಾದಿಸುತ್ತಾ ಬಂದಿದ್ದಾರೆ. ಕೆಲವು ಮಠಾಧಿಪತಿಗಳು ವಿರೋಧಿಸಿದರು. (ಲಿಂಗಾಯತ ಧರ್ಮದಲ್ಲಿ ಗುರು, ಲಿಂಗ ಮತ್ತು ಜಂಗಮ ಪೂಜೆಗೆ ಅವಕಾಶವಿದೆ) ಇಲ್ಲಿ ಗುರು ಎಂದರೆ ಶ್ರೀ ಗುರು ಬಸವಣ್ಣನವರೇ ವಿನಾ ಎದೆಯಲ್ಲಿ ಮೂರಕ್ಷರವಿರದಿದ್ದರೂ ಕೆಂಪುಕಾವಿ ಹಾಕಿದ ಸ್ವಾಮಿಗಳಲ್ಲ. ಈಗ ಶ್ರೀ ಗುರು ಬಸವಣ್ಣನವರ ಪೂಜೆ ಮತ್ತು ಇಷ್ಟಲಿಂಗ ಪೂಜೆ ನಿರಾತಂಕವಾಗಿ ಜನಮನದಲ್ಲಿ ಸಾಗಿಬರುತ್ತಿದೆ. ಮುಂದಿನ ಪೀಳಿಗೆಯಾದರೂ ನೇರವಾದ ದಾರಿಯಲ್ಲಿ ಏಕದೇವೋಪಾಸನೆಯತ್ತ ಸಾಗಲಿ ಎಂಬ ಸದುದ್ದೇಶದಿಂದ ಪೂಜ್ಯ ಮಾತೆಯವರು ''ಕೂಡಲಸಂಗಮ'' ಪದ ಬಿಟ್ಟು ''ಲಿಂಗ'' ಪದ ಬಳಕೆ ಮಾಡಿದಂತೆ ಕಾಣುತ್ತದೆ. ಶ್ರೀ ಗುರು ಬಸವಣ್ಣನವರ ವಚನಗಳಲ್ಲಿ 'ಲಿಂಗ' ಪದ ಬಳಕೆಯಾಗಿರುವುದನ್ನು ಅನೇಕ ವಚನಗಳಲ್ಲಿ ಕಾಣಬಹುದು. ಉದಾ: (1) ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವನೆನೆದೊಡೆ (2) ಲಿಂಗದ ಮೇಲೆ ನಿಷ್ಠೆ ಇಲ್ಲದ ಭಕ್ತ (3) ಲಿಂಗದಲ್ಲಿ ಕಠಿಣವುಂಟೇ (4) ಲಿಂಗ ವಿಕಾರಿಗೆ ಅಂಗವಿಕಾರವೆಂಬುದಿಲ್ಲ (5) ಮಾಡಿ ಲಿಂಗವ ಪೂಜಿಸಿಹೆ ನೆಂಬರು, ಇತ್ಯಾದಿ ಇತ್ಯಾದಿ. ಆದ್ದರಿಂದ ಈ ರೀತಿ ಶ್ರೀ ಗುರು ಬಸವಣ್ಣನವರೇ ಅನುಮತಿ ಅಧಿಕಾರ ಕೊಟ್ಟಿದ್ದಾರೆ. ಪ್ರಯುಕ್ತ ಕಾವಿಧಾರಿಗಳ ಅಥವಾ ಪಂಡಿತರೆಂದು ಉಬ್ಬಿಕೊಂಡಿರುವ ಸಾಹಿತಿಗಳನ್ನು ಕೇಳುವ ಪ್ರಮೇಯವಿಲ್ಲ. ನದಿ ದಾಟಲು ಗಣ್ಣಾಯಕನ ಅಪ್ಪಣೆ ಬೇಕಿಲ್ಲ. ಶರಣೆ ಅಕ್ಕಮಹಾದೇವಿ ಮತ್ತಿತರ ಶರಣರ ವಚನಗಳಲ್ಲಿಯೂ ಕೂಡ ಲಿಂಗಪದ ಬಳಕೆಯಾಗಿರುವುದನ್ನು ನಾವು ನೋಡ ಬಹುದು. ಉದಾ: ಶ್ರೀ ಅಕ್ಕಮಹಾದೇವಿಯವರ ಅನೇಕ ವಚನಗಳ ಮೊದಲ ಸಾಲನ್ನು ಪರಾಂಬರಿಸ ಬಹುದು.

(1) ಅಂಗದ ಭಂಗವ ಲಿಂಗ ಮುಖದಿಂದ (2) ಅಂಗವ ಲಿಂಗ ಮುಖದಲ್ಲಿ ಅರ್ಪಿಸಿ (3) ಅಂಗ ಸಂಗವಲ್ಲಿ ಲಿಂಗ ಸಂಗಿಯಾದೆ (4) ಅಂಗೈಯೊಳಗಣ ಲಿಂಗವ ಪೂಜಿಸುತ್ತ ಇತ್ಯಾದಿ;

ಶರಣೆ ಅಕ್ಕ ಮಹಾದೇವಿಯವರಾಗಲೀ, ಶ್ರೀ ಗುರು ಬಸವಣ್ಣನವರಾಗಲೀ ಲಿಂ|| ಪೂಜ್ಯ ಲಿಂಗಾನಂದ ಸ್ವಾಮಿಗಳನ್ನು ನೆನೆದು ಈ ವಚನಗಳನ್ನು ಅಂದು ರಚಿಸಿದ್ದರೇನು? ಈ ರೀತಿ ಬಸವ ವಚನ ದೀಪ್ತಿಯಲ್ಲಿ ಪ್ರಕಟಿಸಿದ ''ಕೂಡಲ ಸಂಗಮ'' ಬದಲು ''ಲಿಂಗ'' ಎಂದು ಬಳಸಿರುವುದನ್ನು ಲಿಂ|| ಪೂಜ್ಯ ಲಿಂಗಾನಂದಸ್ವಾಮಿಗಳಿಗೆ ಹೋಲಿಸಿರುವುದು ತಮ್ಮ ಮಟ್ಟವನ್ನು ತೋರಿಸುತ್ತದೆ ಅಷ್ಟೆ.

ಇನ್ನೊಂದು ವಿಚಾರದ ಬಗ್ಗೆ ಗಮನಹರಿಸಬೇಕು. ಪುಸ್ತಕದ ಹೆಸರು ''ಬಸವ ವಚನದೀಪ್ತಿ'' ಎಂದಿದೆ. ''ಲಿಂಗ'' ಪದವನ್ನು ಶ್ರೀ ಗುರುಬಸವಣ್ಣನವರಿಗೆ ಇಷ್ಟಲಿಂಗ ಸಾಕ್ಷಾತ್ಕಾರವಾದ ಮೇಲೆ ಮೂಡಿ ಬಂದ ವಚನಗಳಿಗೆ ಮಾತ್ರ ''ಕೂಡಲ ಸಂಗಮ''ನ ಬದಲು ''ಲಿಂಗ'' ಎಂದು ಉಪಯೋಗಿಸಿದ್ದಾರೆ. ಶ್ರೀ ಗುರು ಬಸವಣ್ಣನವರಿಗೆ ಇಷ್ಟಲಿಂಗ ಸಾಕ್ಷಾತ್ಕಾರವಾಗುವುದಕ್ಕಿಂತ ಮುಂಚಿನ ವಚನಗಳಲ್ಲಿ ''ಕೂಡಲ ಸಂಗಮ'' ಉಳಿಸಿಕೊಂಡು ಬಂದಿದ್ದಾರೆ. ಈ ವಿಚಾರವನ್ನು ಪೂಜ್ಯ ಪಂಡಿತಾರಾಧ್ಯರು ಬಹಳ ಜಾಣ್ಮೆಯಿಂದ ವಿಶ್ಲೇಷಿಸಿಲ್ಲ. ಇದು ಭಕ್ತರನ್ನು ಗೊಂದಲಕ್ಕೀಡು ಮಾಡುವ ಒಂದು ತಂತ್ರವೆಂದೇ ನಾನು ಭಾವಿಸುತ್ತೇನೆ. ''ಕೂಡಲಸಂಗಮದೇವ'' ಎಂದಾಕ್ಷಣ ಕೆಲವು ಮೂರ್ಖ ಪಂಡಿತರು, ಮಠಾಂಧರು ಸ್ಥಾವರ ಲಿಂಗವನ್ನು ಪ್ರತಿಪಾದಿಸುತ್ತಾರೆ. ಶ್ರೀ ಗುರುಬಸವಣ್ಣನವರ ವಚನಗಳನ್ನು ಭಕ್ತರನ್ನು ಅಡ್ಡದಾರಿಗೆ ಎಳೆದೊಯ್ಯಲಿಕ್ಕೆ ಉಪಯೋಗಿಸುತ್ತಾ ಬಂದಿದ್ದಾರೆ. (ಸ್ಥಾವರ ಲಿಂಗಪೂಜೆಯನ್ನು ಸಮರ್ಥಿಸುವವರು) ಇನ್ನು ಕೆಲವು ಸಂದರ್ಭಗಳಲ್ಲಿ ''ಕೂಡಲಸಂಗಮ'' ಎಂದರೆ ಒಂದು ಊರಿನ ಹೆಸರೆಂತಲೂ ಮತ್ತೆ ಕೆಲವು ಸಂದರ್ಭಗಳಲ್ಲಿ ಎರಡು ನದಿ ಸೇರುವ ಸ್ಥಳವೆಂತಲೂ ದುರುಪಯೋಗ ಪಡಿಸಿಕೊಂಡು ಬಸವ ತತ್ವಕ್ಕೆ ಅಪಚಾರವೆಸಗುತ್ತಾ ಬಂದಿದ್ದಾರೆ. ಎಷ್ಟೋ ಬಸವಣ್ಣನವರ ವಚನಗಳನ್ನು ಇಂಗ್ಲೀಷಿಗೆ ತರ್ಜುಮೆಮಾಡಿ (International level) ಕೂಡಲ ಸಂಗಮವೆಂದರೆ "God(Lord)of two meeting rivers"(Dr.A.K. Ramanujam's Translation) ಎಂದು ತರ್ಜುಮೆ ಮಾಡಿದ್ದಾರೆ. ಅಂತಹ ಪುಸ್ತಕಗಳು ಹೊರಬಿದ್ದಾಗ ಈ ಮಹಾಪಂಡಿತರುಗಳು ಎಲ್ಲಿ ಹೋಗಿದ್ದರು? ಈ ಎಲ್ಲಾ ಕಾರಣಗಳಿಗಾಗಿ ಪೂಜ್ಯ ಮಾತಾಜಿಯವರು ''ಕೂಡಲಸಂಗಮ'' ಬದಲು ''ಲಿಂಗ'' ಎಂಬ ಪದಬಳಕೆ ಮಾಡಿದ್ದಾರೆ. ಈ ಕೆಲಸ ಎಂದೋ ಆಗಬೇಕಿತ್ತು ಈಗ ಆಗಿದೆ.

''ಬಸವ ವಚನ ದೀಪ್ತಿ'' ಎಂಬ ಶಿರೋನಾಮೆ ಹೊಂದಿದ ಈ ಪುಸ್ತಕದಲ್ಲಿ ಇವು ಮಾತಾಜಿಯವರ ವಚನಗಳೆಂದಾಗಲೀ ಅಥವಾ ಲಿಂ|| ಪೂಜ್ಯ ಲಿಂಗಾನಂದ ಸ್ವಾಮೀಜಿಯವರ ವಚನಗಳೆಂದಾಗಲೀ ಪ್ರತಿಪಾದಿಸಿಲ್ಲ. ಈ ವಚನಗಳನ್ನು ಶ್ರೀ ಗುರು ಬಸವಣ್ಣನವರ ವಚನಗಳೆಂದೇ ಕರೆದಿದ್ದಾರೆ. ಅಂದ ಮೇಲೆ ಉದ್ಧಟತನ ಎಲ್ಲಿ ಬಂತು? ಓದುಗರು ಅಷ್ಟೇನೂ ದಡ್ಡರಲ್ಲ ''ಕೂಡಲ ಸಂಗಮದೇವ'' ಎಂದರೂ ಶ್ರೀ ಗುರು ಬಸವಣ್ಣನವರ ವಚನ ಅಥವಾ ''ಲಿಂಗದೇವ'' ಎಂದರೂ ಶ್ರೀ ಗುರು ಬಸವಣ್ಣನವರ ವಚನ ಎಂದು ಓದುತ್ತಾರೆಯೇ ವಿನಃ ಶ್ರೀ ಜಗದ್ಗುರು ಮಾತಾಜಿಯವರ ವಚನಗಳೆಂದಾಗಲೀ ಅಥವಾ ಶ್ರೀ ಲಿಂ || ಪೂಜ್ಯ ಲಿಂಗಾನಂದ ಸ್ವಾಮಿಗಳ ವಚನಗಳೆಂದಾಗಲೀ ಯಾರೂ ಹೇಳುವುದಿಲ್ಲ ಹೇಳುವ

ಪ್ರಮೇಯವೂ ಬರುವುದಿಲ್ಲ. ಪುಸ್ತಕದ ಹೆಸರು ''ಬಸವ ವಚನದೀಪ್ತಿ'' ಪುಸ್ತಕದ ಪ್ರಸ್ತಾವನೆಯಲ್ಲಿ ಬಸವಣ್ಣನವರ ಸಮಗ್ರ ವಚನ ಸಂಗ್ರಹಗಳು ಎಂದು ತಿಳಿದು ಹೇಳಿದ್ದಾರೆ. ಅಂದ ಮೇಲೆ ಶ್ರೀ ಪಂಡಿತಾರಾಧ್ಯರ ಮಿತಿ ಮೀರಿದ ಮಾತುಗಳು ಅಕ್ಷಮ್ಯ ಅಪರಾಧ. ಇದು ಶ್ರೀ ಪಂಡಿತಾರಾಧ್ಯರ ಉದ್ಧಟತನವಲ್ಲದೇ ಬೇರೆನೂ ಅಲ್ಲ. ಜಾತಿ ವಾದಿಗಳಾದ ಕೆಲವು ಪಂಡಿತರು ಮತ್ತು ಜಾತಿವಾದಿ ಮಠಾಧಿಪತಿಗಳು ಬಸವ ಧರ್ಮದ ದಾರಿ ತಪ್ಪಿಸಲು ಕೀಟಲೇ ಮಾಡಬಹುದೇ ವಿನಃ ಪೂಜ್ಯ ಮಾತಾಜಿಯವರು ನಡೆದು ಬಂದ ದಾರಿ ನೋಡಿದರೆ ಅವರ ಕನಸಿನಲ್ಲಿಯೂ ಭಕ್ತರನ್ನು ದಾರಿ ತಪ್ಪಿಸುವ ಕೆಲಸವನ್ನಾಗಲೀ, ಬಸವತತ್ವಕ್ಕೆ ಚ್ಯುತಿ ಬರುವ ಕೆಲಸವನ್ನಾಗಲೀ ಎಂದೂ ಮಾಡಿಲ್ಲ. ಇದು ಅವರನ್ನು ಹತ್ತಿರದಿಂದ ನೋಡಿದ ಎಲ್ಲಾ ಬಸವ ಭಕ್ತರಿಗೂ ತಿಳಿದ ವಿಚಾರ. ಅವರ ಮುಖವನ್ನೇ ನೋಡದ, ಅವರ ವಿಚಾರಧಾರೆ ತಿಳಿಯದ, ಸೈರಿಸದ ಮತಾಂಧ ಮಠಾಧಿಪತಿಗಳು ಮತ್ತು ಮತಾಂಧ ಪಂಡಿತರನ್ನು ಬಿಟ್ಟರೆ ಯಾರೂ ಅವರ ಬಗ್ಗೆ ಈ ರೀತಿಯ ಕಳಂಕ ತರಲು ಪ್ರಯತ್ನಿಸುವುದಿಲ್ಲ. ತತ್ವ ವಿಚಾರದಲ್ಲಿ ಭಿನ್ನಭೇದವಿದ್ದರೆ ಅವರನ್ನು ಪತ್ರದ ಮೂಲಕ, ದೂರವಾಣಿ ಮೂಲಕ, ಅವರನ್ನು ಸಂಪರ್ಕಿಸಬಹುದಿತ್ತು ಅಥವಾ ಅವರನ್ನು ಭೇಟಿಮಾಡಿ ವಿಚಾರ ವಿನಿಮಯ ಮಾಡಬಹುದಿತ್ತು. ಅದರ ಬದಲು ಏಕಾಏಕಿ ಪತ್ರಿಕೆಗಳ ಮುಖಾಂತರ ತಮ್ಮ ಕ್ರೋಧವನ್ನು ತೀರಿಸಿಕೊಳ್ಳುವ ಸಾಹಸಕ್ಕೆ ಕೈ ಹಾಕಬಾರದಿತ್ತು. ಇಷ್ಟು ಸಂಸ್ಕೃತಿ ಮಠಾಧಿಪತಿಗಳಿಗಿಲ್ಲವಲ್ಲ ಎಂದು ಸಂಕಟವಾಗುತ್ತದೆ.

ಇನ್ನೊಂದು ವಿಚಾರಧಾರೆ ಬಹಳ ಮುಖ್ಯವೆಂದೆನಿಸುತ್ತದೆ. ''ಶ್ರೀ ಗುರು ಬಸವಲಿಂಗಾಯನಮಃ'' ಇದು ಶ್ರೀ ಗುರುಬಸವ ಮಂತ್ರ ಎಂದು ಎಲ್ಲರಿಗೂ ತಿಳಿದ ವಿಚಾರ. ಈ ಮಂತ್ರದಲ್ಲಿ ಶ್ರೀ ಗುರುವಿನ ನಾಮ ''ಬಸವ'' ಮತ್ತು ದೇವರ ನಾಮ ''ಲಿಂಗ'' ವೆಂದು ಉಪಯೋಗವಾಗಿವೆ. ಬಸವ ಮತ್ತು ಲಿಂಗ ಒಂದಕ್ಕೊಂದು ಅಂಟಿಕೊಂಡಿವೆ ಮತ್ತು ಪೂರಕವಾಗಿವೆ. ಬಸವನನ್ನು ಬಿಟ್ಟು ಲಿಂಗವಿಲ್ಲ ಲಿಂಗವನ್ನು ಬಿಟ್ಟು ಬಸವನಿಲ್ಲ. ಆದ್ದರಿಂದ ಬಸವ ಪದ ಗುರು ಬಸವಣ್ಣನರಿಗೂ ಲಿಂಗ ಪದ ನೇರವಾಗಿ ದೇವರಿಗೆ ಅನ್ವಯಿಸುತ್ತದೆ. ಆದ ಪ್ರಯುಕ್ತ ಪೂಜ್ಯ ಮಾತಾಜಿಯವರು ''ಕೂಡಲ ಸಂಗಮ'' ದ ಬದಲು ಲಿಂಗಪದ ಬಳಕೆ ಮಾಡಿದ್ದಾರೆ. ಆದ್ದರಿಂದ ಲಿಂಗ ಪದ ಬಳಕೆಯಾದರೂ ಇದು ಬಸವಣ್ಣನವರ ಅಂಕಿತ ನಾಮ ಎಂದೇ ಭಾವಿಸಬೇಕು. ಇಲ್ಲಿ ತತ್ವದ ದೃಷ್ಟಿಗೆ ಒತ್ತು ಕೊಟ್ಟಿದ್ದಾರೆ. ತತ್ವ ಮತ್ತು ತಾತ್ವಿಕ ಚಿಂತನೆಗೆ ಶ್ರೀ ಪಂಡಿತಾರಾಧ್ಯರು ಗಮನ ಹರಿಸಿಲ್ಲ.

ಬಸವಣ್ಣನವರ ವಚನಗಳ ಅಂಕಿತನಾಮ ಬದಲಾಯಿಸಲು ಇವರಿಗೆ ಅಧಿಕಾರ ವಿತ್ತವರು ಯಾರು? ಎಂಬ ಒಂದು ತಕರಾರು ಮಾಡಿದ್ದಾರೆ. ಪೂಜ್ಯಮಾತಾಜಿಯವರು ಬಸವಣ್ಣನವರ ಅಂಕಿತನಾಮ ''ಕೂಡಲ ಸಂಗಮದೇವ'' ಎಂದಿದ್ದರೂ ಅವರಿಗೆ ಇಷ್ಟ ಲಿಂಗ ಸಾಕ್ಷಾತ್ಕಾರವಾದ ನಂತರದ ವಚನಗಳಿಗೆ ''ಲಿಂಗದೇವ'' ಎಂದು ಕರೆದು ಬಸವಣ್ಣನವರ ವಚನಗಳೆಂದೇ ಪ್ರತಿಪಾದಿಸಿದ್ದಾರೆ. ಈ ರೀತಿ ಅಂಕಿತನಾಮ ಲಿಂಗದೇವ ಎಂದು ಕರೆದು ಈ ವಚನಗಳು ತಾವು ಬರೆದ ವಚನಗಳೆಂದು ಪ್ರತಿಪಾದಿಸಿಲ್ಲ. ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮದ ಉಳಿವಿಗಾಗಿ ಮತ್ತು ಅದರ ಬೆಳವಣಿಗೆ ನಿರಂತರವಾಗಿ ಸಾಗಲೆಂಬ ಉದ್ದೇಶವಿದೆ.

ಶ್ರೀ ಪಂಡಿತಾರಾಧ್ಯರು ಬಸವಣ್ಣನವರ ತತ್ವಗಳನ್ನು ಲಿಂಗಾಯತ ಗೊಳಿಸಿದ್ದಾರೆ ಎಂದು ಟೀಕಿಸಿದ್ದಾರೆ. ಈ ವಿಚಾರ ನೆನೆಸಿಕೊಂಡರೆ ನಗು ಬರುತ್ತದೆ. ಲಿಂಗಾಯತ ಧರ್ಮವನ್ನು ಕೊಟ್ಟ ಶ್ರೀ ಗುರು ಬಸವಣ್ಣನವರ ತತ್ವಗಳನ್ನು ಲಿಂಗಾಯತ ಗೊಳಿಸುವುದೆಲ್ಲಿಂದ ಬಂತು.

ಶ್ರೀ ಗುರು ಬಸವಣ್ಣನವರ ತತ್ವಗಳನ್ನು ವೀರಶೈವ / ಶೈವೀಕರಿಸ ಬೇಕಿತ್ತೇ ಅಥವಾ ಇಸ್ಲಾಮಿಗೊಳಿಸ ಬೇಕಿತ್ತೇ ಅಥವಾ ಜೈನೀಕರಿಸಬೇಕಿತ್ತೇ ಅಥವಾ ಕ್ರೈಸ್ತೀ ಗೊಳಿಸಬೇಕಿತ್ತೇ ಇತ್ಯಾದಿ ನನಗೆ ಅರ್ಥವಾಗುತ್ತಿಲ್ಲ. ಇಲ್ಲದೇ ಹೋದರೆ ಜಾತಿವಾದಿ ಪಂಡಿತೋತ್ತಮರು ಲಿಂಗಾಯತ ಧರ್ಮವನ್ನು ದಿಕ್ಕು ತಪ್ಪಿಸಿ ಶೈವ / ವೀರಶೈವ ಎಂಬ ಮತ ಪಂಥಗಳಿಗೆ ಒತ್ತುಕೊಟ್ಟು ವೈದೀಕರಿಸದಂತೆ ಈ ರೀತಿ ಪ್ರತಿಪಾದಿಸಿದ್ದಾರೆ ಶ್ರೀ ಗುರು ಬಸವಣ್ಣನವರ ಆದೇಶದಂತೆ ಈ ರೀತಿ ಮಾಡಿರ ಬಹುದೆಂದು ನನ್ನ ಅನಿಸಿಕೆ. ಬೇರೇನು ಉದ್ದೇಶವಿಲ್ಲ. ಪೂಜ್ಯಮಾತಾಜಿಯವರು ಒಬ್ಬ ವ್ಯಕ್ತಿಯಲ್ಲ ಅವರೊಂದು ಶಕ್ತಿ. ಈ ವಿಚಾರವನ್ನು ಅರಿಯದೇ ಶ್ರೀ ಪಂಡಿತಾರಾಧ್ಯರು ಅಹಂಕಾರದ ಪರಮಾವಧಿಯಲ್ಲಿ ಮಾತಾಜಿಯವರ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಅವರು ಉಪಯೋಗಿಸಿರುವ ಭಾಷೆ ಒಬ್ಬ ಮಠಾಧಿಪತಿಯ ಭಾಷೆಯಲ್ಲ. ಅವರ ವಿಚಾರಧಾರೆ ನೋಡಿದರೆ ಪೂಜ್ಯ ಮಾತಾಜಿಯವರನ್ನು ದೂಷಿಸುವ ಒಂದೇ ಒಂದು ಕಾರ್ಯಕ್ರಮ ಬಿಟ್ಟರೆ ಅಲ್ಲಿ ಬೇರೇನೂ ತಾತ್ವಿಕ ಚಿಂತನೆ ಇಲ್ಲ.

ಕೂಡಲ ಸಂಗಮ ಕ್ಷೇತ್ರವನ್ನು ಒಂದು ಸ್ಮಶಾನಕ್ಕೆ ಹೋಲಿಸಿದ್ದಾರೆ ಶ್ರೀ ಪಂಡಿತಾರಾಧ್ಯರಿಗೆ ಕೂಡಲ ಸಂಗಮ ಎಲ್ಲಿದೆ ? ಅದು ಹೇಗಿತ್ತು ? ಈಗ ಅದರ ಅಭಿವೃದ್ಧಿಏನಾಗಿದೆ ಎನ್ನುವ ಪರಿವೆಯೇ ಇದ್ದಂತೆ ಕಾಣುತ್ತಿಲ್ಲ. ಒಟ್ಟಿನಲ್ಲಿ ಕೂಡಲಸಂಗಮ ಕ್ಷೇತ್ರ ಹೇಗಿತ್ತೋ ಹಾಗೆಯೇ ಇರ ಬೇಕಿತ್ತೇನೋ? ಒಬ್ಬ ಮಹಾನ್ ಪುರುಷ ಬಸವಣ್ಣನವರ ತಪೋಸ್ಥಾನ, ಐಕ್ಯಸ್ಥಾನ ಹಾಳಾಗಿ ಹೋಗಿದ್ದರೆ ಬಹುಷಃ ಪಂಡಿತಾರಾಧ್ಯರಿಗೆ ಬಹಳ ಸಂತೋಷವಾಗುತ್ತಿತ್ತೋ ಏನೋ? ಈಗ ಅವರಿಗೆ ಬಹಳ ಸಂಕಟವಾದಂತಿದೆ. ಮಾತಾಜಿಯವರು ಕೂಡಲ ಸಂಗಮದಲ್ಲಿ ವ್ಯಾಪಾರ ನಡೆಸಿದ್ದಾರೆ ಎನ್ನುವುದಕ್ಕೆ ಇವರ ನಾಲಿಗೆ ಹೇಗೆ ಬಂತೊ ನಾನರಿಯೆ. ಈಗ ಸಿರಿಗೆರೆಯವರು ಬೆಂಗಳೂರಿನಲ್ಲಿ ತರಳಬಾಳುಕೇಂದ್ರವೆಂದು ಹೇಳಿಕೊಂಡು ಒಂದು (5 Star Hotel) ಪಂಚತಾರಾ ಹೋಟೆಲ್ ಕಟ್ಟಿ ವ್ಯಾಪಾರವನ್ನು ಪ್ರಾರಂಭಮಾಡಿ ಸಿರಿಗೆರೆ ಯಿಂದ ಈಗ ಬೆಂಗಳೂರಿಗೆ ಧರ್ಮದ ಹೆಸರಿನಲ್ಲಿ ವ್ಯಾಪಾರ ಶುರುಮಾಡಿರುವುದು ಎಲ್ಲರಿಗೂ ತಿಳಿದ ವಿಷಯ. ಪೂಜ್ಯ ಮಾತಾಜಿಯವರು ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎನ್ನುವಂತೆ ಪ್ರವಚನದ ಮುಖಾಂತರ ಮತ್ತು ಸಾಹಿತ್ಯ ಮಾರಿ ಬಂದ ಹಣವನ್ನು ಧರ್ಮಪ್ರಚಾರಕ್ಕೆ ಉಪಯೋಗಿಸುತ್ತಾರೆ. ಇದು ಸುಲಿಗೆಯೆ? ಯೋಚಿಸಬೇಕು. ಶ್ರೀ ಪಂಡಿತಾರಾಧ್ಯಸ್ವಾಮಿಗಳಿಗೆ ಶ್ರೀ ಗುರುಬಸವಣ್ಣನವರ ಪ್ರತಿಮೆಗಳನ್ನು ನೋಡಿ ಸಹಿಸಲಾರದಂತೆ ಹೊಟ್ಟೆನೋವು ಬಂದಿರಬೇಕು. ಶ್ರೀ ಗುರು ಬಸವಣ್ಣನವರನ್ನು ಮತ್ತು ಅವರು ಕೊಟ್ಟ ಲಿಂಗಪೂಜೆಯನ್ನು ಬಿಟ್ಟು ಅವರ ಮಠಗಳಲ್ಲಿ ಸ್ಥಾಪಿಸಿರುವ ಸತ್ತವರ ಗದ್ದುಗೆಗಳನ್ನು ಪೂಜಿಸುತ್ತಾ ಗುಡಿಗಳಲ್ಲಿರುವ ಸ್ಥಾವರ ದೇವರು / ದೇವತೆಗಳನ್ನು ಪೂಜಿಸಬೇಕಿತ್ತೇನೋ? ಬೆಂಗಳೂರಿನಲ್ಲಿರುವ ತರಳಬಾಳು ಕೇಂದ್ರದಲ್ಲಿ ಶ್ರೀ ಮರುಳಸಿದ್ಧರ ಪ್ರತಿಮೆ ಸ್ಥಾಪಿಸಿ. ಪೂಜಿಸುವುದು ಮಾತ್ರ ಇವರಿಗೆ ಇಷ್ಟವೇನೋ. ಸಾದು ಲಿಂಗಾಯತರ ಯಾರ ಮನೆಗೇ ಹೋಗಲಿ ಶ್ರೀ ಶಿವಕುಮಾರಸ್ವಾಮಿಗಳು (ಲಿಂ) ಮತ್ತು ಈಗಿರುವ ಶ್ರೀ ಶಿವಮೂರ್ತಿಸ್ವಾಮಿಗಳ ಫೋಟೋಗಳು ಮತ್ತು ಆ ಫೋಟೋಗಳ ಪೂಜೆ ಸಾಂಗೋಪಾಂಗವಾಗಿ ನಡೆಯುತ್ತಿದೆ. ಪಾಪ ಇದನ್ನು ಬಿಟ್ಟು ಶ್ರೀ ಗುರು ಬಸವಣ್ಣನವರ ಪೂಜೆಮಾಡಲು ಮಾತಾಜಿಯವರು ಶಿಷ್ಯರಿಗೆ ಹೇಳುವುದು ಇವರಿಗೆ ಸರಿ ಬಂದಂತೆ ಕಾಣುತ್ತಿಲ್ಲ. ಶ್ರೀ ಗುರು ಬಸವಣ್ಣನವರ ಹೆಸರು ಉಪಯೋಗಿಸುವುದು ಮಾತ್ರ ಇವರಿಗೆ ಬೇಕು ಆದರೆ ಶ್ರೀ ಗುರು ಬಸವಣ್ಣನವರಿಗೆ ಕೃತಜ್ಞತೆ ಸಲ್ಲಿಸುವುದು ಮಾತ್ರ ಬೇಡ ಎಂದರೆ ಪೂಜೆ ಬೇಡ

ಎಂಬುದು ಇವರ ಧ್ಯೇಯ. ಪೂಜೆ ಮಠಾಧಿಪತಿಗಳಿಗೆ ಮಾತ್ರ ಮೀಸಲಿರ ಬೇಕೋ? ಎದೆ ಸೀಳಿದರೂ ಮೂರಕ್ಷರ ಇಲ್ಲದ, ಬಸವಾದಿ ಶರಣರ ತತ್ವಗಳಲ್ಲಿ ನಂಬಿಕೆ ಇಲ್ಲದ ಸ್ವಾಮಿಗಳ ಪೂಜೆ, ಪಾದಪೂಜೆ ಇಂತಹವುಗಳನ್ನು ಮಾಡಬೇಕಿತ್ತೇನೋ?

''ಬಸವ ವಚನ ದೀಪ್ತಿ'' ಯನ್ನು ಮಹಾಚೈತ್ರಕ್ಕೆ ಹೋಲಿಸಿದ್ದಾರೆ. ಪನ್ನೀರನ್ನು ಗಟಾರಗ ನೀರಿಗೆ ಹೋಲಿಸಿದಂತಿದೆ. ಮಹಾ ಚೈತ್ರ ಒಂದು ಹೊಲಸು ಪುಸ್ತಕ ಇದನ್ನು ನಾನು ಓದಿದ್ದೇನೆ. ಶ್ರೀ ಶಿವಪ್ರಕಾಶರನ್ನು ನಾನು 20-25 ವರ್ಷಗಳಿಂದ ಬಲ್ಲೆನು. ನನಗೆ ತಿಳಿದ ಮಾಹಿತಿಯ ಪ್ರಕಾರ ಆತನೊಬ್ಬ ಕುಡುಕ, ಮಾಂಸಾಹಾರಿ ಮತ್ತು ಏನೆಲ್ಲಾ ಗುಣಗಳಿವೆ ಅವನ ಹುಟ್ಟು ಒಂದು ಚರಿತ್ರೆ ಆತನಂತೆಯೇ ಬಸವಾದಿ ಶರಣರ ಚಿತ್ರಗಳನ್ನು ಬಿಡಿಸಿದ್ದಾನೆ. ಈ ಪುಸ್ತಕ ಮಹಾ ಪಂಡಿತಾರಾಧ್ಯರಿಗೆ ಬಹಳ ಪ್ರಿಯವಂತೆ ಅದಕ್ಕೊಂದು ವ್ಯಾಖ್ಯಾನ ''ಕತ್ತಲಲ್ಲಿ ಕರೀಬೆಕ್ಕು'' ಹುಡುಕಿದ್ದಾರೆ ಮಾತಾಜಿಯವರು ಎಂದು ಒಂದು ಲೇಖನ ಬೇರೆಬರೆದರು. ಅದಕ್ಕೆ ಮಾತಾಜಿಯವರು ಪ್ರತ್ಯುತ್ತರವನ್ನು ಆಗಲೇ ಪ್ರಕಟಿಸಿ ಶ್ರೀ ಪಂಡಿತಾರಾಧ್ಯರಿಗೆ ಮುಖಭಂಗವಾದದ್ದು ಎಲ್ಲರಿಗೂ ತಿಳಿದ ವಿಷಯ.

ಕೃತಿಚೌರ್ಯ: ಕೆಲವರು ''ಬಸವ ವಚನದೀಪ್ತಿ'' ಯಲ್ಲಿ ಕೃತಿ ಚೌರ್ಯವಾಗಿದೆ ಎಂದಿದ್ದಾರೆ. ಪೂಜ್ಯ ಶ್ರೀ ಮಾತಾಜಿಯವರು ಪುಸ್ತಕಕ್ಕೆ ''ಬಸವ ವಚನ ದೀಪ್ತಿ'' ಎಂತಲೂ ಆದರ ಪ್ರಸ್ತಾವನೆಯಲ್ಲಿ ಬಸವಣ್ಣನವರ ಸಮಗ್ರ ವಚನ ಸಂಗ್ರಹ ಎಂದು ಸ್ಪಷ್ಟಪಡಿಸಿದ್ದಾರೆ. 'ಲಿಂಗ ದೇವಾ' ಎಂದು ಕರೆದು ಬಸವಣ್ಣನವರ ವಚನಗಳು ಎಂದು ಬರೆದಿದ್ದಾರೆ. ಕೃತಿಚೌರ್ಯ ಎಂದರೆ ಬಸವಣ್ಣನವರ ವಚನಗಳಲ್ಲಿ ಲಿಂಗದೇವ ಎಂದು ಮಾರ್ಪಾಟು ಮಾಡಿ ಇದು ಮಾತಾಜಿಯವರ ವಚನಗಳೆಂದು ಪ್ರತಿ ಪಾದಿಸಿಲ್ಲ. ಇದು ಹೇಗೆ ಕೃತಿಚೌರ್ಯ! ಕೆಲವು ಪಂಡಿತರಿಗೆ ವ್ಯಾಕರಣದ ಬಗ್ಗೆ, ಕನ್ನಡ ಶಬ್ದಕೋಶದ ಬಗ್ಗೆ ತಿಳುವಳಿಕೆ ಸಾಲದು ಎಂದೆನಿಸುತ್ತದೆ. ಇಂತಹ ಪಂಡಿತರುಗಳನ್ನು ಯಾವುದಾದರೂ ಒಂದು ಒಳ್ಳೆಯ ಕನ್ನಡ ಶಾಲೆಗೆ ಕಳುಹಿಸುವುದು ಉತ್ತಮ. ಯಾವುದು ಕೃತಿಚೌರ್ಯ ಎಂಬುದನ್ನು ಈ ಕೆಳಗಿನ ಉದಾಹರಣೆಯಿಂದ ತಿಳಿಯಪಡಿಸುತ್ತೇನೆ.

ನಂಬಿದೆ ಗುರುವೆ ನಂಬಿದೆ ಸ್ವಾಮಿ
ಅಂಬಿಕಾರಮಣ ನೀನಂಬಿಗ ॥ ಪ ॥
ಹೊಳೆಯ ಭರವ ನೋಡಂಬಿಗ
ಸೆಳಹು ಬಹಳ ಕಾಣಂಬಿಗ
ಸುಳುಹಿನೊಳಗೆ ಬಿದ್ದೆನಂಬಿಗ । ಎನ್ನ-
ನೆಳೆದುಕೊಳ್ಳೋ ನೀನಂಬಿಗ ॥ 1 ॥
ಆರು ತೆರೆಯು ನೋಡಂಬಿಗ । ಬಲು
ಮೀರಿ ಬರುತಲಿವೆಲೆ ಅಂಬಿಗ
ಹಾರಲೊದೆದು ಎನ್ನತಡಿಗೆ ಸಾರಿಸು ನೀ
ದೂರ ಮಾಡದಿರು ಅಂಬಿಗ ॥ 2 ॥
ತುಂಬಿದ ಹರಿಗೋಲಂಬಿಗ । ಅದ
ಕೊಂಬತ್ತು ಛಿದ್ರನೋಡಂಬಿಗ
ಸಂಭ್ರಮವನು ನೋಡಂಬಿಗ
ರಿಂಬನರಿದು ತೆಗೆಯಂಬಿಗ ॥ 3 ॥

ಹತ್ತು ಹತ್ತು ನೋಡಂಬಿಗ
ಹತ್ತುವರ್ರೈವರು ಅಂಬಿಗ
ಮುತ್ತಿಗೆಗೊಳಗಾದೆನಂಬಿಗ । ಎನ್ನ
ನೆತ್ತಿಕೊಳ್ಳೊ ನೀನಂಬಿಗ ॥ 4 ॥
ಸತ್ಯವೆಂಬ ಹುಟ್ಟಂಬಿಗ ಸದ್
ಭಕ್ತಿಯೆಂಬ ಪಥವಂಬಿಗ
ನಿತ್ಯಮುಕ್ತ ನಮ್ಮ ಚನ್ನಮಲ್ಲಿಕಾರ್ಜುನನ
ಮುಕ್ತಿಮಂಟಪಕೊಯ್ಯೋ ಅಂಬಿಗ ॥ 5 ॥

- ಶರಣೆ ಅಕ್ಕಮಹಾದೇವಿ

ಈ ಮೇಲಿನ ವಚನದ ಕರ್ತೃ ಶಿವಯೋಗಿಣಿ ಅಕ್ಕ ಮಹಾದೇವಿ. ಆದರೆ ಕೆಲವು ದಾಸಭಕ್ತರು ಈ ವಚನವನ್ನು ಪುರಂದರದಾಸರ ಕೃತಿ ಎಂದು ಕೃತಿ ಚೌರ್ಯ ಮಾಡಿದ್ದಾರೆ. ಕೊನೆಯ ಎರಡು ಸಾಲುಗಳನ್ನು ಹೀಗೆ ಉಪಯೋಗಿಸಿದ್ದಾರೆ. ನಿತ್ಯ ಮುಕ್ತನಮ್ಮ ಪುರಂದರ ವಿಠಲನ ಮುಕ್ತಿ ಮಂಟಪಕೊಯ್ಯೋ ಅಂಬಿಗ ಎಂದು. (ಚನ್ನಮಲ್ಲಿಕಾರ್ಜುನನ ಬದಲು) ಇದು ಕೃತಿ ಚೌರ್ಯ. ಈ ವಚನವನ್ನು ಹೀಗೆ ಕೃತಿ ಚೌರ್ಯ ಮಾಡಿ ಅನೇಕ ವೇದಿಕೆಗಳಲ್ಲಿ ಸಂಗೀತಕ್ಕೆ ಅಳವಡಿಸಿಕೊಂಡು ಹಾಡುತ್ತಿದ್ದಾರೆ. ವಚನದ ಮೊದಲ ಎರಡು ಸಾಲುಗಳಿಗೂ ಕೃತಿ ಚೌರ್ಯವಾಗಿದೆ (ಅಂಬಿಗ ನಾ ನಿನ್ನನಂಬಿದೆ. . . . . .) ಕೆಲವು ಪ್ರಕಟಿಸಿದ ಪುಸ್ತಕಗಳಲ್ಲೂ ದಾಸರ ಪದಗಳಲ್ಲಿ ಸೇರಿ ಹೋಗಿದೆ. ಇದನ್ನು ಮಾತ್ರ ಯಾವ ಪಂಡಿತನೂ / ಮಠಾಧಿಪತಿಯೂ ಇಲ್ಲಿಯವರೆವಿಗೆ ಖಂಡಿಸಿಲ್ಲ. ಇವರೆಲ್ಲಾ ಎಲ್ಲಿ ಹೋಗಿದ್ದಾರೆ? ಈಗ ಎಲ್ಲಿಲ್ಲದ ಪೌರುಷ ಬಂದು ಕೃತಿ ಚೌರ್ಯ ಎಂದಿದ್ದಾರೆ. ಇದು ಸಾಧುವಲ್ಲ. ಇನ್ನೂ ಅನೇಕ ಉದಾಹರಣೆಗಳನ್ನು ಕೃತಿಚೌರ್ಯ ಸಾಹಿತ್ಯದ ಬಗ್ಗೆ ಕೊಡಬಹುದು. ಡಾ॥ ಎಲ್. ಬಸವರಾಜುರವರ ಕೃತಿ ''ಶಿವದಾಸ ಗೀತಾಂಜಲಿ'' ಸಂಪಾದನೆಯಲ್ಲಿ ಇವುಗಳನ್ನು ಕಾಣಬಹುದು. ಕೆಲವು ಮಠಗಳನ್ನು ಹೊರತುಪಡಿಸಿ ಎಲ್ಲಾ ಮಠಾಧಿಪತಿಗಳು ಶ್ರೀ ಗುರು ಬಸವಣ್ಣನವರಿಗೆ ದ್ರೋಹ ಬಗೆದಿದ್ದಾರೆ. ಬಗೆಯುತ್ತಲೇ ಬಂದಿದ್ದಾರೆ. ಇದು ಎಲ್ಲರಿಗೂ ತಿಳಿದ ವಿಷಯ. ಆದರೆ ಬಹಿರಂಗವಾಗಿ ಹೇಳುವ ದಿಟ್ಟ ಸಾಹಸಕ್ಕೆ ಯಾರೂ ಕೈ ಹಾಕಿಲ್ಲ ಅಷ್ಟೆ. ಮಾತಾಜಿಯವರು ಈಗ ಸುಮಾರು 30 ವರ್ಷಗಳಿಂದ ಬಸವತತ್ವಗಳ ಪ್ರಚಾರದ ಬಗ್ಗೆ ಅವುಗಳ ಅನುಷ್ಠಾನದ ಬಗ್ಗೆ ಏನೇನು ಮಾಡುತ್ತಾ ಬಂದಿದ್ದಾರೆ ಈ ಲೋಕಕ್ಕೆ ತಿಳಿದ ವಿಷಯ. ಶ್ರೀ ಪಂಡಿತಾರಾಧ್ಯರನ್ನು ಒಳಗೊಂಡು ಎಲ್ಲಾ ಮಠಾಧಿಪತಿಗಳು (ಕೆಲವು ಮಠಗಳನ್ನು ಬಿಟ್ಟು) ಏನೇನು ಮಾಡಿದ್ದಾರೆ ಎಲ್ಲರಿಗೂ ತಿಳಿದ ವಿಷಯ.

1970ರಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಪೀಠಸ್ಥಾಪಿಸಿ ಮೊಟ್ಟ ಮೊದಲು ಸ್ತ್ರೀ ಜಗದ್ಗುರು ಆದಾಗ ಇಡೀ ಸಮಾಜ ಮತ್ತು ಕಾವಿಧರಿಸಿಕೊಂಡ ಸ್ವಾಮಿಗಳು ಬೊಬ್ಬೆಹಾಕಿದರು. ಕೊನೆಯದಾಗಿ ಏನಾಯಿತು. ಸಮಾಜ ಸ್ತ್ರೀ ಜಗದ್ಗುರು ಪೀಠವನ್ನು ಪ್ರಸಂಶಿಸಿತು. ಒಂದೊಂದಾಗಿ ಕೆಲವು ಮಠಾಧಿಪತಿಗಳೂ ಸ್ಪಂದಿಸಿದರು. ಜಗದ್ಗುರು ಎಂದರೆ ಜಗತ್ತಿಗೆ ಭಾರವಾದ ವಸ್ತುವಲ್ಲ. ಜಗದ್ಗುರುಗಳು ಬಸವತತ್ವ ಪ್ರಚಾರ ಮಾಡುವ ನಿರಂತರ ಕಾರ್ಯದಲ್ಲಿ ತೊಡಗಬೇಕು ಇದು ಮಠಾಧಿಪತಿಗಳ ಮುಖ್ಯ ಕರ್ತವ್ಯ. ಇದೊಂದು ಕಾಯಕ ಬಿಟ್ಟು ಬೇರೆ ಏನೆಲ್ಲಾ ರಾಜಕೀಯ ವ್ಯಕ್ತಿಗಳಂತೆ ಮಾಡುತ್ತಿದ್ದಾರೆ ಅಷ್ಟೆ. ಜಗದ್ಗುರುಗಳು ಲೋಕ ಕಲ್ಯಾಣ ಮಾಡಬೇಕು ಎಂಬ ತತ್ವ ಹಿಡಿದು ಮಾತಾಜಿಯವರು ಮುಂದೆ ಸಾಗಿದರು. ಅವರಿಗೆ ಜಯ ಲಭಿಸಿತು.

ಕೂಡಲ ಸಂಗಮದ ಅಳಿವು ಉಳಿವು ವಿಚಾರದಲ್ಲಿ ಸಿರಿಗೆರೆ ಮಠ ಬೊಬ್ಬೆಹಾಕಿ ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿತು. ಕೊನೆಗೆ ಆದದ್ದೇನು? ಸಿರಿಗೆರೆ ಮಠಕ್ಕೆ ಮುಖ ಭಂಗವಾಯಿತು. ಮಹಾಚೈತ್ರ ವಿಚಾರದಲ್ಲಿಯೂ ಕೂಡ ಸಿರಿಗೆರೆ ಮಠ ಮುಂಚೂಣಿಯಲ್ಲಿ ಇತ್ತು. ಕೆಟ್ಟ ಸಾಹಿತ್ಯವನ್ನು ಪ್ರೊತ್ಸಾಹಿಸಿ ಶ್ರೀ ಗುರು ಬಸವಣ್ಣನವರಿಗೆ ಮತ್ತು ಶರಣರಿಗೆ ಅವಮಾನ ಮಾಡಿತು. ಆದರೂ ಮಾತಾಜಿ ಮತ್ತು ಅವರ ಶಿಷ್ಯರು ಹೋರಾಟ ಮಾಡಿ ಜಯಗಳಿಸಿದರು. ಬಸವ ಧರ್ಮ ಪೀಠ ಸ್ಥಾಪನೆ ಯಾದಾಗಲೂ ಕೆಲವು ಮಠಾಧಿಪತಿಗಳು ಬೊಬ್ಬೆಹಾಕಿದರು. ನಮಗೆ ಅಳ ಬೇಕೋ ನಗ ಬೇಕೋ ತಿಳಿಯದು. ಶ್ರೀ ಗುರು ಮರುಳಸಿದ್ಧರ ಹೆಸರಿನಲ್ಲಿ ಪೀಠವಿರಬಹುದಂತೆ. ಶ್ರೀ ಗುರು ತೋಂಟದ ಸಿದ್ಧಲಿಂಗೇಶ್ವರ ಹೆಸರಲ್ಲಿ ಪೀಠವಿರಬಹುದಂತೆ, ಪಂಚ ಪೀಠಗಳು ಇರಬಹುದಂತೆ. ಇನ್ನು ಎಷ್ಟೋ ಶರಣರ ಹೆಸರುಗಳಲ್ಲಿ ಪೀಠಗಳು / ಮಠಗಳು ಇರಬಹುದು. ಆದರೆ ಈ ಧರ್ಮವನ್ನು ಕೊಟ್ಟ ಶ್ರೀ ಗುರು ಬಸವಣ್ಣನವರ ಹೆಸರಲ್ಲಿ ಪೀಠ / ಮಠಗಳು ಇರಬಾರದಂತೆ, ಇದೆಂತಹ ಹಾಸ್ಯಾಸ್ಪದ. ಈ ದಿಸೆಯಲ್ಲಿ 800 ವರ್ಷಗಳಿಂದ ಈ ಮಠಾಧಿಪತಿಗಳು ಎಲ್ಲಿ ಹೋಗಿದ್ದರು? ಜಾತಿಗೊಂದು ಮಠ ಒಂದು ಪರಂಪರೆ ಬೆಳೆಸುತ್ತಾ ಧರ್ಮವನ್ನು ಕೊಟ್ಟ ಶ್ರೀ ಗುರು ಬಸವಣ್ಣನವರನ್ನು ನಿಧಾನವಾಗಿ ಮರೆಸುವ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಕಾರಣ ಈ ಮಠಾಧಿಪತಿಗಳಿಗೆ ಸಂಸ್ಕೃತದ ವ್ಯಾಮೋಹ, ಜಾತಿ ಮೋಹ, ವೇದ ಉಪನಿಷತ್‌ಗಳ ಮೇಲಿರುವ ಅಪಾರ ಪ್ರೇಮ ಅಲ್ಲದೇ ಮತ್ತೇನು? ಶ್ರೀ ಪಂಡಿತಾರಾಧ್ಯರು ಎಷ್ಟು ಜನ ಶಿಷ್ಯರಿಗೆ ಲಿಂಗ ಪೂಜೆ ಮಾಡುವುದನ್ನು ಕಲಿಸಿದ್ದಾರೆ. ಎಷ್ಟು ಜನ ಶಿಷ್ಯರನ್ನು ಸ್ಥಾವರ ಪೂಜೆ (ಗುಡಿಗಳಿಗೆ ಹೋಗುವುದನ್ನು) ತಪ್ಪಿಸಿದ್ದಾರೆ ಸ್ವಲ್ಪ ವಿಚಾರ ಮಾಡಿರಿ. ಎಷ್ಟೋ ಮಠಾಧಿಪತಿಗಳಿಗೆ ಲಿಂಗಪೂಜೆ ಮಾಡುವುದೇ ಗೊತ್ತಿಲ್ಲ. ಸಂಸ್ಕೃತ ಮಂತ್ರ ಪಠಿಸುತ್ತಾ ವೈದಿಕ ಸಂಪ್ರದಾಯ ಬೆಳೆಸುತ್ತಾ ಅದನ್ನೇ ಶಿಷ್ಯರಿಗೆ ಉಪದೇಶಿಸುತ್ತಾ ಬಂದಿದ್ದಾರೆ ಅಲ್ಲವೆ? ಬಸವಣ್ಣನವರ ಬಗ್ಗೆ ಈಗ ಮಾತನಾಡುವವರು ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಶ್ರೀ ಬಸವೇಶ್ವರರ ಹೆಸರಿಡಲು ಮಾತಾಜಿಯವರು ಮತ್ತು ರಾಷ್ಟ್ರೀಯ ಬಸವದಳಗಳು ಸತ್ಯಾಗ್ರಹ ಕೈಕೊಂಡಾಗ ಈ ಮಠಾಧಿಪತಿಗಳು ಎಲ್ಲಿ ಹೋಗಿದ್ದರು? ಶ್ರೀ ಗುರು ಬಸವೇಶ್ವರರ ಹೆಸರು ಇಡದಂತೆ ಎಷ್ಟು ತಮ್ಮ ಶಕ್ತಿ ಬಳಸಬೇಕೋ ಅಷ್ಟು ಬಳಸಿ ಕೆಡಿಸಲು ಅನುವಾದರು. ಈಗ ಶ್ರೀ ಗುರುಬಸವಣ್ಣನವರ ಬಗ್ಗೆ ಮಾತಾಡುತ್ತಿದ್ದಾರೆ.

ಪೂಜ್ಯ ಶ್ರೀ ಶಿವಮೂರ್ತಿ ಸ್ವಾಮಿಗಳು - ಚಿತ್ರದುರ್ಗ : ತಾ|| 9-10-1996ರಂದು ಸಂಯುಕ್ತ ಕರ್ನಾಟಕದಲ್ಲಿ ಶ್ರೀ ಶಿವಮೂರ್ತಿ ಮುರುಘರಾಜೇಂದ್ರಸ್ವಾಮೀಜಿ, ಚಿತ್ರದುರ್ಗದವರೂ ಕೂಡ ಈ ವಿಷಯ ಚರ್ಚಿಸಿ ''ಬಸವ ವಚನ ದೀಪ್ತಿ'' ವಾಪಾಸ್‌ಗೆ ಕರೆ ಕೊಟ್ಟಿದ್ದಾರೆ.

ಇವರೂ ಕೂಡ ವಿಷಯ ಚರ್ಚಿಸುವಾಗ ಅವರ ಸಣ್ಣತನವನ್ನು ತೋರಿಸಿದ್ದಾರೆ. ಪೂಜ್ಯರೂ ಕೂಡ ಶ್ರೀ ಪಂಡಿತಾರಾಧ್ಯರ ರೀತಿಯಲ್ಲೇ ಬರೆದಿದ್ದಾರೆ. ಭಾಷೆಗೆ ಇತಿಮಿತಿ ಬೇಕು. ಒಬ್ಬ ಜಗದ್ಗುರು ಇನ್ನೊಬ್ಬ ಜಗದ್ಗುರುಗಳ ಬಗ್ಗೆ ಬರೆಯುವಾಗ ಲೇಖಣಿಗೆ ಮತ್ತು ನಾಲಿಗೆಗೆ ಬಿಗಿ ಇರಬೇಕು. ಇವರ ಭಾಷೆಗೂ ಶ್ರೀ ಪಂಡಿತಾರಾಧ್ಯರ ಭಾಷೆಗೂ ಸಾಮ್ಯವಿದೆ. ಅದೇ ವಿಚಾರಧಾರೆ. ಅದೇ ಮಾತಾಜಿ ದೂಷಣೆ; ಬೇರೇನೂ ಇಲ್ಲ. ಎಲ್ಲಾ ವಿಚಾರಗಳನ್ನು ಈ ಮೇಲೆ ನಾನು ಚರ್ಚಿಸಿದ್ದೇನೆ. ಶ್ರೀ ಶಿವಮೂರ್ತಿಸ್ವಾಮಿಗಳು ಹೇಳಿದಂತೆ ಶ್ರೀ ಪೂಜ್ಯ ಮಾತಾಜಿಯವರು ಬಸವಣ್ಣನವರನ್ನು ಕೊಂದಿಲ್ಲ. ಈ ಮಹಾನ್ ಮಠಗಳ ಮಠಾಧಿಪತಿಗಳೆಂದು ಉಬ್ಬಿಕೊಂಡಿರುವ ಮಠಾಧಿಪತಿಗಳು ಬಸವಣ್ಣನವರನ್ನು ಸರ್ವನಾಶ ಮಾಡಿ ತಾವುಗಳು ಮೆರೆಯ ಬೇಕೆಂದು ಒಂದೇ ಒಂದು ಹೊಂಚಿನಿಂದ ಜನರನ್ನು ಅಡ್ಡದಾರಿಗೆ

ಎಳೆಯುತ್ತಾ ಬಂದಿದ್ದಾರೆ. ಸತ್ಯವನ್ನು ಮರೆಮಾಚುತ್ತಾ (Loco cults) ಜಾತಿ ಮಠಗಳನ್ನು ಪೋಷಿಸುತ್ತಾ ಬಂದಿದ್ದಾರೆ. ಚಿತ್ರದುರ್ಗದ ಮಠದ ಶ್ರೀ ಶಿವಮೂರ್ತಿ ಸ್ವಾಮಿಗಳು ಈಗ ಚಿತ್ರದುರ್ಗದಿಂದ ಬೆಂಗಳೂರಿಗೆ ತಮ್ಮ ಕಾರ್ಯ ಕ್ಷೇತ್ರವನ್ನು ಸ್ಥಳಾಂತರಿಸಿ ಇಲ್ಲಿರುವ ತಿಪ್ಪಶೆಟ್ಟಿ ಮಠ ಮತ್ತು ಸರ್ಪ ಭೂಷಣ ಮಠದ ಕಾರ್ಯಭಾರದಲ್ಲಿ ತೊಡಗಿದ್ದಾರೆ. ಹೈಕೋರ್ಟ್‌ತೀರ್ಪನ್ನು ಕಡೆಗಣಿಸಿ ಸರ್ಪಭೂಷಣ ಮಠದ ಸ್ವಾಮಿಗಳಿಗೆ ಕಿರುಕುಳ ಕೊಡುವುದು ಎಲ್ಲರಿಗೂ ತಿಳಿದ ವಿಷಯ. ಇದರ ಬಗ್ಗೆ ಅವರಿಗೆ ಬೇರೆ ಪತ್ರ ಬರೆಯುತ್ತೇನೆ. ಶ್ರೀ ಸರ್ಪ ಭೂಷಣ ಮಠ ಬೆಂಗಳೂರು ಮತ್ತು ಶ್ರೀ ತಿಪ್ಪಶೆಟ್ಟಿ ಮಠ, ಗಾಂಧಿನಗರ, ಬೆಂಗಳೂರು ಇವೆರಡು ಮಠಗಳ ಕಾರ್ಯಭಾರವನ್ನು ಹೇಗೆ ನಿಯಂತ್ರಿಸುತ್ತಾ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಮತ್ತು ಇವೆರಡು ಮಠಗಳನ್ನು ತಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಲು ಯಾವ ರೀತಿ ಗುಂಪು ಕಟ್ಟಿದ್ದಾರೆ ಎನ್ನುವ ವಿಚಾರ ಬೇರೆ ಬರೆಯುತ್ತೇನೆ. ಇದು ಪರ್ವಕಾಲ ಬಸವ ಧರ್ಮೀಯರು ಒಂದು ಕಡೆ ಸೇರುವ ಅವಕಾಶ ಮತ್ತು ಬಸವಣ್ಣನವರ ಅಂತರಂಗ ದ್ರೋಹಿಗಳು ಬೇರ್ಪಡುವ ಕಾಲ ಬಂದೊಂದಗಿದೆ. ಯಾರು ಇವರಲ್ಲಿ ಪ್ರಾಮಾಣಿಕರು ಎಂದು ಜನರೇ ತೀರ್ಮಾನಿಸುತ್ತಾರೆ. ಶ್ರೀ ಮಾತಾಜಿಯವರ ಜೊತೆ ಚರ್ಚಿಸುವ ಬದಲು ತಮ್ಮ ಕ್ರೋಧವನ್ನು ಈ ಮೂಲಕ ಪತ್ರಿಕೆಗಳ ಮುಖಾಂತರ ತೀರಿಸಿಕೊಂಡಿದ್ದಾರೆ. ಚಿತ್ರದುರ್ಗದ ಸ್ವಾಮಿಗಳು ಮತ್ತು ಸಿರಿಗೆರೆ ಸ್ವಾಮಿಗಳು ತಮ್ಮ ಜೀವಿತದಲ್ಲಿ ಏನೂ ಮಾಡುವುದು ಬೇಡ. ಇವೆರಡು ಮಠಗಳ ಸ್ವಾಮಿಗಳು ಮತ್ತು ಎರಡು ಮಠಗಳ ಭಕ್ತರು ಒಂದಾಗಿ ಬಾಳುವುದನ್ನಾದರೂ ಕಲಿಸಿ ಹೋಗಲಿ ಅಷ್ಟೇ ಸಾಕು. ಇಷ್ಟು ಮಾಡಿದರೆ ಎರಡೂ ಮಠಗಳ ಭಕ್ತರ ಉದ್ಧಾರವಾದೀತು. ಇನ್ನೇನೂ ಬೇಡ. ಶ್ರೀಗಳಿಗೆ ಧರ್ಮಪ್ರಚಾರ ಮಾಡುವದಕ್ಕಿಂತ ತಮ್ಮ ಸಾಮ್ರಾಜ್ಯವನ್ನು (ಅಕ್ರಮದಿಂದ ಆಸ್ತಿ ಮಾಡುವ) ಹಿಂದಿನ ಕಾಲದ ರಾಜರಂತೆ / ಪಾಳೇಗಾರರಂತೆ ವಿಸ್ತರಿಸುವ ಕಡೆ ಗಮನ ಹೆಚ್ಚೆಂದು ಕಾಣುತ್ತದೆ.

ಶ್ರೀ ಗೊ.ರು. ಚನ್ನ ಬಸಪ್ಪನವರ ವಿಚಾರ ಧಾರೆ : ಶ್ರೀಯುತ ಗೊ.ರು.ಚ. ಅವರು ತಮ್ಮ ವಿಚಾರಧಾರೆಯನ್ನು ತಾ|| 10-10-1996ರ ಸಂಯುಕ್ತ ಕರ್ನಾಟಕದ ''ಜನಮನ'' ಕಾಲಮ್‌ನಲ್ಲಿ ಬಿಡುಗಡೆ ಮಾಡಿದ್ದಾರೆ. ಸಾಹಿತಿಗೂ ಭಾಷೆಯ ಇತಿ ಮಿತಿ ಇರಬೇಕು. ಮನಬಂದಂತೆ ಟೀಕಿಸಿದ್ದಾರೆ. ಶ್ರೀ ಗೊ.ರೂ.ಚ. ರವರ ಒಂದು ವಿಚಾರದ ಬಗ್ಗೆ ಮಾತ್ರ ನನ್ನ ಅನಿಸಿಕೆ ಗಮನಹರಿಸುತ್ತೇನೆ. ಎಲ್ಲಾ ಶರಣರ ವಚನಗಳನ್ನು ಲಿಂಗದೇವ ಎಂದು ಮಾಡಬಹುದಲ್ಲವೇ ಎಂದಿದ್ದಾರೆ. ಹಾಗೆ ಮಾಡಲು ಬರುವುದಿಲ್ಲ. ಕಾರಣ '' ಶ್ರೀ ಗುರು ಬಸವ ಲಿಂಗಾಯನಮಃ'' ಮಂತ್ರವೇ ಮಾತ್ರ ಶ್ರೀ ಗುರು ಮಂತ್ರ ಮತ್ತು ಬಸವಣ್ಣನವರಿಗೆ ಸೀಮಿತ ಅವರೊಬ್ಬರೇ ಧರ್ಮ ಗುರು. ಈ ಮಂತ್ರದಲ್ಲಿ ಬಸವ + ಲಿಂಗ ಬಳಕೆ ಇವೆ. ಆದ್ದರಿಂದ ಬಸವ ಮತ್ತು ಲಿಂಗ ಒಂದಕ್ಕೊಂದು ಪೂರಕ ಮತ್ತು ಶ್ರೀ ಗುರು ಬಸವಣ್ಣನವರೇ ಇಷ್ಟಲಿಂಗ ಜನಕರು. ಆದ್ದರಿಂದ ''ಲಿಂಗ'' ಪದ ಬಸವಣ್ಣನವರ ವಚನಗಳಿಗೆ ಬಳಸ ಬಹುದೇ ವಿನಾ ಬೇರೆ ಶರಣರ ವಚನಗಳಿಗೆ ಅನ್ವಯಿಸುವುದಿಲ್ಲ. ಈ ಪಂಡಿತರಿಗೂ ಪೂಜ್ಯ ಮಾತೆಯವರನ್ನು ದ್ವೇಷಿಸುವ ಒಂದೇ ಒಂದು ಉದ್ದೇಶ ಎದ್ದು ಕಾಣುತ್ತದೆ. ಇವರು ಚರ್ಚಿಸಿದ ವಿಚಾರಗಳನ್ನು ಆಗಲೇ ನಾನು ಮೇಲೆ ಪ್ರಸ್ತಾಪಿಸಿದ್ದೇನೆ. ತಾವು ಪಂಡಿತರೆಂದು ತಿಳಿದು ದೊಡ್ಡ ದೊಡ್ಡ ಪದಗಳನ್ನು ಬಳಸಿ ಪೂಜ್ಯ ಮಾತಾಜಿಯವರ ತೇಜೋವಧೆ ಮಾಡಲು ಹೊರಟಿದ್ದಾರೆ ಅಷ್ಟೆ. ಇನ್ನೇನು ವಿಶೇಷವಿಲ್ಲ.

ಪೂಜ್ಯ ಜಗದ್ಗುರು ಗಂಗಾಧರಸ್ವಾಮಿಗಳು, ಮೂರು ಸಾವಿರ ಮಠ ಹುಬ್ಬಳ್ಳಿಯವರು: ಪೂಜ್ಯ ಜಗದ್ಗುರು ಗಂಗಾಧರ ಸ್ವಾಮಿಗಳು, ಮೂರು ಸಾವಿರ ಮಠ

ಹುಬ್ಬಳ್ಳಿ ಮತ್ತು ಅವರ ಶಿಷ್ಯರು ಒಂದೆಡೆ ಸಭೆಸೇರಿ ಇದರ ಬಗ್ಗೆ ಉಗ್ರಪ್ರತಿಭಟನೆ ಮಾಡಬೇಕೆಂದು ತಾ|| 5-10-1996ರಂದು ತೀರ್ಮಾನಿಸಿದ್ದಾರೆ: ಅವರ ಅನಿಸಿಕೆಗಳನ್ನು ಹೊರಗೆಡವಿದ್ದಾರೆ. ಇವರು ಯಾವಾಗಲೂ ಬಸವ ವಿರೋಧಿಗಳು ಎಂದು ಪ್ರಸಿದ್ಧರಾಗಿದ್ದಾರೆ. ಇವರು ಶೈವ ಪರಂಪರೆಗೆ ಅಂಟಿ ಕೊಂಡಿರುವ ಸ್ವಾಮಿಗಳು. ಶ್ರೀ ಗುರುಬಸವಣ್ಣನವರಿಗೆ ಎಂದೂ ಸ್ಪಂದಿಸಿಲ್ಲ. ಅಂತಹವರೂ ಕೂಡ ಈಗ ಬಸವ ವಚನ ದೀಪ್ತಿ ಬಗ್ಗೆ ಚರ್ಚೆ ನಡೆಸಿದ್ದಾರೆ. ಸಂತೋಷದ ವಿಷಯ ಕಾದು ನೋಡೋಣ. ಆರೋಪದಲ್ಲಿ ಹೊಸದೇನೂ ಇಲ್ಲ. ಅವೇ ಆರೋಪಗಳು ಪೂಜ್ಯ ಶ್ರೀ ಇಳಕಲ್ ಮಹಾಂತ ಸ್ವಾಮಿಗಳು ಒಬ್ಬಹರಿಜನ ಹುಡುಗನನ್ನು ನನ್ನ ಉತ್ತರಾಧಿಕಾರಿ ಮಾಡುತ್ತೇನೆ ಎಂದು ಘೋಷಿಸಿದಾಗ ಈ ಮೂರು ಸಾವಿರ ಜಗದ್ಗುರುಗಳು ಎಷ್ಟು ಹುಯಿಲೆಬ್ಬಿಸಿದರೆಂಬುದು ಎಲ್ಲರಿಗೂ ತಿಳಿದ ವಿಚಾರ.

ಕೋ. ಚನ್ನಬಸಪ್ಪ, ಬೆಂಗಳೂರು : ಇವರು ಮಾಡಿರುವ ಆಪಾದನೆಗಳು ಮತ್ತು ಇವರು ಉಪಯೋಗಿಸಿದ ಭಾಷೆ ಹೇಗಿದೆ ಎಂದರೆ ಒಬ್ಬ ಹೆಂಡಗುಡುಕನ ಭಾಷೆಯಂತಿದೆ. ಕುಡಿದ ಅಮಲಿನಲ್ಲಿ ಏನೇನೋ ಮಾತಾಡುವ ಕುಡುಕನ ಭಾಷೆಯಂತಿದೆ. ಇವರ ಬಗ್ಗೆ ಸಾಕಷ್ಟು ತಿಳಿದಿದ್ದೇನೆ. ಕೆಲವರು ಇವರನ್ನು ಕೋ ಎಂದರೆ ಕೋತಿ ಚನ್ನಬಸಪ್ಪ ಎಂತಲೂ ಕೊಚ್ಚೆ ಚನ್ನಬಸಪ್ಪ ಎಂತಲೂ ಪ್ರತಿಕ್ರಿಯಿಸುವುದನ್ನು ಕೇಳಿದ್ದೇನೆ. ಇವರು ಒಬ್ಬ ಅನಾಗರಿಕ ವ್ಯಕ್ತಿ ಎಂಬುದನ್ನು ತೋರ್ಪಡಿಸಿಕೊಂಡಿದ್ದಾರೆ. ಸಿದ್ಧಾಂತ, ತತ್ವಗಳ ಬಗ್ಗೆ ತಮ್ಮ ಗಮನವನ್ನೇ ಹರಿಸಿಲ್ಲ. ಇಂತಹವರ ಬಗ್ಗೆ ನಮ್ಮಂಥವರು ಮಾತಾಡಿ ನಮ್ಮ ಮನಸ್ಸು ಮತ್ತು ನಾಲಿಗೆಯನ್ನು ಮಲಿನ ಮಾಡಿಕೊಳ್ಳುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು.

ಬೀದರ್‌ನಲ್ಲಿ ಪ್ರತಿಭಟನೆ : ಬೀದರ್‌ನಲ್ಲಿ ತಾ || 5-10-1996ರಂದು ಭಾಲ್ಕಿಯ ಪಟ್ಟದ್ದೇವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕರೆದು ಪೂಜ್ಯ ಮಾತಾಜಿಯವರು ಈಗ ಜೈಪುರದಲ್ಲಿ ಇರುವುದರಿಂದ ಅವರು ಬಂದನಂತರ ಅವರ ಜೊತೆ ಈ ವಿಚಾರವನ್ನು ಚರ್ಚಿಸೋಣ ಎಂದು ತೀರ್ಮಾನ ಕೈಗೊಂಡಿದ್ದಾರೆ. ಇದು ಸುಸಂಸ್ಕೃತರ ಲಕ್ಷಣ ಇದು ಸ್ವಾಗತಾರ್ಹ.

ಪತ್ರಿಕೆಗಳಲ್ಲಿ ಪ್ರಕಟಿಸಿರುವ ಅಭಿಪ್ರಾಯಗಳನ್ನು ನೋಡಿದರೆ ಇವರೆಲ್ಲರಲ್ಲಿಯೂ ಒಂದೇ ಒಂದು ಅಂಶದ ಕಾರ್ಯಕ್ರಮವಿದೆ. ಅದೇನೆಂದರೆ ಬಸವ ವಚನ ದೀಪ್ತಿ ಪುಸ್ತಕದಲ್ಲಿ ಬರುವ ವಿಚಾರಧಾರೆ ಬಗ್ಗೆ ಚರ್ಚಿಸುವುದಕ್ಕಿಂತ ಮುಖ್ಯವಾಗಿ (One point Programme is like U.F. to oppose BJP only to keep them out of power) ಪೂಜ್ಯ ಮಾತೆ ಮಹಾದೇವಿಯವರನ್ನು ಖಂಡಿಸುವ ಒಂದೇ ಒಂದು ಅಂಶದ ಕಾರ್ಯಕ್ರಮವಿದೆ ಮತ್ತೇನೂ ಇಲ್ಲ. ತಾತ್ವಿಕವಾಗಿ ಒಬ್ಬರೂ ಚಿಂತಿಸಿಲ್ಲ. ಒಬ್ಬ ಮಹಾನ್ ಸಾಹಿತಿ, ಜಗದ್ಗುರುಗಳು ತಮ್ಮ ಜೀವನವನ್ನೇ ಶ್ರೀ ಗುರುಬಸವಣ್ಣನವರಿಗೆ ಪಣಕ್ಕಿಟ್ಟಿರುವ ವ್ಯಕ್ತಿ ಹೀಗೇಕೆ ಮಾಡಿದರು? ಇದರಲ್ಲಿ ಏನೋ ಆದರ್ಶ ವಿಚಾರ ಇರಬೇಕು ಎನ್ನುವ ಗೊಡವೆಗೆ ಒಬ್ಬರೂ ಹೋಗಿಲ್ಲ. ಪೂಜ್ಯ ಮಾತೆಯವರನ್ನು ತೆಗಳುವ ಏಕೈಕ ಸೂತ್ರ ಬಿಟ್ಟರೆ ಮತ್ತೇನೂ ಇಲ್ಲ. ಮಾತಾಜಿಯವರು ಕ್ರಾಂತಿಯ ಕಹಳೆಯನ್ನು ಪ್ರಾರಂಭಿಸಿದ್ದಾರೆ.

12ನೇ ಶತಮಾನದಲ್ಲೂ ಆದದ್ದು ಇದೇ ರೀತಿಯ ಕ್ರಾಂತಿ. ಶ್ರೀ ಗುರು ಬಸವಣ್ಣನವರ ಕ್ರಾಂತಿ ಕಾರಕ ವಿಚಾರಧಾರೆಗಳನ್ನು ಮೇಲ್ವರ್ಗದವರೆಂದು ತಿಳಿದ ಪಂಡಿತರು / ಜಾತಿವಾದಿಗಳು ಸ್ಪಂದಿಸಲೇ ಇಲ್ಲ. ಆದರೆ ಸಾಮಾನ್ಯ ಜನತೆ ಸ್ಪಂದಿಸಿತು. ಮೇಲ್ವರ್ಗದ ಪಂಡಿತೋತ್ತಮರ ಪಿತೂರಿ ಯಿಂದ ಕಲ್ಯಾಣ ಕ್ರಾಂತಿಯಾಯಿತು. ಅದರ ಪರಿಣಾಮ ಬಸವಾದಿಶರಣರ ತತ್ವಗಳು / ಸಾಹಿತ್ಯ ಜೀವಂತ ಉಳಿದವು. ಪಿತೂರಿ ಮಾಡಿ ಬಸವಣ್ಣನವರ

ವಿಚಾರಗಳನ್ನು ವಿರೋಧಿಸಿದ ಗುಂಪು ಹೇಳ ಹೆಸರಿಲ್ಲದೇ ಹೋಯಿತು. ಈಗ ಆಗುತ್ತಿರುವುದು ಇದೇನೆ. ಬಸವಾದಿ ಶರಣರ ತತ್ವಗಳನ್ನು ಜೀವಂತಗೊಳಿಸಿ ಒಂದು ಹೊಸ ಆಯಾಮವನ್ನು ಸೃಷ್ಟಿಸ ಹೊರಟಿರುವ ಪೂಜ್ಯ ಮಾತಾಜಿಯವರು ಮತ್ತು ಸತ್ಯವನ್ನು ಅರಿತ ಅವರ ಶಿಷ್ಯ ಕೋಟಿ ಒಂದು ಕಡೆ ಸಾಗುತ್ತಿದ್ದಾರೆ. ಇದನ್ನು ನೋಡಿ ಸಹಿಸಲಾರದ ಒಂದು ವಿತಂಡವಾದಿಗಳ ಗುಂಪು ಒಂದಂಶದ ಸೂತ್ರ ಹಿಡಿದು ಮಾತಾಜಿಯವರು ಮಾಡುತ್ತಿರುವ ಸಂದೇಶಗಳನ್ನು ವಿಕೃತಗೊಳಿಸುತ್ತಾ ಅವರಿಗೆ ಕೇಡನ್ನೇ ಬಯಸುತ್ತಾ ಇಲ್ಲಸಲ್ಲದ ಚೇಷ್ಟೆಗಳನ್ನು ಮಾಡುತ್ತಾ ಬಂದಿದ್ದಾರೆ. ಸತ್ಯ ಎಂದಿದ್ದರೂ ನಿಲ್ಲುತ್ತದೆ. ಅಸತ್ಯನಾಶವಾಗುತ್ತದೆ. ಇದು ಮಾತ್ರ ಗಟ್ಟಿ ಸಂಗತಿ.

ಹಿಂದೆ ನಡೆದ ಕೆಲವು ಘಟನೆಗಳು ಜ್ಞಾಪಕಕ್ಕೆ ಬರುತ್ತವೆ. ಅವುಗಳನ್ನು ಸ್ಮರಿಸುವುದು ಸೂಕ್ತ.

ಶ್ರೀ ಗುರುಬಸವಣ್ಣನವರು ಲಿಂಗಾಯತ ಧರ್ಮ ಸಂಸ್ಥಾಪಕರು ಮತ್ತು ಇಷ್ಟಲಿಂಗ ಜನಕರು ಎಂದು ಪೂಜ್ಯ ಲಿಂಗಾನಂದಸ್ವಾಮಿಗಳು ಮತ್ತು ಪೂಜ್ಯ ಮಾತಾಜಿಯವರು ಪ್ರತಿಪಾದಿಸಲು ಹೊರಟಾಗ ಇದೇ ಪಂಡಿತರು / ಮಠಾಧಿಪತಿಗಳು ವಿರೋಧಿಸಿದರು. ಬೊಬ್ಬೆಹಾಕಿದರು. ಆದರೆ ಕಾಲ ಕಳೆದಂತೆ ಇದು ಸತ್ಯ ಎಂದು ಜನತೆ ಒಪ್ಪಿಕೊಂಡಿತು. ಬೊಬ್ಬೆ ಹಾಕುತ್ತಿದ್ದ ಗುಂಪುಗಳು ತೆಪ್ಪಗಾದವು.

ಇತ್ತೀಚೆಗೆ ವೀರಶೈವ ಮತ್ತು ಲಿಂಗಾಯತ ಎಂಬ ಪದಗಳು ಬೇರೆ ಬೇರೆ. ಶ್ರೀ ಗುರು ಬಸವಣ್ಣನವರು ಕೊಟ್ಟದ್ದು ಲಿಂಗಾಯತ ಧರ್ಮವೇ ವಿನಾ ವೀರಶೈವವಲ್ಲ ಎಂದು ಪ್ರತಿಪಾದಿಸಲು ಪೂಜ್ಯ ಮಾತಾಜಿಯವರು ಶುರುಮಾಡಿದಾಗ ಇಂತಹದೇ ಗುಂಪು ಬೊಬ್ಬೆಹಾಕಿತು. ಇದರ ಬಗ್ಗೆ ಯಾರು ಬೇಕಾದರೂ ನಮ್ಮನ್ನು ಚರ್ಚೆಗೆ ಆಹ್ವಾನಿಸ ಬಹುದೆಂದೂ ಕರೆಕೊಟ್ಟರು. ಯಾರೂ ಪೂಜ್ಯ ಮಾತಾಜಿಯವರನ್ನು ಆಹ್ವಾನಿಸಲಿಲ್ಲ ಅವರೇ ಒಂದು ವೇದಿಕೆ ನಿರ್ಮಾಣಮಾಡಿ ಎಲ್ಲಾ ಪಂಡಿತರು / ಮಠಾಧಿಪತಿಗಳನ್ನು ಆಹ್ವಾನಿಸಿದರೂ ಬರಲಿಲ್ಲ ಕೊನೆಗೆ ಇದರ ಬಗ್ಗೆ ದಾಖಲೆಗಳ ಸಹಿತ ಒಂದು ಪುಸ್ತಕವನ್ನೇ ಬಿಡುಗಡೆ ಮಾಡಿ ಲಿಂಗಾಯತ ಬೇರೆ ವೀರಶೈವ ಬೇರೆ ಎಂದು ಪ್ರತಿಪಾದಿಸಿದರು. ಪುನಃ ಈ ವಿಚಾರಕ್ಕೆ ಯಾರೂ ತಲೆ ಹಾಕಲಿಲ್ಲ. ಆದರೆ ಒಳಗೊಳಗೆ ವೀರಶೈವ ಪಂಥದವರು ಲಿಂಗಾಯತ ಧರ್ಮವನ್ನು ವೀರಶೈವಧರ್ಮವೆಂದು ಇನ್ನೂ ಪ್ರತಿಪಾದಿಸುತ್ತಿದ್ದಾರೆ. ಸತ್ಯ ಈಗಾಗಲೇ ಹೊರ ಹೊಮ್ಮುತ್ತಿದೆ. ಹೀಗೆ ಪ್ರತಿಯೊಂದು ಬಸವ ತತ್ವಗಳ ಸತ್ಯಾನ್ವೇಷಣೆಗೆ ಪೂಜ್ಯ ಮಾತಾಜಿ ಹೋರಾಟ ಮಾಡುತ್ತಲೇ ಬಂದಿದ್ದಾರೆ; ಜಯ ಶೀಲರಾಗುತ್ತಿದ್ದಾರೆ. ಇದನ್ನು ಕಂಡು ವಿರೋಧಿಸುತ್ತಿರುವ ಗುಂಪಿಗೆ, 12ನೇ ಶತಮಾನದಲ್ಲಿ ಕೊಂಡಿ ಮಂಚಣ್ಣ, ನಾರಾಯಣಪಂಡಿತ ಮುಂತಾದವರಿಗಾದ ಗತಿಯೇ ಆಗುತ್ತಿದೆ. ಏಕೆಂದರೆ ಯಾವ ಕಾಲವಾದರೇನು ಸತ್ಯ ಸತ್ಯವೇ ವಿನಾ ಮಿಥ್ಯ ಎಂದೂ ಸತ್ಯವಾಗಲಾರದು. ಪೂಜ್ಯ ಪಂಡಿತಾರಾಧ್ಯರು ಲಿಂಗಾಯತವನ್ನು ಟೀಕಿಸಿದ್ದಾರೆ. ಇವರಿಗೆ ಲಿಂಗಾಯತ ಧರ್ಮದಲ್ಲಿ ನಂಬಿಕೆ ಇಲ್ಲದಿದ್ದರೆ ತಾವು ಶೈವ ವೀರಶೈವರೆಂದು ತಿಳಿದು ಯಾವುದಾದರೊಂದು ಶೈವ ವೀರಶೈವ (ವೈದಿಕ ಪರಂಪರೆ ಮಠಕ್ಕೆ) ಮಠಗಳ ಮೊರೆ ಹೋಗುವುದು ಉಚಿತ. ಸಿರಿಗೆರೆ ಮಠ ವಿರಕ್ತಮಠವಾದರೂ ಅಲ್ಲಿನ ಮಠಾಧಿಪತಿಗಳು ''ಪಂಡಿತಾರಾಧ್ಯರು'', ''ಶಿವಾಚಾರ್ಯರು'' ಎನ್ನುವ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಬಹುಷಃ ಇವರಿಗೆ ಬಸವಣ್ಣನವರು ಕೊಟ್ಟ ''ಲಿಂಗಾಯತ''

ಧರ್ಮಕ್ಕಿಂತ ಶೈವ / ವೀರಶೈವ ಪಂಥಗಳ ಮೋಹಕ್ಕೆ ಅಂಟಿಕೊಂಡಿದ್ದಾರೆ. ಇದು ದುರ್ದೈವದ ಸಂಗತಿ.

ಶ್ರೀ ಪಂಡಿತಾರಾಧ್ಯರ ಮತ್ತೊಂದು ಆರೋಪ ಶ್ರೀ ಬಸವಣ್ಣನವರನ್ನು ಸ್ಥಾವರಗೊಳಿಸಿ ಪೂಜೆ ಮಾಡಲು ಪೂಜ್ಯ ಮಾತಾಜಿ ಹಚ್ಚಿದ್ದಾರೆ ಎಂದು. ಇಲ್ಲಿ ಒಂದು ಸನ್ನಿವೇಶ ಜ್ಞಾಪಕಕ್ಕೆ ಬರುತ್ತದೆ. ಈ ಸನ್ನಿವೇಶ ಇಲ್ಲಿ ಪ್ರಸ್ತಾಪಿಸುವುದು ಉಚಿತ. ಈಗ್ಗೆ ಎರಡು ವರ್ಷಗಳ ಹಿಂದೆ ಚಿತ್ರದುರ್ಗದಲ್ಲಿ ಶ್ರೀ ಗುರು ಬಸವ ಮಂಟಪದ (Opening) ಉದ್ಘಾಟನೆ. ಅಂದು ಪೂಜ್ಯ ಮಾತಾಜಿಯವರ ಅಧ್ಯಕ್ಷತೆಯಲ್ಲಿ ಶ್ರೀ ಪಂಡಿತಾರಾಧ್ಯರು ಉಪಸ್ಥಿತರಿದ್ದರು. ಹಾಗೂ ಚಿತ್ರದುರ್ಗದ ಶ್ರೀ ಶಿವಮೂರ್ತಿ ಸ್ವಾಮಿಗಳ ಪ್ರತಿನಿಧಿ ಸ್ವಾಮಿಗಳು (ಚರಂತರು) ಉಪಸ್ಥಿತರಿದ್ದರು. ಚಿತ್ರದುರ್ಗದ ಸ್ವಾಮಿಗಳು ಬಸವಣ್ಣನವರ ಪೂಜೆಯನ್ನು ಜಾರಿಗೆ ತಂದರೆ ಬಸವಣ್ಣನವರ ತತ್ವಕ್ಕೇ (ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ) ಚ್ಯುತಿ ಬರುವುದಿಲ್ಲವೆ? ಎಂದು ಸೂಕ್ಷ್ಮವಾಗಿ ಪ್ರತಿಪಾದಿಸಿದರು. ಶ್ರೀ ಪಂಡಿತಾರಾಧ್ಯರು ಇದೇ ಸಮಯವನ್ನು ಉಪಯೋಗಿಸಿಕೊಂಡು ಬಾಯಿಗೆ ಬಂದಂತೆ ಮಾತಾಡಿ ಈ ಬಸವ ಪೂಜೆಯಿಂದ ಏನೂ ಆಗದು, ಪ್ರಾರ್ಥನೆಯಿಂದ ಏನೂ ಆಗದು ಮಾತಾಜಿ ಮಾಡುತ್ತಿರುವುದು ಬಸವ ವಿರೋಧಿ ಕೆಲಸ ಹಾಗೆ ಹೀಗೆ ಎಂದು ಮಾತಾಜಿಯವರನ್ನು ಮನಃ ಬಂದಂತೆ ಟೀಕಿಸಿದರು.

ಪೂಜ್ಯ ಮಾತಾಜಿಯವರು ಧೃತಿಗೆಡದೆ ಶ್ರೀ ಪಂಡಿತಾರಾಧ್ಯರ ಮಾತುಗಳನ್ನು ಕೂಲಂಕುಶವಾಗಿ ಚರ್ಚಿಸಿ ಅಂದಿನ ಸಭೆತಲೆದೂಗುವಂತೆ ಉತ್ತರಿಸಿ ಬಸವ ಪೂಜೆಯನ್ನು ಪ್ರತಿಪಾದಿಸಿದರು. ಶ್ರೀ ಪಂಡಿತಾರಾಧ್ಯರಿಗೆ ಶ್ರೀ ಮಾತಾಜಿಯವರು ಕೊಟ್ಟ ಉತ್ತರ ಚಡಪಡಿಸುವಂತಾಗಿ ಮುಖವನ್ನು ಸಿಂಡರಿಸಿಕೊಂಡು ಪೂಜ್ಯಮಾತೆಯವರಿಗೆ ಸೌಜನ್ಯತೆಗಾಗಿಯಾದರೂ ಹೇಳದೇ ಕೇಳದೇ ವೇದಿಕೆ ಬಿಟ್ಟು ಹೊರಟು ಹೋದರು. ನಾನು ಬಹಳ ಗಂಭೀರವಾಗಿ ಇವರ ಮನೋಭಾವವನ್ನು ಹತ್ತಿರದಿಂದ ನೋಡಿದೆ. ಶ್ರೀ ಪಂಡಿತಾರಾಧ್ಯರಲ್ಲಿ ಸನ್ಯಾಸಿಯಲ್ಲಿರ ಬೇಕಾದ ಸೌಜನ್ಯತೆಯನ್ನು ಕಾಣಲಿಲ್ಲ. ಮನೆಗೆ ಬಂದಳಿಯ ಮಾವನಮನೆಯಿಂದ ಯಾವುದೋ ಒಂದು ಕ್ಷುಲ್ಲಕ ವಿಷಯದ ಬಗ್ಗೆ ಸಿಡಿ ಮಿಡಿಗೊಂಡು ಮಾವನ ಮನೆ ಬಿಟ್ಟು ಹೋದಂತಿತ್ತು ಅಂದಿನ ಸಂದರ್ಭ. ಇದು ಬಹಳ ವಿಷಾದದ ಸಂಗತಿ ವಿಧಿ ಇಲ್ಲದೇ ಇಲ್ಲಿ ಪ್ರಸ್ತಾಪಿಸಿದ್ದೇನೆ. ಶ್ರೀ ಗುರುಬಸವಣ್ಣನವರ ಪೂಜೆಯನ್ನು ವಿರೋಧಿಸುವವರು ಎಲ್ಲಾ ಮಠಗಳಲ್ಲಿ ಆಯಾಯ ಮಠದ ಕರ್ತೃಗಳ ಪೂಜೆಯನ್ನು ಸಾಂಗೋಪಾಂಗವಾಗಿ ನಡೆಯುವಂತೆ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಶ್ರೀ ಗುರುಮರುಳಸಿದ್ಧರ ಪೂಜೆ, ಆನಗೋಡಿನಲ್ಲಿ ಆನಗೋಡಸಿದ್ದಪ್ಪ (ಆತನೊಬ್ಬಶರಣ)ನ ಪೂಜೆ, ಕಲ್ಲೇದೇವರಪುರದಲ್ಲಿ ಕಲ್ಲೇಶ್ವರ ಪೂಜೆ, ಉಳವಿಯಲ್ಲಿ ಶ್ರೀ ಚನ್ನಬಸವೇಶ್ವರರ ಪೂಜೆ, ಮಲೆ ಮಹಾದೇಶ್ವರ ಬೆಟ್ಟದಲ್ಲಿ ಮಲೆಯ ಮಹಾದೇಶ್ವರರ ಪೂಜೆ, ಖಾನ ಮಡುವಿನಲ್ಲಿ ಶ್ರೀ ಶರಣಸಂತರ ಪೂಜೆ, ಸರ್ಪಭೂಷಣ ಮಠದಲ್ಲಿ ಶ್ರೀ ಸರ್ಪಭೂಷಣ ಶಿವಯೋಗಿಗಳ ಪೂಜೆ, ಎಡೆಯೂರಿನಲ್ಲಿ ಎಡೆಯೂರು ಸಿದ್ದಲಿಂಗೇಶ್ವರರ ಪೂಜೆ ಗುಲ್ಬರ್ಗದಲ್ಲಿ ಶರಣ ಬಸವೇಶ್ವರರ ಪೂಜೆ ಮುಂತಾದ ಸ್ಥಳಗಳಲ್ಲಿ ಪೂಜೆ ನಡೆಯುತ್ತಲೇ ಇದೆ. ಇದಲ್ಲದೇ ಯಾವ ಲಿಂಗಾಯತರನ್ನು ಗುಡಿ ಗುಂಡಾರಗಳಿಗೆ ಹೋಗುವುದನ್ನು, ಈ ರೀತಿ ಪೂಜಿಸುವುದನ್ನು ಬಿಡಿಸಿದ್ದಾರೆ? ಒಂದೇ ಒಂದು ಉದಾಹರಣೆ ಕೊಡಲಿ ನೋಡೋಣ. ಅಂದರೆ ಇವರಿಗೆ ಏನು ಬೇಕಾದರೂ ಪೂಜಿಸಲಿ ಏನನ್ನು ಬೇಕಾದರೂ ಪೂಜಿಸಲಿ, ಯಾವ ಶರಣರನ್ನು ಬೇಕಾದರೂ ಪೂಜಿಸಲಿ ಆದರೆ ಧರ್ಮವನ್ನು ಕೊಟ್ಟ ಶ್ರೀ ಗುರುಬಸವಣ್ಣನವರನ್ನು ಮಾತ್ರ

ಪೂಜಿಸಬಾರದು ಇದು ಇವರ ಧ್ಯೇಯ ಅಲ್ಲವೆ? ಇವರು ಎಂತಹ ಶರಣಪರಂಪರೆಯಲ್ಲಿ ಬಂದ ಮಠಾಧಿಪತಿಗಳು ಎಂದು ಶಿಷ್ಯರೇ ತೀರ್ಮಾನಿಸಬೇಕು. ಪೂಜ್ಯ ಶ್ರೀ ಪಂಡಿತಾರಾಧ್ಯರು ಬಸವಣ್ಣನವರ ವಚನಗಳಿಗೆ ಮಾತಾಜಿಯವರ ಶಸ್ತ್ರಚಿಕಿತ್ಸೆ ಎಂದು ಕರೆದಿದ್ದಾರೆ. ಇದು ಒಳ್ಳೆಯ ಮಾತು. ಇದನ್ನು ನಾನು ಸ್ವಾಗತಿಸುತ್ತೇನೆ. ಪೂಜ್ಯ ಪಂಡಿತಾರಾಧ್ಯರಿಗೆ ಕರುಳಿನಲ್ಲಿ ಒಂದು ದೊಡ್ಡ ಕಲ್ಲುಗಂಟು ಸೇರಿದೆ ಎಂದು (Surgery) ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರು. ಯಾವ ಔಷಧಿ, ಮಾತ್ರೆಗಳಿಂದ ಗುಣವಾಗಲಿಲ್ಲ, ಹೊಟ್ಟೆನೋವು ಕಡಿಮೆ ಆಗಲಿಲ್ಲ. ಶಸ್ತ್ರ ಚಿಕಿತ್ಸೆಯಿಂದ ಗುಣವಾಯಿತು. ಹಾಗೆಯೇ ಬಸವತತ್ವಗಳನ್ನು ಹಿಗ್ಗಾ ಮುಗ್ಗ ಎಳೆದಾಡಿ ಜನತೆಯನ್ನು ತಪ್ಪುದಾರಿಗೆಳೆಯುವ ಕೆಲವು ಮಠಾಧಿಪತಿಗಳಿಗೆ ಮತ್ತು ಕೆಲವು ಪಂಡಿತರಿಗೆ (Surgery) ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇತ್ತು. ಆದ್ದರಿಂದ (Surgery) ಶಸ್ತ್ರ ಚಿಕಿತ್ಸೆ ಮಾಡಿ ಸಂಪೂರ್ಣ ಪರಿಹಾರ ಮಾಡಿಕೊಟ್ಟಿದ್ದಾರೆ. ಇದನ್ನು ತಿಳಿಯುವುದು ಉತ್ತಮ. ಇನ್ನು ಮುಂದಾದರೂ ಕಲಬೆರಕೆ ಮಾತ್ರೆಗಳನ್ನು ಜನರಿಗೆ ಈ ಕಾವಿಧಾರಿಗಳು / ಪಂಡಿತರು ಕೊಟ್ಟು ಅಡ್ಡದಾರಿಗೆಳೆಯ ಬಾರದೆಂದು ಶಸ್ತ್ರಕ್ರಿಯೆ ಮಾಡಿದ್ದಾರೆ. ಈ ಪದ ಬಳಕೆ ಮಾಡಿದ್ದಕ್ಕೆ ಶ್ರೀ ಪಂಡಿತಾರಾಧ್ಯರಿಗೆ ಅಭಿನಂದನೆಗಳು.

"ಶ್ರೀ ಗುರು ಬಸವಲಿಂಗಾಯನಮಃ" ಎಂಬ ಗುರು ಮಂತ್ರವನ್ನು ಬಳಕೆಗೆ ತರಲು ಪೂಜ್ಯ ಲಿಂಗಾನಂದ ಸ್ವಾಮಿಗಳು, ಪೂಜ್ಯ ಮಾತಾಜಿಯವರು ಪಟ್ಟಪರಿಶ್ರಮ ಅಷ್ಟಿಷ್ಟಲ್ಲ. ಈಗ ಪ್ರತಿಯೊಬ್ಬ ಲಿಂಗಾಯತರಿಗೂ ಈ ಮಂತ್ರದ ಪ್ರಜ್ಞೆ ಬಂದಿದೆ. ಎಲ್ಲಾ ಮಠಾಧಿಪತಿಗಳಿಗೂ ಬಂದಿದೆ, (ಸುತ್ತೂರು ಮಠ ಮತ್ತು ಸಿರಿಗೆರೆ ಮಠಗಳನ್ನು ಹೊರತು ಪಡಿಸಿ). ಈ ಮಠಾಧಿಕಾರಿಗಳಿಗೆ ಶ್ರೀ ಗುರುಬಸವಣ್ಣನವರನ್ನು ಲಿಂಗಾಯತ ಧರ್ಮದ ಗುರುವೆಂದು ಈ ಮೇಲಿನ ಮಂತ್ರವನ್ನು ಶ್ರೀ ಗುರುಮಂತ್ರವೆಂದು ಒಪ್ಪಿಕೊಳ್ಳಲು ಇನ್ನೂ ಹೃದಯವಂತಿಕೆ ಬಂದಂತಿಲ್ಲ. ಇನ್ನೂ ಶ್ರೀ ಮರುಳಸಿದ್ಧ ಪ್ರಸನ್ನ - ಶಿವ ಎಂದು ತಮ್ಮ ಬರವಣಿಗೆಗಳಲ್ಲಿ ಉಪಯೋಗಿಸುತ್ತಿದ್ದಾರೆ. ಶ್ರೀ ಮರುಳಸಿದ್ದೇಶ್ವರರು ಶ್ರೀ ಗುರು ಬಸವಣ್ಣನವರ ದಾರಿಯಲ್ಲಿ ನಡೆದು ಬಂದ ಒಬ್ಬಶ್ರೇಷ್ಠ ಶರಣರು. ಇದು ಎಲ್ಲರಿಗೂ ತಿಳಿದ ವಿಚಾರ. ಆದರೆ ಬಸವಣ್ಣನವರ ಸ್ಥಾನ ಯಾವ ಶರಣರಿಗೂ ಲಭಿಸದು. ಇದನ್ನು ಪೂಜ್ಯರು ತಿಳಿದರೆ ಒಳ್ಳೆಯದು.

ಈ ಮೇಲಿನ ವಿಚಾರಧಾರೆಗಳಿಂದ ಶ್ರೀ ಗುರು ಬಸವಣ್ಣನವರನ್ನು ಪೂಜಿಸುವುದೆಂದರೆ ಸ್ಥಾವರ ಗೊಳಿಸುವದಲ್ಲ. ಶ್ರೀ ಗುರು ಬಸವಣ್ಣನವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು. ಶ್ರೀ ಪ್ರಭುದೇವರು ಹೀಗೆ ಹೇಳಿದ್ದಾರೆ.

ಬ ಎಂಬಲ್ಲಿ ಎನ್ನ ಭವವು ಹರಿಯಿತ್ತಯ್ಯಾ
ಸ ಎಂಬಲ್ಲಿ ಸರ್ವಜ್ಞಾನಿಯಾದೆನಯ್ಯಾ
ವ ಎಂದು ವಚಿಸುವಡೆ ವಸ್ತು ಚೈತನ್ಯಾತ್ಮಕನಾದೆನಯ್ಯಾ
ಇಂತೀ ಬಸವಾಕ್ಷರತ್ರಯಂಗಳೆನ್ನ ಸರ್ವಾಂಗದಲ್ಲಿ
ತೊಳಗಿ ಬೆಳಗುತ್ತಿರ್ದುದ ಕಂಡು
ಆನು ನೀನು ಬಸವಾ ಬಸವಾ ಎನುತಿರ್ದವಯ್ಯಾ ಗುಹೇಶ್ವರ

ಶ್ರೀ ಪ್ರಭುದೇವರೂ ಕೂಡ ದೇವರನ್ನು ಕೇಳುತ್ತಾರೆ ನಾನು ಮತ್ತು ನೀನು (ಪ್ರಭುದೇವರು ಮತ್ತು ದೇವರು) ಬಸವಾ ಬಸವಾ ಎನ್ನಬೇಕು ಎಂದಿದ್ದಾರೆ. ಶ್ರೀ

ಪ್ರಭುದೇವರು ಮುಂತಾದ ಎಲ್ಲಾ ಶರಣರು ಬಸವಣ್ಣನವರನ್ನು ಕೊಂಡಾಡಿ ಹೊಗಳಿದ್ದಾರೆ. ಎಲ್ಲಾ ಶರಣರು ಶ್ರೀ ಗುರು ಬಸವಣ್ಣನನ್ನು ಭಕ್ತಿ ಪೂರ್ವಕ ಹೊಗಳಿದ್ದಾರೆ ಮತ್ತು ಪೂಜಿಸಿದ್ದಾರೆ. ಆದರೆ ಈಗ ಕೆಲವು ಕಾವಿಧಾರಿಗಳು ಅಹಂಕಾರದಿಂದ ತಾವೇ ದೊಡ್ಡವರು ಜನತೆ ನಮ್ಮನ್ನು ಪೂಜಿಸಬೇಕು ಅದು ಬಿಟ್ಟು ಬಸವಣ್ಣನವರನ್ನು ಪೂಜಿಸುತ್ತಾರಲ್ಲ ಎಂದು ಹಲುಬುತ್ತಿದ್ದಾರೆ ಅಷ್ಟೆ.

ಕೊನೆಯ ನನ್ನ ತೀರ್ಮಾನ ಹೀಗಿದೆ. ನಮ್ಮ ದೇಶವನ್ನು ಭ್ರಷ್ಟರು, ಡಕಾಯಿತರು, ಕುಡುಕರು, ದೇಶ ದ್ರೋಹಿಗಳು ಆಳುತ್ತಿದ್ದಾರೆ. ಇದು ಸತ್ಯ ಆದರೆ ಪ್ರತಿ ಪಾದಿಸುವುದು ಕಷ್ಟ ಸಾಧ್ಯ. ಎಲ್ಲ ಪಾರ್ಟಿಗಳು ಜಾತಿ ವಾದಿಗಳಾಗಿದ್ದರೂ, ಬಿ. ಜೆ. ಪಿ. ಯನ್ನು ಜಾತಿ ಪಾರ್ಟಿ ಎಂಬ ಪಟ್ಟ ಕಟ್ಟಿ ತಾವು ಮೇಲಿನ ಎಲ್ಲಾ ದುರ್ಗುಣಗಳನ್ನು ಹೊಂದಿದ್ದು ಒಂದಾಗಿ ಈ ರಾಷ್ಟ್ರವನ್ನು ಆಳುತ್ತಿರುವಂತೆ ಎಲ್ಲಾ ಜಾತಿವಾದಿ ಮಠಾಧಿಪತಿಗಳು, ಸಾಹಿತಿಗಳು (ಕೆಲವರನ್ನು ಹೊರತುಪಡಿಸಿ) ಮಾತಾಜಿಯವರಿಗೆ ಇಲ್ಲಸಲ್ಲದ ಆರೋಪಹೊರಿಸಿ ಅವರ ತೇಜೋವಧೆ ಮಾಡುವ ಒಂದಂಶದ ಕಾರ್ಯಕ್ರಮ ನಡೆಸಿದ್ದಾರೆ ಅಷ್ಟೆ. ಈ ಮೇಲೆ ಚರ್ಚಿಸಿದ ಕೆಲವು ವಿಚಾರಗಳು ಅಪ್ರಸ್ತುತವೆಂದು ಕಂಡು ಬಂದರೂ ಒಂದಲ್ಲಾ ಒಂದು ರೀತಿಯಲ್ಲಿ ಪ್ರಸ್ತುತವಾಗಿವೆ. ಅವರವರ ವಿಚಾರ ಧಾರೆಗಳು ಏನು ಎಂಬುದನ್ನು ಬಯಲು ಮಾಡಲು ಚರ್ಚಿಸಿದ್ದೇನೆ. ಆದ್ದರಿಂದ ''ಬಸವ ವಚನ ದೀಪ್ತಿ'' ಪುಸ್ತಕದ ವಿಮರ್ಶೆಗೆ ಪೂರಕವಾಗಿ ಎಂದು ತಿಳಿದು ಚರ್ಚಿಸಿದ್ದೇನೆ. ಬಸವ ವಚನ ದೀಪ್ತಿಯಲ್ಲಿ ಪೂಜ್ಯ ಮಾತಾಜಿಯವರು ಮಾಡಿರುವ ಪ್ರಸ್ತಾವನೆಯನ್ನು ಹೃದಯವಂತಿಕೆಯಿಂದ ಓದಿದ್ದರೆ ಈ ಗೊಂದಲಗಳಿಗೆ ಅವಕಾಶವಿರುತ್ತಿರಲಿಲ್ಲವೆಂದು ನನಗನಿಸುತ್ತದೆ. ಕೂಲಂಕುಶವಾಗಿ ಓದಿದ್ದರೂ ಕೂಡ ಮೇಲಿನ ಅವರವರ ವಿಚಾರಧಾರೆಗಳಿಗೆ ಬದ್ಧರಿದ್ದುದೇ ಆದರೆ ಇವರಿಗೆ ಸಿದ್ಧಾಂತ / ತತ್ವಗಳಿಗಿಂತ ಮತ್ತು ಶ್ರೀ ಗುರು ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮದ ಬೆಳವಣಿಗೆಗಿಂತ ಪೂಜ್ಯ ಶ್ರೀ ಮಾತಾಜಿಯವರ ತೇಜೋವಧೆ ಮಾಡುವುದೇ ಅವರಿಗೆ ಮುಖ್ಯವೆಂದು ಸ್ಪಷ್ಟವಾಗುತ್ತದೆ.

ಶ್ರೀ ಗುರು ಬಸವಣ್ಣನವರೇ ಎಲ್ಲರ ಕಣ್ಣುತೆರೆಸಲಿ ಎಂದು ಹಾರೈಸುತ್ತೇನೆ. ಪೂಜ್ಯ ಮಾತಾಜಿಯವರು ಈಗ ಜೈಪುರದಲ್ಲಿ ವಾಸ್ತವ್ಯ ಇರುವುದರಿಂದ ಅವರು ಬಂದನಂತರ ಬೇಕಾದವರು ಅವರೊಂದಿಗೆ ಚರ್ಚಿಸಬಹುದು. ಅವರ ಪ್ರತಿಕ್ರಿಯೆಗಳನ್ನು ಕಾದುನೋಡುವುದು ಸುಸಂಸ್ಕೃತರ ಲಕ್ಷಣ ಎಂದು ಹಾರೈಸಿ ನನ್ನ ವಿಚಾರಧಾರೆಗಳಿಗೆ ವಿದಾಯ ಹೇಳುತ್ತೇನೆ.

ಬೆಂಗಳೂರು : 26- 10- 1996

(ಹೆಚ್.ಎ. ಶರಣಪ್ಪ)
(ನಿವೃತ್ತ) ಲೇಖನಿಯತ್ರಣಾಧಿಕಾರಿ
ಅಕ್ಕಮಹಾದೇವಿ ನಿಮಯ

ಮುಖ್ಯಮಂತ್ರಿ ಶ್ರೀ ಜೆ.ಹೆಚ್.ಪಟೇಲರ ವಿರುದ್ಧ ಬೆಂಗಳೂರು ನಗರದ ನ್ಯಾಯಾಲಯದಲ್ಲಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ

ಮಾನನಷ್ಟ ಮೊಕದ್ದಮೆ

ಬೀದರ ನಗರದಿಂದ ಪ್ರಕಟವಾಗುವ ''ಉತ್ತರ ಕರ್ನಾಟಕ'' ದಿನ ಪತ್ರಿಕೆ ಮತ್ತು ಇನ್ನಿತರ ಕೆಲವು ದಿನ ಪತ್ರಿಕೆಗಳಲ್ಲಿ ಶ್ರೀ ಜೆ.ಹೆಚ್.ಪಟೇಲರು ಹೇಳಿದರೆಂದು ಪ್ರಚಾರವಾಗಿರುವ ಅತಿರೇಕದ ಹೇಳಿಕೆಯಿಂದ ಅಪಾರವಾಗಿ ನೊಂದಿರುವ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮುಖ್ಯಮಂತ್ರಿಗಳ ವಿರುದ್ಧ ಬೆಂಗಳೂರು ಮಹಾನಗರದ ಮೂರನೇ ಮುಖ್ಯ ಅಪರ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆಯನ್ನು ಹೂಡಿದ್ದಾರೆ.

''ಮಾತೆ ಮಹಾದೇವಿಯವರನ್ನು ಬಂಧಿಸಿ, ಜೈಲಿಗೆ ಹಾಕುತ್ತೇನೆ.'' ಎಂದು ನವಂಬರ ೫ ರಂದು ಶ್ರೀ ಜೆ.ಹೆಚ್.ಪಟೇಲರು ಹೇಳಿದುದಾಗಿ ಉತ್ತರ ಕರ್ನಾಟಕ ಪತ್ರಿಕೆಯ ನವಂಬರ ೬ರ ಸಂಚಿಕೆಯಲ್ಲಿ ವರದಿಯಾದುದನ್ನು ಮತ್ತು ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ ದಿನಪತ್ರಿಕೆಗಳಲ್ಲಿ ವರದಿಯಾದ ಇನ್ನಿತರ ಅತಿರೇಕದ ಹೇಳಿಕೆಗಳನ್ನು ಆಧರಿಸಿ ಈ ಮೊಕದ್ದಮೆ ಹೂಡಲಾಗಿದೆ.

''ಭಾರತ ದೇಶಕ್ಕೊಂದು ಸಂವಿಧಾನವಿದೆ; ಅದರ ಸಂರಕ್ಷಣೆಗೆ ನ್ಯಾಯಾಂಗವಿದೆ. ಮುಖ್ಯಮಂತ್ರಿಗಳಾದ ಮಾತ್ರಕ್ಕೆ ಸಂವಿಧಾನ, ನ್ಯಾಯಾಂಗ, ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಕ್ರಮಬದ್ಧ ವಿಚಾರಣೆಯಿಲ್ಲದೆ ಯಾರನ್ನು ಬೇಕಾದರೂ ಅಪರಾಧಿ ಎಂದು ಜೈಲಿಗೆ ಹಾಕುವಷ್ಟು ಮುಖ್ಯಮಂತ್ರಿಗಳು ಸ್ವತಂತ್ರರೆ?''

ಇಂಥ ಅತಿರೇಕದ ಹೇಳಿಕೆಯಿಂದ ತಾವು ಬಹಳಷ್ಟು ನೊಂದಿರುವುದಾಗಿಯೂ ಮತ್ತು ಇಂಥ ಅಸಂಬದ್ಧ ಹೇಳಿಕೆಯಿಂದ ಹಲವು ಬಗೆಯ ಅಪಾರ್ಥ, ಗೊಂದಲ ಉಂಟಾಗಿದೆಯಾದ್ದರಿಂದ ಅನಿವಾರ್ಯವಾಗಿ ನ್ಯಾಯಾಲಯದ ಮೊರೆ ಹೋಗಬೇಕಾಯಿತೆಂದು ಪೂಜ್ಯ ಮಾತಾಜಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

''ಬಸವ ವಚನ ದೀಪ್ತಿ'' ಪುಸ್ತಕವು ಧರ್ಮಪಿತ ಬಸವಣ್ಣನವರ ವಚನಗಳ ಸಂಗ್ರಹವಾಗಿದ್ದು, ಇದರ ಪ್ರಸ್ತಾವನೆ, ಮುನ್ನುಡಿ ಏನೊಂದೂ ಓದದೆ ಮನಸ್ಸಿಗೆ ಬಂದಂತೆ ಮಾತನಾಡಿದ್ದಾರೆ. ಕಾನೂನು ಕ್ರಮ ಕೈಗೊಳ್ಳಲು ಈ ದೇಶದಲ್ಲಿ ಎಲ್ಲರೂ ಸ್ವತಂತ್ರರು. ಆದರೆ ಆ ರೀತಿ ಮಾಡುವುದಾಗಿ ಪತ್ರಿಕೆಗಳಲ್ಲಿ ಪ್ರಕಟಿಸಿ ಒಂದು ಬಗೆಯ ಬೆದರಿಕೆ ಹಾಕುವ ಮೂಲಕ, ಕಾನೂನನ್ನೇ ಕೈಗೆ ತೆಗೆದುಕೊಂಡು ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಚ್ಯುತಿ ತಂದಿರುವುದಲ್ಲದೆ, ಪೂಜ್ಯ ಮಾತಾಜಿಯವರ ಭಕ್ತರು ಭಯಗ್ರಸ್ತರಾಗುವಂತೆ ಮಾತನಾಡಿದ್ದಾರೆ.

''ಬಸವ ವಚನ ದೀಪ್ತಿ'' ಪುಸ್ತಕದ ಮಾರಾಟವನ್ನು ಆಗಲೇ ನಿಷೇಧಿಸಲಾಗಿದೆಯೆಂದು, ಪುಸ್ತಕವನ್ನೇ ನಿಷೇಧಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸುಳ್ಳು

ಹೇಳಿಕೆ ನೀಡಿ ಸಾರ್ವಜನಿಕರನ್ನು ತಪ್ಪುದಾರಿಗೆ ಎಳೆದಿದ್ದಾರೆ. ಚಿತ್ರದುರ್ಗದಲ್ಲಿ ಓರ್ವರು ಹೂಡಿದ ದಾವೆಗೆ ಪ್ರತಿಕ್ರಿಯೆಯಾಗಿ 'ಯಥಾಸ್ಥಿತಿ' ಕಾಯ್ದುಕೊಳ್ಳಲು ಸಂಬಂಧಿಸಿದ ನ್ಯಾಯಾಧೀಶರು ಆದೇಶ ನೀಡಿದ್ದಾರೆ. ಹೀಗಿರುವಾಗ ಪುಸ್ತಕ ಮಾರಾಟ ನಿಷೇಧಿಸಲಾಗಿದೆ ಎಂದು ಸುಳ್ಳು ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿಯಂತಹ ಜವಾಬ್ದಾರಿ ಸ್ಥಾನದಲ್ಲಿರುವವರು ಹೀಗೆ ಮುಂದಾಲೋಚನೆಯಿಲ್ಲದೆ ಮಾತನಾಡುವುದು ದುರ್ದೈವದ ಸಂಗತಿಯಾಗಿದೆ. ಆದ್ದರಿಂದ ವೈಯಕ್ತಿಕವಾಗಿ ನೊಂದಿರುವ ತಾವು ನ್ಯಾಯದಾನವನ್ನು ಕೋರುವುದು ಅನಿವಾರ್ಯವಾಯಿತು.'' ಎಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ತಿಳಿಸಿದ್ದಾರೆ.

ಬೀದರ ನಗರದಲ್ಲಿ ಇಂಥ ಹೇಳಿಕೆ ಕೊಡುವ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಶ್ರೀ ಜೆ.ಹೆಚ್.ಪಟೇಲರ ಸಂಗಡ ಸಚಿವರುಗಳಾದ ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಶ್ರೀ ಮಿರಾಜುದ್ದೀನ ಪಟೇಲ, ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಅವರು ಇದ್ದುದರಿಂದ ಅವರನ್ನು ಸಾಕ್ಷಿದಾರರನ್ನಾಗಿ ಮಾಡಲಾಗಿದೆ. ಬೆಂಗಳೂರು ಮಹಾನಗರದ ಮೂರನೆಯ ಅಪರ ಮುಖ್ಯ ನ್ಯಾಯಾಲಯಕ್ಕೆ ದಾವೆ ಸಲ್ಲಿಸಲು ಬಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರೊಡನೆ ಅವರ ಪರ ವಕೀಲರಾದ ಶ್ರೀ ಜಯರಾಜ್, ಶ್ರೀ ಧನರಾಜ್ ಅವರಲ್ಲದೆ ಲಿಂಗಾಯತ ಧರ್ಮ ಮಹಾಸಭಾಧ್ಯಕ್ಷ ಶ್ರೀ ಎನ್.ಪುಟ್ಟರುದ್ರಪ್ಪ, ರಾಷ್ಟ್ರೀಯ ಬಸವ ದಳದ ಉಪಾಧ್ಯಕ್ಷೆ ಶ್ರೀಮತಿ ದೇವಿಕಾ ಶರಣಪ್ಪ, ಸದಸ್ಯೆ ಶ್ರೀಮತಿ ಛಾಯಾ ಜಯರಾಜ್ ಅವರೂ ಉಪಸ್ಥಿತರಿದ್ದರು.

ಡಿ.ಎಸ್.ವಿಜಯಾನಂದರು
ಕಾರ್ಯದರ್ಶಿ, ವಿಶ್ವಕಲ್ಯಾಣ ಮಿಷನ್, ಬೆಂಗಳೂರು.

ಶರಣ ಮೇಳಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು

ಪ್ರತಿ ವರ್ಷವೂ ಶರಣ ಮೇಳಕ್ಕೆ ಬರುವ ಯಾತ್ರಾರ್ಥಿಗಳಿಗಾಗಿ ಕೆ.ಎಸ್.ಆರ್.ಟಿ.ಸಿ ವಿಶೇಷ ಬಸ್ಸುಗಳನ್ನು ರಾಜಧಾನಿ ಬೆಂಗಳೂರಿನಿಂದ ಮತ್ತು ಇನ್ನಿತರ ಕೇಂದ್ರಗಳಿಂದ ಜನರ ಬೇಡಿಕೆಯ ಮೇಲೆ ಹೊರಡಿಸಿ ಸಹಕರಿಸುವುದು. ಅದರಂತೆಯೇ ಈ ವರ್ಷವೂ ಸಹ ಸಹಕರಿಸಲಿದೆ. ಇದರ ಸದುಪಯೋಗ ಮಾಡಿಕೊಳ್ಳಬೇಕು ಮತ್ತು ಕೆ.ಎಸ್.ಆರ್.ಟಿ.ಸಿ ಕೇಂದ್ರ ಕಛೇರಿಯ ಆದೇಶದ ಪ್ರತಿ ಬೇಕಾದವರು ಶರಣ ಮೇಳದ ಬೆಂಗಳೂರು ಕಾರ್ಯಲಯ ವಿಳಾಸಕ್ಕೆ ಪತ್ರ ಬರೆದು ತರಿಸಿಕೊಳ್ಳಿರಿ.

-ಶರಣ ವಿಜಯಾನಂದರು

ಬಸವರ ನೋಟದ ಮೇಲೆ ಒಂದು ಕ್ಷ ಕಿರಣ

-ಶ್ರೀ ಕಂಠಕುಮಾರ್

ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳೇ,
ಸಮಸ್ತ ನಿಜ ಬಸವ ಭಕ್ತರೇ,

ಧರ್ಮಗುರು ನಿಂದಕರಾದ ಶಿವಮೂರ್ತಿ ಸ್ವಾಮಿಗಳಿಗೆ ಧಿಕ್ಕಾರ
ಶರಣ ದ್ರೋಹಿ, ಕುಟಿಲ ಬರಹಗಾರ ಪಿ.ಎಂ.ಗಿರಿರಾಜನಿಗೆ ಧಿಕ್ಕಾರ

ಲಿಂಗವಂತರೇ ಬಸವ ಗುರು ನಿಂದಕರಾದ
ಚಿತ್ರದುರ್ಗದ ಶಿವಮೂರ್ತಿ ಸ್ವಾಮಿಗಳಿಗೆ ಬುದ್ಧಿ ಕಲಿಸಿರಿ
(ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ ಶ್ರೀ ಬೃಹನ್ಮಠ,
ಚಿತ್ರದುರ್ಗ-೫೭೭೫೦೧)

ಇವರು ಪಿ.ಎಂ.ಗಿರಿರಾಜನೆಂಬ ಬಸವ ನಿಂದಕನಿಂದ ಬರೆಸಿ ೧೯೯೬ರಲ್ಲಿ
ಪ್ರಕಟಿಸಿರುವ " **ಬಸವರ ನೋಟ** "

ಬಸವಣ್ಣನವರ ಚರಿತ್ರೆ ಬರೆದಿರುವ ಲೇಖಕ ಪುಟ ೪೪,೪೫,೪೬ರಲ್ಲಿ
ಅಂತಿಮ ದಿನ ಕುರಿತು ಅತ್ಯಂತ ಅಸಹ್ಯಕರವಾದ ವಿಕೃತ ಚಿತ್ರಣ ನೀಡಿರುವನು.

ಬಸವರ ನೋಟ'' ಎಂಬ ಕೆಟ್ಟ ಪುಸ್ತಕದಿಂದ ಆಯ್ದಭಾಗ

''ಬಸವ ಮುಕ್ತವಾದ ಕಲ್ಯಾಣದಲ್ಲಿ ಅಸಹಾಯಕ ಬಿಜ್ಜಳನು ಪ್ರಬಲರಾಗಿ ಹೋದ ಕೊಂಡಯರ ಕಾಟ ತಾಳಲಾರದೆ ಹೋದನು. ಜಾತಿವರ್ಣಕುಲ ಆಶ್ರಮಗೋತ್ರ ನಾಮಗಳನ್ನು ತ್ಯಜಿಸಿ ಭಕ್ತರಾಗಿ ರಕ್ತಸಂಬಂಧಗೈದ ಶರಣರ ಮೇಲೆ ವರ್ಣಾಶ್ರಮವಾದಿ ಅರಸ ಬಿಜ್ಜಳನು ವರ್ಣಸಾಂಕರ್ಯದ ಹುಸಿ ಅಪರಾಧವನ್ನು ಹೊರೆಸಿದನು. ಆ ನಿಜ ಶರಣರ ಕಣ್ಣು ಕೀಳಿಸಿದನು. ಎಳೆಹೂಟೆಯ ದಂಡವನ್ನು ವಿಧಿಸಿ ಕ್ರೂರವಾಗಿ ಕೊಲ್ಲಿಸಿಬಿಟ್ಟನು. ಬಸವರ ಕರುಣಾಜನಕದ ನಿರ್ಗಮನದಿಂದಲೇ ತಪ್ತರಾಗಿ ಹೋಗಿದ್ದ ಬಸವಭಕ್ತಾಭಿಮಾನಿಗಣಂಗಳು ಎಳೆಹೂಟೆಯ ಪ್ರಸಂಗವನ್ನು ಪ್ರಬಲವಾಗಿ ಪ್ರತಿಭಟಿಸಿದರು. ಇಂತಹ ಅವಕಾಶಕ್ಕಾಗಿಯೆ ಹನ್ನೆರಡು ವರ್ಷಗಳಿಂದ ಸರ್ಪಮತ್ಸರವಿಡಿದು ಹೊಂಚುಕಾಯುತ್ತಿದ್ದವರೂ ಚಾಳುಕ್ಯ ಚಕ್ರವರ್ತಿಯ ನಿಷ್ಠದೂತರೂ ಆಗಿದ್ದವರು ಶತ್ರು ಬಿಜ್ಜಳನನ್ನು ನಿರ್ದಯೆಯಿಂದ ಕೊಂದುಹಾಕಿದರು. ಬಿಜ್ಜಳಹತ್ಯೆಯ ಆಪಾದನೆಯನ್ನು ನಿರಪರಾಧಿ ಬಸವ ಭಕ್ತಾಭಿಮಾನಿಗಳ ಮೇಲೆ ದುರುಳ ವರ್ಣಾಶ್ರಮಾದಿಗಳು ಆಪಾದಿಸಿದರು. ಬಿಜ್ಜಳಾಭಿಮಾನಿಗಳು ಬಸವಾಭಿಮಾನಿಗಳನ್ನು ಹಾಡುಹಗಲಲ್ಲೇ ಬೆನ್ನಟ್ಟಿ ಬೇಟೆಯಾಡಿದರು. ಶಾಂತಿಯ ಹೊಳೆ

ಹರಿದ ಕಲ್ಯಾಣ ನಿರಪರಾಧಿ ಶರಣರ ರಕ್ತದ ಓಕುಳಿಯಲ್ಲಿ ಕೆಸರಾಗಿ ಹೋಯಿತು.

ಈ ದುರಂತ ವಾರ್ತೆಯನ್ನು ಕೇಳಿತಿಳಿದು ಮಾನಸಿಕವಾಗಿ ದೈಹಿಕವಾಗಿ ಜರ್ಝರಿತರಾಗಿ ಹೋದ ಬಸವರು ಬಿಜ್ಜಳನಿಲ್ಲದ ಕಲ್ಯಾಣದಲ್ಲಿ ನೀಲಾಂಬಿಕೆ ಇರಲಾಗದೆಂದು ನಿಶ್ಚಯಿಸಿ ವೇಳೆವಾಳಿ ಆಪ್ತರಾದ ಹಡಪದ ಅಪ್ಪಣ್ಣಗಳ ಮೂಲಕ ನೀಲಾಂಬಿಕೆಗೆ ಕಲ್ಯಾಣವನ್ನು ತ್ಯಜಿಸಿ ಸಂಗಮಕ್ಕೆ ಬರಲು ನಿರೂಪ ಕಳಿಸಿದರು.

ಅತ್ತ ಬಸವರ ನಿರ್ಗಮನ; ಇತ್ತ ಸಾಕು ಅಣ್ಣ ಬಿಜ್ಜಳನ ನಿರ್ದಯ ಹತ್ಯೆ; ನಿರಪರಾಧಿ ಶರಣರ ಹತ್ಯೆ; ಕಲ್ಯಾಣಕ್ರಾಂತಿಗಳಿಂದ ಧೃತಿಮತಿಗಳು ಜರ್ಝರಿತವಾಗಿ ಹೋದ ನೀಲಾಂಬಿಕೆ ತಾಯಿ ಕೂಡಲಸಂಗಮದಲ್ಲಿದ್ದ ತಮ್ಮ ನಿಜಪುರುಷ ಮಹಾನುಭಾವಿ ಬಸವರೂ ತಮ್ಮಂತೆಯೆ ದುಸ್ಥಿತಿಯಲ್ಲಿಯೇ ಧೃತಿಮತಿಗೆಟ್ಟು ಹೋಗಿರುವರೆಂಬ ದುರ್ವಾರ್ತೆಯನ್ನು ವೇಳೆವಾಳಿ ಆಪ್ತ ಹಡಪದ ಅಪ್ಪಣ್ಣರಸರಿಂದ ಕೇಳಿತಿಳಿದು ಎದೆಯೊಡೆದು ಸಿದ್ಧರಾಮರ ಸಾಕ್ಷಿಯಲ್ಲಿ ಬಯಲಾಗಿ ಹೋದರು.

ಈ ದುರಂತ ಪರಂಪರೆಗಳಿಗೆ ತಾತ್ಕಾಲಿಕ ವಿರಾಮವನ್ನು ಕೊಡದಿದ್ದರೆ ಇನ್ನೂ ಮಹಾಪ್ರಮಾದ ಉಂಟಾಗಿ ಬಸವರ ಅಪೂರ್ವ ಪ್ರಸಾದಕಾಯ ಅಕಾಲದಲ್ಲಿಯೆ ಅಳಿದು ಹೋಗುವುದೆಂದು ಭಯಗೊಂಡ ಸಿದ್ಧರಾಮರು ಮುಂದಿನ ಕರ್ತವ್ಯಗಳ ಬಗೆಗೆ ಹಡಪದ ಅಪ್ಪಣ್ಣಗಳಿಗೆ ಸೂಚನೆಯಿತ್ತು ಕೂಡಲಸಂಗಮದಲ್ಲಿದ್ದ ತಮ್ಮ ಪರಮಶಿಷ್ಯ ಆಪ್ತ ಗುಡ್ಡರುಗಳಿಗೆ ನಿರೂಪದ ಓಲೆಯನ್ನು ಇತ್ತು ಕಳುಹಿಸಿದರು.

ಹಡಪದ ಅಪ್ಪಣ್ಣಗಳು ಕೂಡಲಸಂಗಮಕ್ಕೆ ಬಂದಾಗ ಭಯವಿಹ್ವಲರಾಗಿ ಹೋದರು. ಮಹಾಸಿದ್ಧವೈದ್ಯರೂ, ರಾಜತಂತ್ರನಿಪುಣರೂ ಆಗಿದ್ದ ಸಿದ್ಧರಾಮರ ಊಹೆ ನಿಜವಾಗಿ ಹೋಗಿತ್ತು. ಬಸವರನ್ನು ಕೊಂದು ಹಾಕಲೆಂದು ವರ್ಣಾಶ್ರಮವಾದಿದುರುಳರಿಂದ ಪ್ರಚೋದನೆಗೊಂಡ ಬಿಜ್ಜಳಾಭಿಮಾನಿಗಳು ಕಲ್ಯಾಣದಿಂದ ಕೂಡಲಸಂಗಮದತ್ತ ಬರತೊಡಗಿದ್ದರು. ಪ್ರಿಯಸತಿ ನೀಲಾಂಬಿಕೆಯು ಬಯಲಾಗಿ ಹೋದ ದಾರುಣವಾರ್ತೆಯನ್ನು ಅಪ್ಪಣ್ಣಗಳಿಂದ ಕೇಳಿ ಬಸವರ ಚಿತ್ತ ದೇಹಗಳು ಮತ್ತಷ್ಟು ಜರ್ಝರಿತವಾಗಿ ಹೋದವು.

ಬಸವರ ಪರಮ ಆಪ್ತ ಹಡಪದ ಅಪ್ಪಣ್ಣಗಳು ಸಿದ್ಧರಾಮರು ನೀಡಿದ್ದ ಸುದೀರ್ಘ ಅರಿವಳಿಕೆಯ ಮದ್ದನ್ನು ಆಹಾರದಲ್ಲಿತ್ತು ಬಸವರ ನೆನಹನ್ನು ಸ್ತಂಭನಗೈದು ಕಳೆದರು. ಕೂಡಲಸಂಗಮದಲ್ಲಿದ್ದ ಸಿದ್ಧರಾಮರ ಪರಮ ಆಪ್ತರಾದ ಗುಡ್ಡರುಗಳು ಸಿದ್ಧರಾಮಾದೇಶದಂತೆ ತೀವ್ರವಾಗಿ 'ವಾಹಿಗೊಟ್ಟಿಗೆ' ತೆಪ್ಪವೊಂದನ್ನು ಗುಪ್ತವಾಗಿ ಸಿದ್ಧಗೊಳಿಸಿ ಆಷಾಢದ ಭೀಮಕರಾಳರಾತ್ರಿಯಲ್ಲಿ ಭೋರ್ಗರೆಯುವ ಕೃಷ್ಣೆಗೆ ಇಳಿಸಿದರು. ಹಡಪದ ಅಪ್ಪಣ್ಣಗಳು ಅರಿವಳಿದ ಬಸವರನ್ನು ಜಾಣನಾವಿಕರಾದ ಗುಡ್ಡರುಗಳ ನೆರವಿನಲ್ಲಿ ತೆಪ್ಪಕ್ಕೇರಿಸಿ ಸಿದ್ಧರಾಮಾದೇಶದಂತೆ ಗುಪ್ತವಾಗಿ ಕೃಷ್ಣಾನದಿಯ ಪಾತ್ರದಲ್ಲಿ ಶ್ರೀಶೈಲಾಭಿಮುಖವಾಗಿ ಸಾಗಿದರು.

ಅನತಿ ಕಾಲದಲ್ಲಿ ವಾಹಿಗೊಟ್ಟಿಗೆಯು ಕೃಷ್ಣೆಯಲ್ಲಿ ಶ್ರೀಶೈಲದ ಕೊಳ್ಳವನ್ನು ತಲುಪಿದಾಗ ಗುಡ್ಡರುಗಳ ನೆರವಿನಿಂದ ಹಡಪದ ಅಪ್ಪಣ್ಣರಸರು ಅರಿವಳಿದ ಬಸವರನ್ನು

ದುರ್ಗಮ ಕದಳಿಯ ವನದಲ್ಲಿ ಗುಪ್ತವಾಗಿದ್ದ ಸಿದ್ಧರಾಮರ 'ಮಳೆಯ ಮಠ'ಕ್ಕೆ ಹೊತ್ತೊಯ್ದು ಆರೈಕೆಗೈದರು.

ಇತ್ತ ಕೂಡಲಸಂಗಮದಲ್ಲಿಯೇ ಉಳಿದಿದ್ದ ಸಿದ್ಧರಾಮರ ಮಿಕ್ಕುಳಿದ ಗುಡ್ಡರುಗಳ ಪ್ರಬಲಪ್ರಮಾದವಾರ್ತೆಗಳಿಂದ ಕೂಡಲಸಂಗಮದಲ್ಲಿ 'ಕೃಷ್ಣೆಯಲ್ಲಿ' ಬಸವರು ಲಿಂಗೈಕ್ಯವಾದರೆಂದೂ ಬಸವರ ಪರಮಾಪ್ತ ವೇಳೆವಾಳಿ ಹಡಪದ ಅಪ್ಪಣ್ಣರಸರೂ ಬಸವರೊಂದಿಗೆ ಬಯಲಾಗಿ ಹೋದರೆಂದೂ ಕೂಟಸುದ್ದಿ ಹಬ್ಬಿಸಿದರು.

ಬಸವರು ಕೂಡಲಸಂಗಮದಲ್ಲಿ ಬಯಲಾಗಿ ಹೋದ 'ಕೂಟವಾರ್ತೆ' ಮಿಂಚಿನ ವೇಗದಲ್ಲಿ ಜಗದ್ವಿಖ್ಯಾತವಾಗಿ ಹೋಯಿತು. ಬಸವರನ್ನು ಮೊಟ್ಟಮೊದಲು ಕಾಣಲೆಂದು ಬರುತ್ತಿದ್ದ ಬಸವಪರಮಾನುಯಾಯಿ ಮಲ್ಲಿಕಾರ್ಜುನ ಪಂಡಿತಾರಾಧ್ಯದೇವರೂ ಮಾರ್ಗಮಧ್ಯದ ವಹ್ನಿಪುರದಲ್ಲಿ ಈ ವಾರ್ತೆಯನ್ನು ಕೇಳಿ ಚರಮಗೀತೆಯನ್ನು ಬಸವರಿಗೆ ಅರ್ಪಿಸಿ ಪ್ರಯಾಣವನ್ನು ಅಲ್ಲಿಗೆ ಕೊನೆಗೊಳಿಸಿದ್ದು ಜಗದ್ವಿಖ್ಯಾತವಾಗಿ ಹೋಯಿತು.

ಎಲ್ಲರನ್ನೂ ಎಲ್ಲವನ್ನೂ ಮರೆತು ಹೋದ ಬಸವರು ಹಡಪದ ಅಪ್ಪಣ್ಣಗಳ ಸುಶೂಷ್ರೆಯಲ್ಲಿ ಸಿದ್ಧರಾಮರ ಜೊತೆಯಲ್ಲಿ ಸುದೀರ್ಘಕಾಲ ನೆನಪಳಿದು ಮಳೆಯ ಮಠದಲ್ಲಿ ವಿಶ್ರಾಂತಿಗೊಂಡರು. ಉಳಿವೆಯ ದುರ್ಗಮಾರಣ್ಯದಿಂದ ಚನ್ನಬಸವರೂ ಮಡಿವಾಳಮಾಚರಸಾದಿಗಳೂ ಶ್ರೀಶೈಲಕ್ಕೆ ಆಗಿಂದಾಗ ಬಂದು ಬಸವರನ್ನು ಸುಶ್ರೂಷೆಗೈಯತೊಡಗಿದರು. ಸಿದ್ಧರಾಮರ ಆಸೆ ಕೊನೆಗೂ ಪೂರೈಸಲಿಲ್ಲ. ಬಸವಧರ್ಮಕ್ಕೆ ಅನುಕೂಲವಾದ ಕಾಲದೇಶಗಳು ಸುದೀರ್ಘಕಾಲ ಆಗದೆ ಹೋದಕಾರಣ ನೆನಪಳಿದ ಬಸವರು ಮುಪ್ಪಿಂದ ಒಪ್ಪವಳಿದು ಸಿದ್ಧರಾಮರ ಮಳೆಯ ಮಠದಲ್ಲಿ ಸಹಜನಿಷ್ಪತ್ತಿಗೊಂಡು ಮಹಾಬಯಲಿನಲ್ಲಿ ಬಯಲಾಗಿ ಹೋದರು.

ಪ್ರಶ್ನೆಗಳು

ಇಡೀ ಪುಸ್ತಕದಲ್ಲಿ ಎಣಿಸಲು ಅಸಾಧ್ಯವಾಗುವಷ್ಟು ತಪ್ಪಿವೆ. ಆಯ್ದ ಭಾಗದಿಂದ ಹುಟ್ಟುವ ಸಂದೇಹಗಳಿವು.

೧. ತಾಯಿ ನೀಲಾಂಬಿಕೆ ಕಲ್ಯಾಣದಲ್ಲಿ ಲಿಂಗೈಕ್ಯಳಾದಳೇ? ಅತ್ಯಂತ ಸ್ಪಷ್ಟ ಸಾಕ್ಷಿಯಾಗಿ ತಾಯಿ ನೀಲಾಂಬಿಕೆಯ ಗದ್ದುಗೆಯು ಕೂಡಲಸಂಗಮ ಸಮೀಪದ ತಂಗಡಗಿ ಗ್ರಾಮದಲ್ಲಿರುವಾಗ, ದ್ರೋಹಿ ಗಿರಿರಾಜನು ಕಲ್ಯಾಣದಲ್ಲಿಯೇ ಎದೆಒಡೆದು ಬಯಲಾದರೆಂದು ಬರೆದು ಅಪಚಾರ ಮಾಡಿದ್ದಾನೆ. ಲಿಂಗೈಕ್ಯ ಪದ ಬಳಸಿಲ್ಲ. ಶರಣರು ಮಹಾತ್ಮರು ಲಿಂಗೈಕ್ಯರಾಗುತ್ತಾರೆ. ಶರಣರು ಎಂದೂ ಎದೆಗುಂದಿದವರಲ್ಲ. ಶರಣರಿಗೆ 'ಎದೆಒಡೆದು' ಎಂಬ ಶಬ್ದ ಬಳಸಿದ್ದು ಅಕ್ಷಮ್ಯ ಅಪರಾಧ.

ನೀಲಾಂಬಿಕಾದೇವಿ ಕಲ್ಯಾಣದಿಂದ ಕೂಡಲ ಸಂಗಮದತ್ತ ಪಯಣಿಸಿ ತಂಗಡಗಿಯ ಬಳಿ ಕೃಷ್ಣಾತೀರದಲ್ಲಿ ಬೀಡುಬಿಟ್ಟು, ಬಸವಣ್ಣನವರು ಲಿಂಗೈಕ್ಯರಾದ ವಾರ್ತೆ ತಿಳಿದು, ನಂತರ ತಾನೂ ಸುಪ್ರಸಿದ್ಧ ಗೀತೆ 'ನೋಡು ನೋಡು ಲಿಂಗವೇ' ಹಾಡಿ, ಲಿಂಗೈಕ್ಯಳಾದುದು ನಿರ್ವಿವಾದದ ಸಂಗತಿಯಾಗಿರುವಾಗ, ಗಿರಿರಾಜನಿಂದ ಕುಚೋದ್ಯದ ಕಥೆ ಹೆಣೆಸಿದ

ಶಿವಮೂರ್ತಿ ಸ್ವಾಮಿಗಳ ಐತಿಹಾಸಿಕ ಪ್ರಜ್ಞೆ ಪ್ರಜ್ಞಾವಂತರನ್ನು ನಾಚಿಸುವಂತಿದೆಯಲ್ಲವೆ ?

೨. ಹಲವಾರು ಘಟನೆಗಳಿಂದ ನೊಂದ ಬಸವಣ್ಣನವರು ಅತ್ಯಂತ ದುರ್ಬಲರಾಗಿ ಮಾನಸಿಕ ಆಘಾತಕ್ಕೆ ಮನೋವೈಕಲ್ಯಕ್ಕೆ ಒಳಗಾದರೆಂಬಂತೆ ನೀಚ ಲೇಖಕ ಚಿತ್ರಿಸಿದ್ದಾನೆ.

೩. ಮಹಾಜ್ಞಾನಿ ಬಸವಣ್ಣನವರ ಚಿತ್ತಸಮತೆಯನ್ನರಿಯಲಾರದ ಮೂರ್ಖ ಗಿರಿರಾಜ, ಈ ರೀತಿ ಬರೆಸಿ ಬಸವಣ್ಣನವರಿಗೆ ಅವಮಾನ ಮಾಡಿಸಿರುವ ಶಿವಮೂರ್ತಿ ಸ್ವಾಮಿ ಬಸವಣ್ಣನವರಿಗೆ ಅರಿವಳಿಕೆಯ ಮದ್ದನ್ನು ಆಹಾರದಲ್ಲಿತ್ತು ಬಸವಣ್ಣನವರ ನೆನಪನ್ನು ಸ್ತಂಭನಗೈಯಲು ಸಿದ್ಧರಾಮರು ತಂತ್ರ ಹೂಡಿದಂತೆ ಚಿತ್ರಿಸಿ ಮಹಾಜ್ಞಾನಿ ಬಸವಣ್ಣನವರ, ಮದ್ದು ತಿನ್ನಿಸಿದ ಹಡಪದ ಅಪ್ಪಣ್ಣನವರ, ಮದ್ದು ಕೊಟ್ಟ ಸಿದ್ಧರಾಮೇಶ್ವರರ, ಎಲ್ಲರ ಗೌರವಕ್ಕೆ ಚ್ಯುತಿ ತಂದಿದ್ದಾನೆ.

ಜಗತ್ತಿಗೆ ವಿಶ್ವ ಸಂದೇಶವನ್ನು ಸಾರಿದ ಮಂತ್ರಪುರುಷ ಬಸವಣ್ಣನವರು ತಮ್ಮ ಪತ್ನಿ ನೀಲಾಂಬಿಕಾದೇವಿಯವರ ನಿಧನವಾರ್ತೆ ಕೇಳಿ ಪ್ರಜ್ಞಾಶೂನ್ಯರಾಗುವಂಥವರಲ್ಲ . ಏಕೆಂದರೆ ಪ್ರಧಾನ ಮಂತ್ರಿಗಳಾಗಿದ್ದ ಬಸವಣ್ಣನವರು ಮಹಾನ್ ಧೈರ್ಯಶಾಲಿಗಳು. ನಾಳೆ ಬಪ್ಪುದು ನಮಗಿಂದೇ ಬರಲಿ, ಮರಣವೇ ಮಹಾನವಮಿ ಎಂದು ಸಾರಿದವರು. ಅವರ ಬಗ್ಗೆ ಚಿತ್ತಸಮತೆ ಕಳೆದುಕೊಂಡರೆಂದು ಧೃತಿಮತಿಗೆಟ್ಟವರೆಂದು ಬರೆದಿರುವುದು ಮೂರ್ಖತನದ ಪರಮಾವಧಿ ಹಾಗೂ ತೀವ್ರ ಖಂಡನೀಯ.

೪. ಕುತಂತ್ರಿಯಾದ ಶಿವಮೂರ್ತಿ ಸ್ವಾಮಿ ಗಿರಿರಾಜನ ಬರಹದ ಮೂಲಕ ಯಾವುದೇ ಐತಿಹಾಸಿಕ ಆಧಾರವಿಲ್ಲದೆ ಬಸವಣ್ಣನವರನ್ನು ಶ್ರೀಶೈಲಕ್ಕೆ ಕರೆದೊಯ್ದಿದ್ದಾರೆ. ಅವರನ್ನು ಅರಿವಳಿದ ಪ್ರಜ್ಞಾಶೂನ್ಯ ಸ್ಥಿತಿಯಲ್ಲಿ ಇಟ್ಟು ಶ್ರೀಶೈಲದಲ್ಲಿ ಬಯಲಾಗುವಂತೆ ಮಾಡಿದ್ದಾರೆ.

೫. ಕೂಡಲ ಸಂಗಮವು ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನವೆಂದು ಕರ್ನಾಟಕ ಸರಕಾರವು ಬೃಹದಾಕಾರದ ಕೊಳವೆ ಭಾವಿ ಕಟ್ಟಿಸಿ, 'ಬಸವ-ಲಿಂಗೈಕ್ಯ ಮಂಟಪ'ವನ್ನು ರಕ್ಷಿಸಿದೆ. (ಅದೇ ರೀತಿ ನೀಲಾಂಬಿಕಾ ತಾಯಿಯ ಐಕ್ಯಮಂಟಪವನ್ನು ಸಂರಕ್ಷಿಸಿದೆ) ನೀಲಾಂಬಿಕಾ ತಾಯಿಯ ಐಕ್ಯಮಂಟಪ ಸಂದರ್ಶನಕ್ಕಾಗಿ ಕೋಟಿಗಟ್ಟಳೆ ವೆಚ್ಚದ ಬೃಹತ್. ಸೇತುವೆಯನ್ನು ನಿರ್ಮಾಣಮಾಡಿದೆ. ಕೂಡಲ ಸಂಗಮವು ಬಸವಣ್ಣನವರ ಐಕ್ಯಕ್ಷೇತ್ರವೆಂದು ಅದರ ಅಭಿವೃದ್ಧಿಗಾಗಿ ಕೋಟಿಗಟ್ಟಳೆ ವೆಚ್ಚದ ಯೋಜನೆ ಸಿದ್ಧಪಡಿಸಿದೆ. ಅಂದಾಗ ಇವೆಲ್ಲವೂ ಈಗ ವ್ಯರ್ಥ ಮತ್ತು ಅರ್ಥರಹಿತ ಶ್ರೀ ಶಿವಮೂರ್ತಿ ಸ್ವಾಮಿಗಳ ದೃಷ್ಟಿಯಲ್ಲಿ; ಏಕೆಂದರೆ ಅವರು ಬರೆಸಿದ ಕಟ್ಟುಕಥೆ ಪ್ರಕಾರ ಬಸವಣ್ಣನವರು ಶ್ರೀಶೈಲದಲ್ಲಿ ಲಿಂಗೈಕ್ಯರಾಗಿದ್ದಾರೆ.

೬. ತಾಯಿ ನೀಲಾಂಬಿಕೆಯು ಶರಣ ಹಡಪದ ಅಪ್ಪಣ್ಣನವರ ಜೊತೆ ತಂಗಡಗಿಗೆ ಬಂದು, ಬಸವಣ್ಣನವರು ಲಿಂಗೈಕ್ಯರಾದ ವಾರ್ತೆ ತಿಳಿದು, ತಾನೂ ಲಿಂಗೈಕ್ಯಳಾಗುತ್ತಾಳೆ. ನಂತರ ಲಿಂಗೈಕ್ಯರಾದ ಹಡಪದ ಅಪ್ಪಣ್ಣನವರ ಗದ್ದುಗೆ ಸಹ ಅದೇ ತಂಗಡಗಿಯಲ್ಲಿ ನೀಲಾಂಬಿಕಾ ತಾಯಿಯ ಗದ್ದುಗೆಯ ಪಕ್ಕದಲ್ಲಿದೆ. ತಂಗಡಗಿ ಗ್ರಾಮದಲ್ಲಿಯೇ ಲಿಂಗೈಕ್ಯರಾದರೆಂಬುದಕ್ಕೆ ಶರಣರ ವಚನಗಳು ಮತ್ತು ಕಾಲಜ್ಞಾನ ವಚನಗಳು ದಾಖಲೆಯಾಗಿವೆ, ಜನಪದ ಗೀತೆಗಳು ರೂಢಿಯಲ್ಲಿವೆ. ಈ ಎಲ್ಲಾ ಐತಿಹಾಸಿಕ ಸಾಕ್ಷಿಗಳನ್ನು ಧಿಕ್ಕರಿಸಿ ದ್ರೋಹಿ ಶಿವಮೂರ್ತಿಸ್ವಾಮಿ

ಕುಟಿಲ ಲೇಖಕ ಗಿರಿರಾಜನ ಕೈಲಿ ಇತಿಹಾಸಕ್ಕೆ ವಿರುದ್ಧವಾದ ವಿಕೃತ ಚಿತ್ರಣ ನೀಡಿಸಿದ್ದಾರೆ.

೭. ಹಡಪದ ಅಪ್ಪಣ್ಣನವರು ಶ್ರೇಷ್ಠ ಶರಣರು. ಹುಟ್ಟಿದ್ದು ನಾಪಿತ, ಕ್ಷೌರಿಕ, ಹಡಪದವರೆಂದು ಕರೆಯಲ್ಪಡುವ ಜನಾಂಗದಲ್ಲಿ. ಕುತಂತ್ರಿಗಳಾದ ಲೇಖಕ ಗಿರಿರಾಜ, ಪ್ರಕಾಶಕ ಶಿವಮೂರ್ತಿಸ್ವಾಮಿ ಹಡಪದ ಅಪ್ಪಣ್ಣನವರನ್ನು ಬ್ರಾಹ್ಮಣರಲ್ಲಿ ಹುಟ್ಟಿಸಿ ಕೇವಲ ಹಡಪದ ಜನಾಂಗಕ್ಕೆ ಮಾತ್ರವಲ್ಲ ಯಾರು ಬೇಕಾದರೂ ಗುರು, ಶರಣ, ಜಂಗಮ-ರಾಗಬಹುದೆಂದು ಸಾರುವ ಶರಣ ಪರಂಪರೆಗೆ ಅಪಚಾರ ಮಾಡಿದ್ದಾರೆ. ಲಿಂಗವಂತರೇ, ಇನ್ನಿತರ ಪ್ರಾಜ್ಞ ಜನರೇ ಏಳಿ , ಎಚ್ಚರಾಗಿ; ಈ ಶರಣ ದ್ರೋಹಿಗಳಿಗೆ, ಬಸವ ದ್ರೋಹಿಗಳಿಗೆ ಬುದ್ಧಿ ಕಲಿಸಿರಿ. ಧೂರ್ತ ಮಠಾಧೀಶರಿಂದ ಬಸವ ಗುರುವನ್ನು ರಕ್ಷಿಸಿರಿ.

ವೀರ ಗಣಾಚಾರಿ ಶ್ರೀಕಂಠಕುಮಾರ್, ೨೪೩/೩ ಎಂ.ಎಸ್. ಟಿಂಬರ್ ಡಿಪೋ ಹಿಂದೆ ೧ನೇ ಮೆಯಿನ್, ೩ನೇ ಫೇಸ್, ಮಂಜುನಾಥ ನಗರ, ಬಸವೇಶ್ವರ ನಗರ, ಬೆಂಗಳೂರು-೫೬೦೦೧೦

ಶರಣ ಮೇಳದಲ್ಲಿ ಚಿಂತನ ಮಂಥನ ಮತ್ತು ಆಟ ಓಟಗಳು

''ಶರಣ ಮೇಳದಲ್ಲಿ ಕೂಡಿ ಹಾಡಿ ಪಾಡಿ ನಲಿವೆವು'' ಎಂಬ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬರೆದ ಗೀತೆಯ ಅಂತರಾರ್ಥವನ್ನು ಅಳವಡಿಸಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

೧. **ಸಾಂಸ್ಕೃತಿಕ ಕಾರ್ಯಕ್ರಮ :** ರಾತ್ರಿ ೧೦ ಗಂಟೆಯ ನಂತರ ಮಹಾಮನೆಯ ಆವರಣದಲ್ಲಿ ಮೇಳದಲ್ಲಿ ಭಾಗವಹಿಸುವ ಶರಣ ಬಂಧುಗಳಿಗೆ ತಮ್ಮ ವಿಶೇಷ ಕಲಾವಂತಿಕೆಯನ್ನು ಪ್ರದರ್ಶಿಸುವ ಅವಕಾಶ ಕಲ್ಪಿಸಲಾಗುವುದು. ವಚನ ಗಾಯನ, ಶರಣ ಸಂಸ್ಕೃತಿಗೆ ಸಂಬಂಧಿಸಿದ ರೂಪಕ ಪ್ರದರ್ಶನ, ಏಕಪಾತ್ರಾಭಿನಯ ಇವುಗಳಿಗೆ ಅವಕಾಶ ಕಲ್ಪಿಸಲಾಗುವುದು.

೨. **ಚಿಂತನ ಮಂಥನ (ರಸ ಪ್ರಶ್ನೆ)**- ಬಸವಧರ್ಮ-ಸಾಹಿತ್ಯ -ಸಂಸ್ಕೃತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲಾಗುವುದು. ದಿ. ೧೨, ೧೩, ೧೪ ರ ರಾತ್ರಿ ೧೦ ಘಂಟೆಯ ಸಮಯದಲ್ಲಿ ಈ (ಕ್ವಿಜ್) ರಸಪ್ರಶ್ನೆ ನಡೆಸಿ, ದಿ: ೧೫-೧-೧೯೯೭ರಂದಿನ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ನೀಡಲಾಗುವುದು. ಪ್ರವೇಶ ಶುಲ್ಕ ಒಬ್ಬರಿಗೆ ೫ ರೂ. ವಿವಿಧ ರಾಷ್ಟ್ರೀಯ ಬಸವ ದಳಗಳವರು ತಂಡಗಳನ್ನು ರಚಿಸಿ ಭಾಗವಹಿಸಬಹುದು.

೩. ದಿ. ೧೫-೧-೧೯೯೭ ರಂದು ಬೆಳಿಗ್ಗೆ ೧೦-೩೦ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು ಪೀಠಿಕೆ ಮತ್ತು ಅಲ್ಪಕಾಲದ ಆಶೀರ್ವಚನದ ನಂತರ, ಮುಕ್ತವಾದ **ಆಟಗಳ ಕಾರ್ಯಕ್ರಮವಿದೆ.** ಎಲ್ಲ ವಯಸ್ಸಿನ ಶರಣ ಬಂಧುಗಳೂ ಶರಣರೊಡನೆ ಆಡಿ, ಹಾಡಿ ನಕ್ಕು ನಲಿದು ಬೀಳ್ಕೊಂಡು ಹೋಗಬೇಕು. ಭಕ್ತಿಗೀತೆಗಳನ್ನು ಕೋಲಾಟ, ಭಜನೆ, ರೂಪದಲ್ಲಿ ಹಾಡಿ, ಕುಣಿದು ತೋರಿಸಬಹುದು.

-ಶರಣ. ಡಿ.ಎಸ್. ವಿಜಯಾನಂದರು, ಸಂಚಾಲಕರು

ಶರಣ ಮೇಳಕ್ಕೆ ಕಾರ್ಯಕರ್ತರನ್ನು ಕಳಿಸುವ ಬಗ್ಗೆ ರಾಷ್ಟ್ರೀಯ ಬಸವ ದಳದವರಿಗೆ ಸೂಚನೆ

ಶರಣ ಮೇಳ ಉತ್ಸವವು ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತಿರುವುದು ಸರಿಯಷ್ಟೆ. ಕಳೆದ ವರ್ಷ ೩.೧/೨ ಲಕ್ಷಕ್ಕೂ ಮೀರಿ ಜನರು ಸಮಾವೇಶಗೊಂಡು ಶರಣ ಮೇಳಕ್ಕೆ ಮೆರಗು ನೀಡಿದರು. ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು/ಸ್ವಯಂ ಸೇವಕರು ನಿಷ್ಠಾವಂತರಾಗಿ ಹಗಲಿರುಳು ದುಡಿದು, ಶರಣ ಮೇಳದ ಯಶಸ್ಸಿಗೆ ಕಾರಣರಾದರು. ಪ್ರತಿವರ್ಷದಂತೆ ಈ ವರ್ಷವೂ ಸಹ ರಾಷ್ಟ್ರೀಯ ಬಸವ ದಳದವರು ಕಡ್ಡಾಯವಾಗಿ ತಮ್ಮ ಸ್ಥಳೀಯ ಘಟಕದಿಂದ ಕಾರ್ಯಕರ್ತರನ್ನು ಕಳಿಸುವ ವ್ಯವಸ್ಥೆ ಮಾಡಬೇಕು. ಸ್ವಯಂ ಸೇವಕರಿಗೆ ಊಟ ವಸತಿಗಳನ್ನು 'ಶರಣ ಮೇಳ' ಉತ್ಸವ ಸಮಿತಿ'ಯು ನೋಡಿಕೊಳ್ಳುವುದು. ಆದರೆ ಅವರಿಗೆ ಕೂಡಲಸಂಗಮಕ್ಕೆ ಹೋಗಿ ಬರುವ ಖರ್ಚನ್ನು (ಅವರು ಬಡತನದಲ್ಲಿದ್ದು ಅಪೇಕ್ಷಿಸಿದರೆ) ಆಯಾ ರಾಷ್ಟ್ರೀಯ ಬಸವದಳದವರೇ ಭರಿಸತಕ್ಕದ್ದು. ಸ್ವಯಂ ಸೇವಕರು ಕೂಡಲಸಂಗಮಕ್ಕೆ ದಿನಾಂಕ ೪-೧-೯೭ರ ಒಳಗೇ ಬರತಕ್ಕದ್ದು. ಪ್ರತಿವರ್ಷ ತಪ್ಪದೇ ಬರುವ ಕಾರ್ಯಕರ್ತರು ಅಥವಾ ಹೊಸದಾಗಿ ಸ್ವಯಂ ಸೇವಕರಾಗಿ ಬರುವವರು ತಮ್ಮ ಊರಿನ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರು/ಕಾರ್ಯದರ್ಶಿಯವರಿಂದ ಅಧಿಕೃತ ಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು.

ಬಸವ ಭಕ್ತರಿಂದ ಸೇವೆಗೆ ಕರೆ

ಕಾರ್ಯಕರ್ತರು/ಸ್ವಯಂ ಸೇವಕರನ್ನು ಹೊರತುಪಡಿಸಿ ಪ್ರತಿಯೊಂದು ರಾಷ್ಟ್ರೀಯ ಬಸವದಳದಿಂದ ಶರಣಮೇಳಕ್ಕೆ ಬರುವ ಎಲ್ಲಾ ಬಸವ ಭಕ್ತರು ಪವಿತ್ರ ಶರಣ ಮೇಳದಲ್ಲಿ ಕಿಂಚಿತ್ ಆದರೂ ಸೇವೆಯನ್ನು ಮಾಡಿಯೇ ತಮ್ಮ ಊರಿಗೆ ತೆರಳಬೇಕೆಂಬ ನಿಲುವನ್ನು ತಳೆಯಬೇಕು. ಕಳೆದ ವರ್ಷ ಧಾರವಾಡ ರಾಷ್ಟ್ರೀಯ ಬಸವದಳದ ಶರಣ ಶರಣೆಯರು ಈ ನಿಲುವು ತಳೆದು ಒಂದು ಹೊತ್ತಿನ ಪ್ರಸಾದವನ್ನು ಲಕ್ಷಾಂತರ ಜನಕ್ಕೆ ನೀಡಿ ಸೇವೆ ಸಲ್ಲಿಸಿದರು. ಇದರಂತೆ ಎಲ್ಲ ರಾಷ್ಟ್ರೀಯ ಬಸವ ದಳದವರೂ ತಮ್ಮ ಕರ್ತವ್ಯವೆಂಬಂತೆ ಸ್ವಲ್ಪವಾದರೂ ತನುವಿನ ಸೇವೆ ಸಲ್ಲಿಸಬೇಕು. ಅದಕ್ಕಾಗಿ ಈ ಬಾರಿ ಶರಣ ಮೇಳದಲ್ಲಿ ಸೇವೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದೇನೆಂದರೆ,

ಶರಣ ಮೇಳದ ಪ್ರಸಾದವನ್ನು ನೀಡುವ ಕಾರ್ಯ ದಿನಾಂಕ ೧೨ರಿಂದ ೧೫ರವರೆಗೆ ನಿರಂತರವಾಗಿ ನಡೆಯುತ್ತಲಿರುವುದು ಸರಿಯಷ್ಟೆ. ಪ್ರತಿದಿನ ಬೆಳಿಗ್ಗೆ ೭ರಿಂದ ೧೨ರವರೆಗೆ, ಮಧ್ಯಾಹ್ನ ೧೨ರಿಂದ ೫ರವರೆಗೆ ಸಂಜೆ ೫ರಿಂದ ರಾತ್ರಿ ೧೨ರವರೆಗೆ ಹೀಗೆ ಪ್ರಸಾದದ ವ್ಯವಸ್ಥೆ ನಡೆಯುವುದು.

ಈ ಸಂದರ್ಭದಲ್ಲಿ ಮೇಲೆ ಸೂಚಿಸಿದಂತೆ, ಬಸವ ಭಕ್ತರು ೪ ದಿನದ ಕಾರ್ಯಕ್ರಮದಲ್ಲಿ ಯಾವುದಾದರೂ ಒಂದು ದಿನ, ಒಂದು ಅವಧಿಗೆ ತಮ್ಮ ಸೇವೆಯನ್ನು ಸಲ್ಲಿಸಲು ಅನುವು ಮಾಡಿ ಕೊಡಲಾಗುವುದು. ಈ ರೀತಿ ಲಕ್ಷಾಂತರ ಬಸವ ಭಕ್ತರಿಗೆ ಪ್ರಸಾದ ನೀಡಿ ಸೇವೆ ಸಲ್ಲಿಸುವ ಅಪೂರ್ವ ಅವಕಾಶವನ್ನು ಈ ವರ್ಷದಿಂದ ಕಲ್ಪಿಸಿದ್ದೇವೆ. ಇದನ್ನು ಪ್ರತಿಯೊಂದು ರಾಷ್ಟ್ರೀಯ ಬಸವ ದಳದವರು ಒಪ್ಪಿಕೊಂಡು ಕೂಡಲೇ ತಮ್ಮ ಒಪ್ಪಿಗೆಯನ್ನು ಹಾಗೂ ಶರಣ ಮೇಳಕ್ಕೆ ಎಷ್ಟು ಜನ ಸೇವೆಗಾಗಿ ಬರುತ್ತಿದ್ದೀರಿ ಎಂಬುದನ್ನು ಬೇಗನೇ ನಮಗೆ ತಿಳಿಸತಕ್ಕದ್ದು. ಆಗ ನಾವು ತಮ್ಮ ಸೇವಾವಧಿ ಯಾವ ದಿನ ಹಾಗೂ ಯಾವ ಅವಧಿಯಲ್ಲಿ ಮಾಡಬೇಕೆಂದು ಮೊದಲೇ ಪತ್ರ ಬರೆದು ತಿಳಿಸುವೆವು. ಇದಕ್ಕೆ ಹೆಚ್ಚಿನ ಆಸಕ್ತಿ ತೋರುವಿರಾಗಿ ನಂಬುವೆವು.

ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು
ಪ್ರಧಾನ ಸಂಚಾಲಕರು, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ-೫೮೭೧೧೫, ಜಿಲ್ಲಾ-ಬಿಜಾಪುರ

ರಾಷ್ಟ್ರೀಯ ಬಸವ ದಳಗಳವರಿಂದ ಗುರು ವಂದನ ಮತ್ತು ಪಥ ಸಂಚಲನ

ಬಸವ ಕ್ರಾಂತಿ ದಿನದಂದು ದಿನಾಂಕ ೧೪-೧-೯೭ ಬೆಳಿಗ್ಗೆ ಧ್ವಜವಂದನ ಮತ್ತು ಪಥ ಸಂಚಲನ ಕಾರ್ಯಕ್ರಮವಿರುತ್ತದೆ. ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಧ್ವಜಾರೋಹಣ ನಂತರ ಬಸವ ಜ್ಯೋತಿ ಉದ್ದಿಪನವನ್ನು ಮಾಡಲಿದ್ದಾರೆ. ಬಸವ ಜ್ಯೋತಿ ದರ್ಶನದ ನಂತರ ಗುರುವಂದನ ಕಾರ್ಯಕ್ರಮವಿರುತ್ತದೆ. ಇದು ಶಿಸ್ತು ಮತ್ತು ಸಂಘಟನೆಗಳನ್ನು ಪ್ರದರ್ಶಿಸುವ ಮಹತ್ವದ ಸ್ಫೂರ್ತಿದಾಯಕ ಕಾರ್ಯಕ್ರಮ. ಆದ್ದರಿಂದ ಎಲ್ಲಾ ರಾಷ್ಟ್ರೀಯ ಬಸವ ದಳಗಳವರು ಸಾಲಾಗಿ ಬಿಳಿವಸ್ತ್ರವನ್ನುಟ್ಟು ಮೇಲೆ ಕಾವಿಯ ಸ್ಕಾರ್ಫ್‌ನ್ನು ಹೊದ್ದು ಈ ಗುರುವಂದನ ಮತ್ತು ಪಥಸಂಚಲನದಲ್ಲಿ ಭಾಗವಹಿಸಬೇಕು. ಪ್ರತಿ ರಾಷ್ಟ್ರೀಯ ಬಸವ ದಳದವರು ತಮ್ಮ ತಮ್ಮ ರಾಷ್ಟ್ರೀಯ ಬಸವ ದಳದ ಬ್ಯಾನರ್ ಸಿದ್ಧಪಡಿಸಿಕೊಂಡು ಬರಬೇಕು. ಇದನ್ನು ಸರಿಯಾಗಿ ಕಾಯ್ದಿಟ್ಟುಕೊಂಡು ಬೇರೆ ಕಾರ್ಯಕ್ರಮಗಳಲ್ಲಿಯೂ ಉಪಯೋಗಿಸಬಹುದು. ಬ್ಯಾನರಿನಲ್ಲಿ ಬರೆಸಬೇಕಾದ ವಿಷಯ ಹೀಗಿದೆ.



ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
ರಾಷ್ಟ್ರೀಯ ಬಸವ ದಳ,
ಶಿವಮೊಗ್ಗ
ಶರಣ ಮೇಳಕ್ಕೆ ಜಯವಾಗಲಿ



ಒಳ್ಳೆಯ ಕಲಾವಿದರು ಇದ್ದರೆ ಬಸವಣ್ಣನವರ ಭಾವಚಿತ್ರ ಒಂದು ಬದಿಗೆ, ಬಸವೇಶ್ವರ ಐಕ್ಯಮಂಟಪ ಇನ್ನೊಂದು ಬದಿಗೆ ಬರೆಸಬಹುದು. ಅಂಥ ಒಳ್ಳೆಯ ಕಲಾವಿದರು ಸಿಕ್ಕದೆ ಇದ್ದರೆ ಕೇವಲ ಅಕ್ಷರಗಳನ್ನು ಬಟ್ಟೆಯ ಬ್ಯಾನರಿನಲ್ಲಿ ಬರೆಸಿದರೂ ಸಾಕು.

ಪಥ ಸಂಚಲನದಲ್ಲಿ ಭಾಗವಹಿಸುವ ರಾಷ್ಟ್ರೀಯ ಬಸವ ದಳಗಳವರು ದಿನಾಂಕ ೧೨ ಮತ್ತು ೧೩. ರಂದು ನಮ್ಮ ಬಳಿ ಹೆಸರನ್ನು ಬರೆಸಿ ವಿವರಗಳನ್ನು ಪಡೆದುಕೊಳ್ಳಬಹುದು. ಯಾವುದೇ ಸಂಕೋಚವಿಲ್ಲದೆ ದೊಡ್ಡವರು-ಸಣ್ಣವರು ಎಲ್ಲರೂ ಸಹೋದರ ಭಾವನೆಯಿಂದ ಗುರುವಂದನ ಮತ್ತು ಪಥಸಂಚಲನದಲ್ಲಿ ಭಾಗವಹಿಸಬೇಕೆಂದು ಕೋರುವೆವು.

ಸ್ವಯಂ ಸೇವಕರ ಸೇವೆ

ಧರ್ಮಗುರುವಿನ ಸೇವೆಯನ್ನು ತನು-ಮನ-ಧನಗಳಿಂದ ಮಾಡಬೇಕಾದುದು ಅತ್ಯಂತ ಅಗತ್ಯ. ಆದ್ದರಿಂದ ತನು ದಾಸೋಹ ಮಾಡಲು ರಾಷ್ಟ್ರೀಯ ಬಸವ ದಳಗಳವರು ಹೆಚ್ಚು ಹೆಚ್ಚು ಸ್ವಯಂ ಸೇವಕರನ್ನು ಕಳಿಸುವುದು ಅಗತ್ಯವಿದೆ. ಈಗಾಗಲೇ ಶರಣ ಮೇಳದ ಅಚ್ಚುಕಟ್ಟು ಒಳ್ಳೆಯ ಹೆಸರು ಪಡೆಯಲು ನಿಸ್ವಾರ್ಥಿಗಳಾದ ತನು ದಾಸೋಹಿಗಳ 'ಕಾಯಸೇವೆ' ಯೇ ಕಾರಣ. ಆದ್ದರಿಂದ ಹೆಚ್ಚು ಹೆಚ್ಚು ಕಾರ್ಯಕರ್ತರನ್ನು ಕಳಿಸಲು ರಾಷ್ಟ್ರೀಯ ಬಸವ ದಳದವರು ಸಿದ್ಧತೆ ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||



ವಿಶ್ವಗುರು ಬಸವಣ್ಣ (ಕ್ರಿ.ಶ. 1134 ರಿಂದ 1196)

೮೦೦ ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯ ಶುಭಾಶಯಗಳೊಡನೆ

★ ಕಾಯಕವೇ ಕೈಲಾಸ ★

ದಯವಿಲ್ಲದ ಧರ್ಮವದೇವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ಹರ್ಷ ಟ್ರೇಡಿಂಗ್ ಕಂ.,

HARSHA TRADING CO.,

Ph: 3359260
Fax: 3306183

APPROVED BY STORES PURCHASE DEPARTMENT OF KARNATAKA

BASAVA KRUPA, No.10/67, 4th Block, Opp: M.E.I.Polytechnic, Rajajinagar, B'lore-10

Dealers/Distributors in: Office Stationery, Consumables, and peripherals of Computer, Telex, Fax, STD, Zerox, Electronic Typewriter, Drawing, Fine Art Materials and Complimentary Materials.